# ಪ್ರಸಾದ


ದ್ವೈಮಾಸಿಕ

ಸಂಪುಟ ೩೭ ಸಂಚಿಕೆ ೧

ಜನವರಿ–ಫೆಬ್ರವರಿ ೨೦೨೨



ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು



ಬೆಂಗಳೂರಿನ ಚನ್ನೇನಹಳ್ಳಿಯಲ್ಲಿರುವ ಜನಸೇವಾ ವಿಶ್ವಸ್ತ ಮಂಡಳಿ ಆಯೋಜಿಸಿದ್ದ ಪೂರ್ಣ ಮಂಡಲೋತ್ಸವವನ್ನು ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್‌ರವರು ಉದ್ಘಾಟಿಸಿದರು. ಶ್ರೀ ನಾ. ತಿಪ್ಪೇಸ್ವಾಮಿ, ಶ್ರೀ ದತ್ತಾತ್ರೇಯ ಹೊಸಬಾಳೆ, ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಪರಮಪೂಜ್ಯ ಜಗದ್ಗುರುಗಳವರು, ಶ್ರೀ ಸ್ವಾಮಿ ಮುಕ್ತಿದಾನಂದಜಿಯವರುಗಳಿದ್ದಾರೆ (26 ಡಿಸೆಂಬರ್ 2021)



ಕಲಬುರಗಿಯ ಬುದ್ಧ ವಿಹಾರಕ್ಕೆ ಪರಮಪೂಜ್ಯ ಜಗದ್ಗುರುಗಳು ಭೇಟಿ ನೀಡಿದ ಸಂದರ್ಭ. ಬುದ್ಧ ವಿಹಾರದ ಶ್ರೀ ಸಂಘಾನಂದ ಭಂತೇಜಿ ಹಾಗೂ ಶ್ರೀ ಜಯರಾಜ್ ಕಾಂಬ್ಳೆಯವರುಗಳಿದ್ದಾರೆ (7 ಜನವರಿ 2022)

# ಪ್ರಸಾದ

ಸಂಪುಟ 37 : ಸಂಚಿಕೆ 1 ಜನವರಿ–ಫೆಬ್ರವರಿ 2022

ಸಂಪಾದಕ

**ಪ್ರೊ. ಮಲೆಯೂರು ಗುರುಸ್ವಾಮಿ**

**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ
ಮೈಸೂರು 570 004




**ಸಂಸ್ಥಾಪಕರು**

ಶ್ರೀಮನ್ಮಹಾರಾಜ ರಾಜಗುರುತಿಲಕ ಪರಮಪೂಜ್ಯ

**ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು**

**ಅಧ್ಯಕ್ಷರು**

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು**

**ಸಂಪಾದಕ ಸಮಿತಿ**

ಡಾ. ಶ್ರೀ ಶರತ್‌ಚಂದ್ರ ಸ್ವಾಮಿಗಳು

ಡಾ. ಸಿ.ಜಿ. ಬೆಟಸೂರಮಠ

ಶ್ರೀ ಎಸ್.ಪಿ. ಮಂಜುನಾಥ್

ಡಾ. ಎನ್.ಎಸ್. ತಾರಾನಾಥ

ಡಾ. ಎನ್.ಎಂ. ತಳವಾರ್

ಡಾ. ಪ್ರೀತಿ ಶುಭಚಂದ್ರ

ಪ್ರೊ. ಮಲೆಯೂರು ಗುರುಸ್ವಾಮಿ (ಸಂಪಾದಕ)


ಸಾಹಿತ್ಯ, ಸಂಸ್ಕೃತಿ, ಕಲೆ, ಧರ್ಮ, ವಿಜ್ಞಾನ, ಶಿಕ್ಷಣ, ಆರೋಗ್ಯ ಮುಂತಾದ
ವಿಚಾರಪೂರ್ಣ ಲೇಖನಗಳಿಗೆ ಸ್ವಾಗತವಿದೆ

**ಬರಹಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರವು**

ಮುಖಪುಟ ಚಿತ್ರ

ಸುತ್ತೂರು ಶ್ರೀಕ್ಷೇತ್ರದಲ್ಲಿ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಧಾರ್ಮಿಕ ಆಚರಣೆಗಳು ಮತ್ತು ಬೆಳ್ಳಿ ರಥೋತ್ಸವ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ನೆರವೇರಿದವು. ಚಿತ್ರದಲ್ಲಿ ವಾಟಾಳು ಶ್ರೀಗಳವರು, ವಿವಿಧ ಮಠಗಳ ಮಠಾಧೀಶರು, ಹರಗುರು ಚರಮೂರ್ತಿಗಳು ಮತ್ತು ಭಕ್ತಾದಿಗಳಿದ್ದಾರೆ (30 ಜನವರಿ 2022)


**ದಶವಾರ್ಷಿಕ ಚಂದಾ : 500/- * ಬಿಡಿ ಪ್ರತಿ: 10/-**

## ಪರಿವಿಡಿ


ಗುರುವಾಣಿ 5

ಸಂಪಾದಕೀಯ 7

ಘನಲಿಂಗಿ ದೇವರ ಜೀವನ ಸಂದೇಶದ ಒಂದು ವಚನ 11
**ಡಾ. ಗೊ.ರು. ಚನ್ನಬಸಪ್ಪ**

ಭಕ್ತಿ – ಭಕ್ತಿಯ ಸಂಕಥನಗಳು 15
**ಡಾ. ಎನ್.ಎಂ. ಗಿರಿಜಾಪತಿ**

ವಚನ ಚಳವಳಿಯ ಗುರಿ : ಪರ್ಯಾಯ ಸಂಸ್ಕೃತಿ 24
**ಡಾ. ಸೀ.ಚ. ಯತೀಶ್ವರ**

ಉಡಿಯ ಲಿಂಗವ ಬಿಟ್ಟು ಗುಡಿಯ ಲಿಂಗಕ್ಕೆ
ಶರಣೆಂದವರಿಗೇನೆಂಬೆ?... 40
**ವೆಂಕಟೇಶ ಕೆ. ಜನಾದ್ರಿ, ಕನಕಗಿರಿ**

ವಾರ್ತಾವಿಹಾರ 47
**ಕುಮಾರಸ್ವಾಮಿ ವಿರಕ್ತಮಠ**

ಕೃತಿ–ಸ್ವೀಕೃತಿ 67

## ಮನವಿ

ಜೆಎಸ್‌ಎಸ್ ಮಹಾವಿದ್ಯಾಪೀಠದಿಂದ ಪ್ರಕಟಗೊಳ್ಳುತ್ತಿರುವ "ಪ್ರಸಾದ" ಸಂಚಿಕೆಯ ಕೆಳಕಂಡ ಪ್ರತಿಗಳು ನಮ್ಮಲ್ಲಿ ಲಭ್ಯವಿಲ್ಲದ ಕಾರಣ ತಮ್ಮ ಬಳಿ ಅಥವಾ ಯಾವುದಾದರೂ ಗ್ರಂಥಾಲಯದಲ್ಲಿ ಲಭ್ಯವಿರುವ ಬಗ್ಗೆ ತಿಳಿಸಿದರೆ, ಜೆರಾಕ್ಸ್ ಮಾಡಿಸಿಕೊಂಡು ತಮಗೆ ಹಿಂತಿರುಗಿಸಲಾಗುವುದು. ದಯಮಾಡಿ ಸಹಕರಿಸಿ.

| ಕ್ರ.ಸಂ. | ಪ್ರಕಟವಾದ ವರ್ಷ | ದೊರಕದೆ ಇರುವ ಪ್ರತಿಗಳು |
|---|---|---|
| 1. | 1966 | ಈ ವರ್ಷದ ಎಲ್ಲ ಸಂಚಿಕೆಗಳು |
| 2. | 1967 | ಮೂರನೇ ಸಂಚಿಕೆ |
| 3. | 1970 | ಒಂದನೇ ಸಂಚಿಕೆ |
| 4. | 1971 | 2, 3, 4ನೇ ಸಂಚಿಕೆಗಳು |
| 5. | 1972 | 1, 3, 4ನೇ ಸಂಚಿಕೆಗಳು |
| 6. | 1975 | ಮೂರನೇ ಸಂಚಿಕೆ |
| 7. | 1976 | ಮೂರನೇ ಸಂಚಿಕೆ |
| 8. | 1984 | ಒಂದನೇ ಸಂಚಿಕೆ |

ಸಂಪರ್ಕದ ಮೊಬೈಲ್ ನಂ. 9986137389, 9964161363

ಸಂಪಾದಕರು

# ಗುರುವಾಣಿ

ಇತ್ತೀಚಿನ ದಿನಗಳಲ್ಲಿ 'ವಸ್ತ್ರಸಂಹಿತೆ'ಯ ಗೊಂದಲ ನಾಡಿನ ವಿದ್ಯಾರ್ಥಿ ಸಮೂಹದಲ್ಲಿ ಬಹು ದೊಡ್ಡ ಗೊಂದಲಕ್ಕೆ ಕಾರಣವಾಗಿದ್ದು ಅವರ ತಿಳಿಗೊಳದಂತಹ ಭಾವಕೋಶ ಕಲುಷಿತಗೊಳ್ಳತೊಡಗಿರುವುದು ವಿಷಾದಕರ ಸಂಗತಿ. ಜ್ಞಾನಾಪೇಕ್ಷಿಯಾದವರ ನಿಜವಾದ ಗುರಿ ಜ್ಞಾನಾರ್ಜನೆಯಷ್ಟೇ ಆಗಿರಬೇಕು. ಉಳಿದೆಲ್ಲವೂ ಆನುಷಂಗಿಕ. ಇದು ಮೇಲುನೋಟಕ್ಕೆ ಕೇವಲ ಉಡುಪಿನ ವಿಷಯವಾಗಿದ್ದರೆ ಸಮಸ್ಯೆ ಇಷ್ಟು ಗೋಜಲಾಗುತ್ತಿರಲಿಲ್ಲ. ಬದಲಿಗೆ ಅದರ ಹಿಂದೆ ಬೇರೆಬೇರೆಯ ನೇತ್ಯಾತ್ಮಕ ಆಯಾಮಗಳೂ ಒಂದರೊಳಗೊಂದು ಗುಪ್ತವಾಗಿ ಸೇರಿಕೊಂಡು ಜ್ಞಾನಕ್ಷೇತ್ರವನ್ನು ಬಗ್ಗಡಗೊಳಿಸುತ್ತಿವೆ. ಇದರಿಂದ ಅಮೃತಪುತ್ರರಾಗಬೇಕಾದ ಯುವಚೇತನಗಳು ಈಗಲೇ ವಿಷಪೂರಿತ ವಾಗಿಬಿಟ್ಟರೆ, ತಮ್ಮ ತ್ಯಾಗ, ಬಲಿದಾನಗಳಿಂದ ಈ ರಾಷ್ಟ್ರವನ್ನು (ಹಾಗೆಯೇ ವಿಶ್ವವನ್ನು) ಕಟ್ಟಿದವರ ಕನಸುಗಳು ಏನಾದೀತು? ಪ್ರತಿಯೊಂದು ಗುಂಪು, ತಮ್ಮ ತಮ್ಮ ನಡುವೆ ಅಡ್ಡಗೋಡೆಗಳನ್ನು ನಿರ್ಮಿಸಿಕೊಂಡರೆ ವಿಶ್ವಮಾನವ ಪರಿಕಲ್ಪನೆ ಹೇಗೆ ತಾನೇ ಬಂದೀತು? ಬಟ್ಟೆಗಾಗಿ ಬಡಿದಾಡುವವರ ಬಾಳಬಟ್ಟೆ ಮೂರಾಬಟ್ಟೆಯಾಗುವುದು ಅವರನ್ನು ಪ್ರಚೋದಿಸುತ್ತಿರುವವರ ಕಣ್ಣಿಗೆ ಕಾಣುತ್ತಿಲ್ಲವೇಕೆ? ಇಂತಹ ಸಂದರ್ಭದಲ್ಲಿ ನಮಗೆ, ಇತ್ತೀಚೆಗೆ ತಾನೇ ನಮ್ಮನ್ನು ಅಗಲಿದ 'ಕನ್ನಡದ ಕಬೀರ'ರೆಂದೇ ಖ್ಯಾತರಾಗಿದ್ದ ವಿಜಯಪುರದ ಪದ್ಮಶ್ರೀ ಇಬ್ರಾಹಿಂ ಸುತಾರರವರು ನೆನಪಿಗೆ ಬರುತ್ತಾರೆ.

ಶ್ರೀ ಸುತಾರರವರು ಹೆಸರಿಗಷ್ಟೇ ಒಂದು ಧರ್ಮಕ್ಕೆ ಸೇರಿದವರಾಗಿದ್ದರು. ಆದರೆ ಅವರ ಹೃದಯ ಸರ್ವಜನಾಂಗವನ್ನೂ ತನ್ನ ಎದೆಯೊಳಗೆ ತುಂಬಿಕೊಂಡಿತ್ತು. ಅವರ ಇಡೀ ಬದುಕನ್ನೇ ಭಾವೈಕ್ಯತೆಯ ಪ್ರಚಾರಕ್ಕಾಗಿ ಮುಡುಪಿಟ್ಟಿದ್ದರು. ಕುರಾನ್ ಅನ್ನು ಅಧ್ಯಯನ ಮಾಡಿದ್ದಂತೆಯೇ ವೇದೋಪನಿಷತ್ತುಗಳನ್ನೂ ಅಷ್ಟೇ ಗಂಭೀರವಾಗಿ ಅಧ್ಯಯನ ಮಾಡಿದ್ದರು. ಶರಣರು, ದಾಸರು, ನಿಜಗುಣರು, ತತ್ವಪದಕಾರರು ಅವರ ವಾಗ್ವೈಖರಿಯಲ್ಲಿ ಪುನರ್ಜನ್ಮ ಪಡೆದಂತಿರುತ್ತಿದ್ದರು. ಅವರು ಕೇವಲ ಪ್ರವಚನಕಾರರು ಮಾತ್ರ ಆಗಿರಲಿಲ್ಲ, ಸಂತರ ಬದುಕನ್ನು ನಿರಂತರ ಅನುಸಂಧಾನ ಮಾಡುತ್ತಿದ್ದರು; ಹಾಗೆ ಸರಳವಾಗಿ ಬದುಕಿದ್ದರು ಕೂಡ. ಅವರ ಪ್ರವಚನದ ಭಾಷೆಯ ನಡುವೆ ಮಾತಿಗೆ ನಿಲುಕದ ಏನೋ ಒಂದು ವಿಶೇಷ ಧ್ವನಿ ಕೇಳುಗರ ಹೃದಯದೊಳಗೆ ಝೇಂಕರಿಸುತ್ತಿರುವಂತೆ ಭಾಸವಾಗುತ್ತಿತ್ತು. ನಿರ್ದಿಷ್ಟ ಗುರುವನ್ನು ಮೀರಿ 'ಈ ಲೋಕವೇ ನನ್ನ ಗುರು' ಎಂದು

ಅವರು ಆಗಾಗ ಹೇಳುತ್ತಿದ್ದರು; ಅಂತಹ ವಿನಮ್ರ ಗುಣ ಅವರದಾಗಿತ್ತು.

> ನಮ್ರತ್ವೇನೋನ್ನಮಂತ ಪರಗುಣಕಥನೈಃ ಸ್ವಾನ್ ಗುಣಾನ್ ವ್ಯಾಪಯಂತಃ।
> ಸ್ವಾರ್ಥಾನ್ ಸಂಪಾದಯಂತೋ ವಿತತ ಪೃಥುತರಾರಂಭಯತ್ನಾಃ ಪರಾರ್ಥೇ ॥
> (ನೀತಿಶತಕ, ಭರ್ತೃಹರಿ)

(ನಮ್ರತೆಯಿಂದ ಉನ್ನತಿ ಹೊಂದುತ್ತ, ಪರರ ಗುಣಗಳನ್ನು ಪ್ರಶಂಸಿಸುತ್ತ, ತನ್ನ ಗುಣಗಳನ್ನೂ ಪ್ರಕಾಶಪಡಿಸುತ್ತ, ಪರರಿಗಾಗಿಯೇ ವಿಶೇಷವಾಗಿ ಪ್ರಯೋಜನಗಳನ್ನು ಒದಗಿಸುವಂಥ ಮಹಾನುಭಾವರು ಪ್ರಪಂಚದಲ್ಲಿ ಸಿಗುವುದು ದುರ್ಲಭ). ಶ್ರೀ ಇಬ್ರಾಹಿಂ ಸುತಾರರವರು ಅಂತಹ ವಿಶೇಷ ಗುಣಗಳನ್ನು ಹೊಂದಿದ್ದ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು. ಸಮಾಜದಲ್ಲಿ ಭಾವೈಕ್ಯತೆಯನ್ನು ಸಾರುವ ಇಂತಹವರ ಸಂಖ್ಯೆ ಎಲ್ಲ ಕ್ಷೇತ್ರಗಳಲ್ಲಿಯೂ ಹೆಚ್ಚುಹೆಚ್ಚು ಕಂಡುಬರಬೇಕಾಗಿದೆ. ಅವರು ಪ್ರವಚನದ ನಡುವೆ ಹೇಳುತ್ತಿದ್ದ, ಅವರೇ ರಚಿಸಿದ ಒಂದು ಪದ್ಯ ಹೀಗಿದೆ.

ಎಲ್ಲ ಧರ್ಮದ ಮರ್ಮವು ಒಂದೇ
ಬಲ್ಲಿದ ಗುರುಗಳ ಬೋಧವು ಒಂದೇ

ನೆಲ ಜಲ ಒಂದೇ ಕುಲವೂ ಒಂದೇ
ಸಕಲ ಶಾಸ್ತ್ರಗಳ ಫಲವೂ ಒಂದೇ

ನೋಡುವ ಕಂಗಳು ಹಲವಾಗಿದ್ದರೂ
ಎದುರಿಗೆ ಕಾಣುವ ಸೃಷ್ಟಿಯು ಒಂದೇ

ಆಡುವ ಭಾಷೆ ಹಲವಾಗಿದ್ದರೂ
ಭಾಷೆಯ ಹಿಂದಿನ ಭಾವವೂ ಒಂದೇ

ನುಡಿಸುವ ವಾದ್ಯಗಳು ಹಲವಾಗಿದ್ದರೂ
ಎಲ್ಲರ ಸ್ವರ ಲಯ ತಾಲವೂ ಒಂದೇ

ಹರಿಯುವ ನದಿಗಳು ಹಲವಾಗಿದ್ದರೂ
ಸಾಗರ ಸೇರುವ ಗುರಿಯು ಒಂದೇ

ದೇವರು ಒಬ್ಬನೇ ಸೃಷ್ಟಿಯು ಒಂದೇ
ವರಗುರು ಬಸವನ ದೃಷ್ಟಿಯು ಒಂದೇ

ಇಂತಹವರ ಸಂತತಿ ಸಾವಿರವಾಗಲಿ, ಅವರು ನಂಬಿದ, ಬೋಧಿಸಿದ, ಅನುಸರಿಸಿದ ಶಾಶ್ವತ ಆದರ್ಶಗಳು ಎಲ್ಲರ ಮನೆಮನಗಳನ್ನೂ ಬೆಳಗುವಂತಾಗಲಿ.

**ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

# ಸಂಪಾದಕೀಯ

**'ಶಾಂ**ತಿ ಎನ್ನುವುದು ಕೇವಲ ಆದರ್ಶ, ನಿರಂತರ ಸಂಘರ್ಷವೇ ಮನುಕುಲದ ನಿಜವಾದ ಸ್ಥಿತಿ' ಎನ್ನುತ್ತಾರೆ ತತ್ವಜ್ಞಾನಿಯೊಬ್ಬರು. ಸಂಘರ್ಷ ಎನ್ನುವುದು ಎಂದಿಗೂ ಸರಳರೇಖಾತ್ಮಕವಾಗಿ ಇರುವುದಿಲ್ಲ. ಇದು ಅನೇಕ ಸ್ತರಗಳಲ್ಲಿ, ಅನೇಕ ಆಯಾಮಗಳಲ್ಲಿ ನಡೆಯುವ ಒಂದು ಮಥನ. ನಮ್ಮೊಳಗಿನ ಸಾತ್ವಿಕ ರಾಜಸ ತಾಮಸ ಶಕ್ತಿಗಳ ಸಂಘರ್ಷ ಅನಾದಿ ಕಾಲದಿಂದಲೂ ನಡೆದು ಬಂದೇ ಇದೆ. ಇದರಿಂದ ಏನಾದರೂ 'ಶಾಶ್ವತ ಒಳಿತು' ಆಗಿದೆಯೆ? ಹಾಗೆ ನೋಡಿದರೆ ಇಷ್ಟಕ್ಕಿಂತ ಅನಿಷ್ಟ ಪರಂಪರೆಗಳು ಘಟಿಸಿದ್ದೇ ಹೆಚ್ಚು. ಪ್ರಾಯಃ ದೇವತೆಗಳು, ರಾಕ್ಷಸರು ಸಮುದ್ರ ಮಥನ ಮಾಡಿದ್ದು ಇದಕ್ಕೊಂದು ದೊಡ್ಡ ರೂಪಕವಿರಬಹುದು. ಹೋಗಲಿ, ಅಮೃತ ಬಂದಾಗಲಾದರೂ ಅವರು ಎಲ್ಲರೂ ನೆಮ್ಮದಿಯಿಂದ ಸೇವಿಸಿ 'ಅಮರ'ರಾದರೇ? ಆಗಲೂ ಪ್ರಾರಂಭವಾಯಿತು. ಹೊಡೆದಾಟ! ತಾವು ಅಮೃತ ಸೇವಿಸಿ ಸಾವನ್ನು ಗೆದ್ದುಬಿಟ್ಟರೆ, ದೇವತೆಗಳು ನಮ್ಮನ್ನು ಏನೂ ಮಾಡಲಾರರು; ಅವರನ್ನು ಪದಚ್ಯುತರನ್ನಾಗಿ ಮಾಡಿ ತಾವು ಅವರಿಂದ ಪಾದಸೇವೆ ಮಾಡಿಸಿಕೊಂಡು ಮೆರೆಯಬಹುದು ಎನ್ನುವುದು ರಾಕ್ಷಸರ ವಿಕೃತ ಲೆಕ್ಕಾಚಾರ. ಅವರು ಸಂಯಮ, ಸಹಬಾಳ್ವೆಯ ಪರಿಕಲ್ಪನೆಯನ್ನು ತೊರೆದ ಕಾರಣಕ್ಕೆ ಸಮುದ್ರ ಮಥನದಿಂದ ಬಂದ ಅಮೃತವೂ ಅವರಿಗೆ ದಕ್ಕಲಿಲ್ಲ.

ಕೃಷ್ಣನ ಮಾತಿನಂತೆ ದುರ್ಯೋಧನ ಪಾಂಡವರಿಗೆ ಕೇವಲ ಐದು ಗ್ರಾಮಗಳನ್ನು ಕೊಟ್ಟುಬಿಟ್ಟಿದ್ದರೆ ಮಹಾಭಾರತ ಬೇರೆಯ ತಿರುವನ್ನೆ ಪಡೆದುಕೊಳ್ಳುತ್ತಿತ್ತು. ಆದರೆ ಅವನ ವಿಕೃತ ಮನಸ್ಥಿತಿ ದೇವವಾಣಿಯನ್ನೂ ಧಿಕ್ಕರಿಸಿತು. ಹದಿನೆಂಟು ಅಕ್ಷೋಹಿಣಿ ಸೈನ್ಯದ ಹೊಡೆದಾಟ ಭೂಮಿಯ ಒಡಲನ್ನು ರಕ್ತಸಿಕ್ತವನ್ನಾಗಿಸಿತು. ಕೃಷ್ಣನಿದ್ದೂ ಚರಿತ್ರೆಯಲ್ಲಿ ಕಪ್ಪು ಪುಟ ಉಳಿದೇ ಹೋಯಿತು!

ನಮ್ಮ ಕಾಲಮಾನದಲ್ಲಿಯೇ ಎರಡು ಮಹಾಯುದ್ಧಗಳು ನಡೆದುವು. 'ರತ್ನಗರ್ಭ' ವಸುಂಧರೆಯ ಮೇಲೆ ಕ್ಷಿಪಣಿಗಳು, ಬಾಂಬುಗಳು ಭೂತಾಯಿಗೇ ಗರ್ಭಪಾತವಾಗುವಂತೆ ಜಡಿಮಳೆಯಂತೆ ಸುರಿದವು. ಅದರ ಪರಿಣಾಮ ಇನ್ನೂ ಉಳಿದು ರಕ್ತದಾಹಿ ಮನುಷ್ಯನನ್ನು ಈಗಲೂ ಅಣಕಿಸುತ್ತಿದೆ. ಇಷ್ಟಾಗಿಯೂ 'ಮನುಜಮತ, ವಿಶ್ವಪಥ'ವಾಗಲೇ ಇಲ್ಲ. ಎಲ್ಲ

ರಾಷ್ಟ್ರಗಳೂ ಸೇರಿ ಅದಕ್ಕೊಂದು ಸಂಸ್ಥೆಯನ್ನೂ (ವಿಶ್ವಸಂಸ್ಥೆ) ಕಟ್ಟಿಕೊಂಡವು. ಇಷ್ಟೆಲ್ಲಾ ರಕ್ಷಣಾ ವ್ಯವಸ್ಥೆಯನ್ನು ಮಾಡಿಕೊಂಡ ಮೂಲ ಉದ್ದೇಶ 'ಬದುಕು, ಬದುಕಗೊಡು' ಎನ್ನುವದಷ್ಟೆ ಆಗಿದೆ. ಆದರೂ ಏನಾಯಿತು? ವಿಶ್ವದ 'ದೊಡ್ಡಣ್ಣ' ರೆನಿಸಿಕೊಂಡವರ ಹಮ್ಮುಬಿಮ್ಮುಗಳೇ ಮೇಲುಗೈಯಾಗತೊಡಗಿ, ಅಭಿವೃದ್ಧಿಯ ಕನಸು ಕಾಣುತ್ತಾ ಹೆಜ್ಜೆ ಇಡುತ್ತಿದ್ದ ರಾಷ್ಟ್ರಗಳು ತಮ್ಮ ತಾಳಕ್ಕೆ ತಕ್ಕಂತೆ ಕುಣಿಯಬೇಕು ಎನ್ನುವ ಎಚ್ಚರಿಕೆಯನ್ನು ನೀಡುತ್ತಾ, ತಮ್ಮ ವ್ಯಾಪಾರ ವಹಿವಾಟಿನ ಮಾರುಕಟ್ಟೆಯನ್ನು ವಿಸ್ತರಿಸಿಕೊಂಡು ಪರೋಕ್ಷ ಹಿಡಿತ ಸಾಧಿಸುವುದೇ ಅವರ ಗುರಿಯಾಯಿತು.

ಇದಕ್ಕೆ ಸದ್ಯದ ಒಂದು ಜ್ವಲಂತ ಉದಾಹರಣೆಯೆಂದರೆ 'ಉಕ್ರೇನ್'ನಂತಹ ಒಂದು ಪುಟ್ಟ ದೇಶವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ರಷ್ಯಾ ನಡೆಸುತ್ತಿರುವ ರಾಕ್ಷಸೀಯ ಸ್ವರೂಪದ ದಾಳಿ. ಪ್ರಾರಂಭದಲ್ಲಿ ಕೇವಲ ಸೈನ್ಯದ ಕೇಂದ್ರಗಳನ್ನು ನಾಶ ಮಾಡುವುದನ್ನು ತನ್ನ ಗುರಿಯಾಗಿಸಿಕೊಂಡಿದ್ದ, ರಷ್ಯಾ ಈಗ ನಾಗರಿಕರ ಆಸ್ತಿಗಳ ಮೇಲೆಯೂ ದಾಳಿ ನಡೆಸಿ ಅಲ್ಲಿನ ಬದುಕನ್ನು ಅಯೋಮಯ ಮಾಡಿ ಕೇಕೆ ಹಾಕುತ್ತಿದೆ. ಹಾಗೆ ನೋಡಿದರೆ ಉಕ್ರೇನ್‌ನ ಮಿಲಿಟರಿ ಶಕ್ತಿ ರಷ್ಯಾದ ಶಕ್ತಿಯ ಅರ್ಧದಷ್ಟೂ ಇಲ್ಲ. ಶತ್ರುವಿನ ಶಕ್ತಿಯ ಮಿತಿ ತಿಳಿದು ಬಿಟ್ಟರಂತೂ ಮೇಲೇರಿ ಬರುವವರ ಉನ್ಮಾದಕ್ಕೆ ಮಿತಿಮೇರೆಗಳಿರುವುದಿಲ್ಲ. ರಷ್ಯಾ ಈಗ ಅಂತಹ ಉನ್ಮಾದಕ್ಕೆ ಒಳಗಾಗಿದೆ. ಆರಂಭದಲ್ಲಿ ಉಕ್ರೇನ್ ಪರವಾಗಿ ಏನೆಲ್ಲಾ ಸಹಾಯ ಮಾಡುವ ಮಾತನಾಡುತ್ತಿದ್ದ ಅಮೆರಿಕ, ಬ್ರಿಟನ್, ಫ್ರಾನ್ಸ್, ಜರ್ಮನಿ ಮುಂತಾದ ದೇಶಗಳು ರಷ್ಯಾ ಮೇಲೆ ಆರ್ಥಿಕ ನಿರ್ಬಂಧ ಘೋಷಣೆ ಮಾಡಿದುವೇ ಹೊರತು ಮತ್ತಾವ ನೆರವನ್ನೂ ನೀಡಲು ಹಿಂಜರಿದವು. ಅಂತಾರಾಷ್ಟ್ರೀಯ ಸಂಬಂಧಗಳ ಹಿನ್ನೆಲೆಯಲ್ಲಿ ಅವರವರಿಗೆ ಅವರದೇ ಆದ ಲಾಭನಷ್ಟದ ಲೆಕ್ಕಾಚಾರಗಳಿರುತ್ತವೆ. ಇದರಿಂದ ಪುಟಿನ್ ಮತ್ತಷ್ಟೂ ಬಲಿಷ್ಠರಾದರು.

ಇಂತಹ ಯುದ್ಧಗಳು ನಡೆದಾಗ ಜನಸಾಮಾನ್ಯರ ಪಾಡು ಏನು ಎನ್ನವುದು ಅನುಭವಿಸಿದವರಿಗಷ್ಟೇ ತಿಳಿಯುವಂತಹುದು. ದೂರದರ್ಶನದಲ್ಲಿ ಅಲ್ಲಿನ ದೃಶ್ಯಗಳನ್ನು ನೋಡುತ್ತಿದ್ದರೆ, ನಮ್ಮೆಲ್ಲ ಕೊರತೆಗಳ ನಡುವೆಯೂ, ನಮ್ಮದು ಸ್ವರ್ಗಸದೃಶ ಬದುಕು ಎನಿಸುತ್ತದೆ (ಸ್ವರ್ಗದಲ್ಲಿ ಏನಿದೆ ಎನ್ನುವುದು ಮಾತ್ರ ಇದುವರೆವಿಗೂ ಯಾರಿಗೂ ತಿಳಿದಿಲ್ಲ–ಇದು ಸಹ ಆದರ್ಶ ಸುಖದ ಒಂದು ಪರಿಕಲ್ಪನೆ ಇದ್ದಿರಬಹುದು ಎಂದು ಕಾಣುತ್ತದೆ). ಅದನ್ನು ನೋಡುತ್ತಿದ್ದರೆ 'ಕೋಣನೆರಡುಂ ಹೋರೆ ಗಿಡುವಿಂಗೆ ಮಿತ್ತೆಂಬ' ರಾಘವಾಂಕನ ಹರಿಶ್ಚಂದ್ರ ಕಾವ್ಯದ ಮಾತು ನೆನಪಿಗೆ ಬರುತ್ತದೆ. ಬೆಂಕಿಯುಂಡೆಯನ್ನು ಉಗುಳುತ್ತಾ ಜನನಿಬಿಡ ಪ್ರದೇಶದ ಮೇಲೆ ಒಂದೇ ಸಮನೆ ಬೀಳುತ್ತಿರುವ ಕ್ಷಿಪಣಿಗಳು ಬಾಂಬ್‌ಗಳಿಂದ ತಪ್ಪಿಸಿಕೊಳ್ಳಲು ನಾಗರಿಕರು ದಿಕ್ಕಾಪಾಲಾಗಿ ಓಡುತ್ತಿರುವುದು, ಓಡಲಾರದ ವಯೋವೃದ್ಧರು, ಏನೂ ತಿಳಿಯದ ಹಸುಳೆಗಳ ಆಕ್ರಂದನ – ಇವೆಲ್ಲವನ್ನು ಗಮನಿಸಿದರೆ

ಮನುಷ್ಯನು ಏಕಾದರೂ ನಾಗರಿಕನಾದನೋ ಎನಿಸುತ್ತದೆ. ಹಿಂದೆ ಪ್ರಾಕೃತಿಕ ವಿಕೋಪಕ್ಕೆ ಸಿಕ್ಕಾಗ, ಕ್ರೂರ ಪ್ರಾಣಿಗಳು ಎದುರಾದಾಗ, ಜನ ತಮ್ಮನ್ನು ರಕ್ಷಿಸಿಕೊಳ್ಳಲು ದಿಕ್ಕಾಪಾಲಾಗಿ ಓಡುತ್ತಿದ್ದರು. ಆದರೆ ಇಂದು ಮನುಷ್ಯನನ್ನು ಕಂಡು ಮನುಷ್ಯರೇ ಬೆಚ್ಚಿ ಓಡುವಂತಹ ಸ್ಥಿತಿ ಉಂಟಾಗಿರುವುದು ಮನುಕುಲದ ದುರಂತ.

ಅಲ್ಲಿ ಸಿಕ್ಕಿ ಹಾಕಿಕೊಂಡಿರುವ ಭಾರತೀಯ ವಿದ್ಯಾರ್ಥಿಗಳ ಪರಿಸ್ಥಿತಿಯಂತೂ ಮನಕಲಕುವಂತಹುದು. ಕೇವಲ ಚಾಕಲೇಟ್ ತಿಂದುಕೊಂಡು, ಬರಿಯ ನೀರು ಕುಡಿದುಕೊಂಡು, ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಕಾಲಯಾಪನ ಮಾಡುತ್ತಿರುವ ನಮ್ಮ ಯುವಕ ಯುವತಿಯರ ಸ್ಥಿತಿ ಶೋಚನೀಯ. ಅದಕ್ಕಿಂತ ಹೆಚ್ಚಾಗಿ ಅಡಗುತಾಣಗಳ ಹೊರಗಡೆ ಬಾಂಬುಗಳು ನಿರಂತರವಾಗಿ ಸಿಡಿಯುತ್ತಿದ್ದು, ಯಾವ ಸಂದರ್ಭದಲ್ಲಿ ಯಾರು ಏನಾಗುತ್ತಾರೋ ಏನ್ನುವುದೇ ತಿಳಿಯದ ಸ್ಥಿತಿಯನ್ನು ಅವರು ಮಾಧ್ಯಮದವರ ಮುಂದೆ ಹೇಳುತ್ತಿರುವುದನ್ನು ಕಂಡಾಗ ನಮ್ಮ ಕಣ್ಣುಗಳಲ್ಲಿ ರಕ್ತ ಜಿನುಗಿದಂತಾಗುತ್ತದೆ.

ದಿನದಿನಕ್ಕೂ ಯುದ್ಧದ ಭೀಕರತೆ ಮತ್ತಷ್ಟು ಉಲ್ಬಣವಾಗುವ ಸ್ಥಿತಿಯೇ ಕಂಡುಬರುತ್ತಿದೆ. ಇತ್ತೀಚಿನ ವರದಿಗಳಂತೆ ರಷ್ಯಾದ ಸೈನಿಕರು ಅಮಾಯಕ ನಾಗರಿಕರನ್ನು ಅಕಾರಣವಾಗಿ ಕೊಲ್ಲಲು ಮನಸ್ಸು ಬಾರದೆ, ತಮ್ಮ ವಾಹನಗಳನ್ನು, ಶಸ್ತ್ರಾಸ್ತ್ರಗಳನ್ನು ತಾವೇ ನಾಶಮಾಡಿಕೊಂಡು, ತಾವು ನಿಸ್ಸಹಾಯಕರು ಎಂದು ಮೇಲಿನವರಿಗೆ ಹೇಳಿಕೊಂಡು ನಾಗರಿಕರನ್ನು ರಕ್ಷಣೆ ಮಾಡುತ್ತಿದ್ದಾರಂತೆ. ಮಾನವೀಯತೆ ಇನ್ನೂ ಜೀವಂತವಾಗಿದೆ ಎನ್ನುವುದಕ್ಕೆ ಇದು ಸ್ಪಷ್ಟ ಉದಾಹರಣೆ. ಮತ್ತೊಂದು ವರದಿಯಂತೆ 'ಪುಟಿನ್'ರವರ ಮಾನಸಿಕ ಸ್ವಾಸ್ಥ್ಯ ಸರಿಯಿಲ್ಲವಂತೆ, ಅವರ ಮನೋವಿಕಾರಕ್ಕೆ ಕೋವಿಡ್‌ನಿಂದ ಅವರು ಏಕಾಂತದಲ್ಲಿದ್ದುದೇ ಕಾರಣವಂತೆ. ಯುದ್ದ ಸಮಯದಲ್ಲಿನ ಈ ಮಾತುಗಳಲ್ಲಿ ತಥ್ಯ–ಮಿಥ್ಯಗಳು ಎಷ್ಟಿವೆಯೋ ತಿಳಿಯದು. 'ಅದೇನೆ ಇರಲಿ ಇಂದು ಯಾವುದೇ ಯುದ್ಧ ಕೇವಲ ಎರಡು ದೇಶಗಳ ಸಮಸ್ಯೆ ಮಾತ್ರವಾಗದೆ, ಅದು ಬೇರೆಬೇರೆ ಕಾರಣಗಳಿಗಾಗಿ ಬಹುರಾಷ್ಟ್ರಗಳ ಸಮಸ್ಯೆಯೂ ಆಗಿ ಬಿಡುವುದರಿಂದ ಎಲ್ಲರೂ ಇದನ್ನು ಗಂಭೀರವಾಗಿ ಚಿಂತಿಸಬೇಕಾಗಿದೆ. 'ಮಾನವ ಜನ್ಮ ದೊಡ್ಡದು, ಅದನ್ನು ಹಾನಿ ಮಾಡಿಕೊಳ್ಳಬೇಡಿ ಹುಚ್ಚಪ್ಪಗಳಿರಾ' ಎನ್ನುವ ಮಾತನ್ನು ಮತ್ತೆ ಮತ್ತೆ ಮನನ ಮಾಡಿ 'ಶಾಂತಿಪಥ'ದಲ್ಲಿ ನಡೆಯಬೇಕಾಗಿದೆ.

**ಮಲೆಯೂರು ಗುರುಸ್ವಾಮಿ**
**ಸಂಪಾದಕ**

# ತತ್ವಪದ

## ಯಮನೇಮ ಬೇಡ

ವೇದ ಬೇಡ ನಿನಗೆ ಶಾಸ್ತ್ರ ಬೇಡ
ಗೋಧಿಕಾಳಿನಷ್ಟು ಭಕ್ತಿಯಿದ್ದರೆ ಸಾಕು
ಆವಾವ ಉಪವಾಸ ಬೇಡ। ಅಡವಿ ಸೇರಬೇಡ
ಕಾವಿ ಕಮಂಡಲ ಧರಿಸಲು ಬೇಡ.

ಯೋಗ ಮಾಡಲು ಬೇಡ
ಯಮನೇಮವು ಬೇಡ
ಎಲ್ಲಿಗ್ಹೋಗದೆ ದೃಷ್ಟಿ
ಅಲ್ಲೆ ನಿಲ್ಲಿಸಿದರೆ ಸಾಕು.

ಮೂಗ ಹಿಡಿಯಲು ಬೇಡ
ಮುಖ ಬಿಗಿಯಲು ಬೇಡ
ಆದಿಯೊಂದಾದಿ ನೀರಲಿ
ಮುಳುಮುಳಗಲಿ ಬೇಡ.

ಎರಡು ದೃಷ್ಟಿಯು ಕೂಡಿ
ಇರಲಿರಲಿ ಬಂದೂ
ಶರೀರದೊಳಗೆ ಬಯಲಾಗಿ
ಅರುವು ಅಪ್ಪುವುದೊ.

ಅರುವಿಗೆ ಅರಿವುಂಟೋ
ಗುರುವಿಗೆ ಗುರುವುಂಟೋ
ಗುರು ಚಿದಾನಂದನ
ಗುರುತ್ತಿದ್ದರೆ ಸಾಕೋ.

**– ಚಿದಾನಂದ ಅವಧೂತರು**

**ಕೃಪೆ: ತತ್ವಪದಗಳು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ**

# ಘನಲಿಂಗಿ ದೇವರ ಜೀವನ ಸಂದೇಶದ ಒಂದು ವಚನ

**ಡಾ. ಗೊ.ರು. ಚನ್ನಬಸಪ್ಪ**

ಬಸವೋತ್ತರ ಯುಗದ ಮಹತ್ವದ ವಚನಕಾರರಲ್ಲಿ ಹದಿನಾರನೆಯ ಶತಮಾನದ ಪೂರ್ವೋತ್ತರದಲ್ಲಿದ್ದ ಘನಲಿಂಗಿ ದೇವರು ಒಬ್ಬರು. ಅವರು ಇತಿಹಾಸ ಪ್ರಸಿದ್ಧ ಶ್ರೀ ಸುತ್ತೂರು ವೀರಸಿಂಹಾಸನ ಮಠದ ಪರಂಪರೆಯ 13ನೆಯ ಪೀಠಾಧೀಶರೂ ಆಗಿದ್ದರು. ಅವರ ವಚನಗಳನ್ನು ಪರಮಪೂಜ್ಯ ಲಿಂ. ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿ ಅವರೇ ಸಂಪಾದಿಸಿ ಪ್ರಕಟಿಸಿದ್ದಾರೆ.

ಘನಲಿಂಗಿ ದೇವರ ಬಹುತೇಕ ವಚನಗಳನ್ನು, ಅವು ಆತ್ಮಾನುಸಂಧಾನದ ಭಾಷೆಯಲ್ಲೇ ಇರುವ ಕಾರಣದಿಂದಾಗಿ, ಅವನ್ನು ಅರ್ಥಮಾಡಿಕೊಳ್ಳಲು ಮತ್ತೆ ಮತ್ತೆ ಓದಬೇಕಾಗುತ್ತದೆ. ಅವುಗಳಲ್ಲಿ ಬೆಡಗಿನ ವಚನಗಳೂ ಸಾಕಷ್ಟಿವೆ. ಸಾಧಕನಿಗೆ ಇರಬೇಕಾದ ಆತ್ಮನಿರೀಕ್ಷೆಯ ಪ್ರಜ್ಞೆ, ಅವರ ವಚನಗಳಲ್ಲಿ ತುಂಬಿಕೊಂಡಿದೆ. ಷಟ್‌ಸ್ಥಲ ಸೋಪಾನವನ್ನು ಏರಲು ದಾರಿ ತೋರುವ ಅವರ ವಚನಗಳು ಸಾಮಾನ್ಯರಿಗೆ ಸುಲಭವಾಗಿ ನಿಲುಕುವುದಿಲ್ಲ ಎಂಬ ಮಾತೂ ಇದೆ.

ಘನಲಿಂಗಿ ದೇವರ ವಚನಗಳು 'ಕಠಿನ' ಎಂದು ಭಾವಿಸಿಯೋ ಏನೋ, ಅನೇಕ ಓದುಗರು ಅವುಗಳನ್ನು ಓದುವ ಗೋಜಿಗೇ ಹೋಗುತ್ತಿಲ್ಲ. ಸಾಮಾನ್ಯ ಓದುಗರಿರಲಿ, ವಚನಗಳನ್ನು ಕುರಿತು ಬರೆಯುವವರು, ಮಾತನಾಡುವವರೂ ಸಹ ಅವರ ವಚನಗಳನ್ನು ಉಲ್ಲೇಖಿಸುವುದು ಅಷ್ಟಾಗಿ ಕಾಣುತ್ತಿಲ್ಲ. ಅಂದಮಾತ್ರಕ್ಕೆ ಓದಿದ ತಕ್ಷಣವೇ ಹೃದಯದ ಬಾಗಿಲು ತೆರೆಯುವಂತಹ ವಚನಗಳೇ ಇಲ್ಲವೆಂದಲ್ಲ. ಅಂತಹ ಒಂದು ಸರಳ ವಚನವನ್ನು ನಾವಿಲ್ಲಿ ಗಮನಿಸಬಹುದು.

ಆ ವಚನದ ಪೂರ್ಣಪಾಠ ಹೀಗಿದೆ:

> ಕೋಗಿಲೆ ಸರಗೈದಿತೆಂದು
> ಕಾಗೆ ಅದಕ್ಕೆ ಎದುರಾಗಿ ಕುಳಿತು ಕರ್ರೆಂದು ಕಟಕಿಯನಾಡಿದರೆ
> ಆ ಕೋಗಿಲೆಗಾದ ಕೊರತೆಯೇನಯ್ಯಾ?
> ಸೂರ್ಯಪ್ರಕಾಶವನುಳ್ಳವನನ್ನು ಕತ್ತಲೆಯ ಮೈಯವನೆಂದು
> ಹಗಲು ಕಣ್ಣು ಕಾಣದ ಗೂಗೆ ಕೆಟ್ಟು ನುಡಿದರೆ
> ಸೂರ್ಯನಿಗಾದ ಕೊರತೆಯೇನಯ್ಯಾ?

ಕನ್ನಡಿಗೆ ಮೂಗಿಲ್ಲವೆಂದು ಮೂಕೊರೆಯ ಹೇಳಿದರೆ,
ಆ ಕನ್ನಡಿಗಾದ ಕೊರತೆಯೇನಯ್ಯಾ?
ದ್ವೈತ ಅದ್ವೈತವ ನೂಂಕಿ, ಅಂಗ-ಲಿಂಗದ ಹೊಲಬನರಿದು,
ಸ್ವಯಂ ಲಿಂಗಿಯಾದ ಶರಣನ
ಅಂಗವಿಕಾರದ ಪಂಗುಳ ಮಾನವನು
ಜರಿದು ಝುಂಕಿಸಿ ನುಡಿದಡೆ
ಆ ಲಿಂಗಾನುಭವಿಗಾದ ಕೊರತೆಯೇನಯ್ಯಾ?
ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ!
(ಸ.ವ.ಸಂ.11, ವ-761, ಪು-374)

ಇದು ಸರಳ ವಚನವೆಂದು ಬೇರೆ ಹೇಳಬೇಕಾಗಿಲ್ಲ. ಇದರ ಅರ್ಥವಿವರಣೆಗೆ ಯಾರದ್ದೇ ಮಧ್ಯಸ್ಥಿಕೆ ಬೇಕಿಲ್ಲ. ಆದರೂ, ಸಾಧಕರಲ್ಲಿ ಆತ್ಮವಿಶ್ವಾಸ ತುಂಬಲು ಘನಲಿಂಗಿದೇವರು ನಿತ್ಯಾನುಭವದ ನಿದರ್ಶನಗಳನ್ನು ಕೊಟ್ಟಿರುವ ಪರಿ ಎಷ್ಟು ಪರಿಣಾಮಕಾರಿ ಎಂಬುದನ್ನು ನಾವು ಗಮನಿಸಬೇಕು.

ಕೋಗಿಲೆ ದನಿ ಮಾಡಿತೆಂದು, ಕಾಗೆ ಅದರ ಎದುರಿಗೇ ಕುಳಿತು ತಾನೂ ದನಿ ಮಾಡಿದರೆ ಅದು ಕರ್ರೆಂದು ಕೇಳಿಸುತ್ತದೆಯೇ ವಿನಃ, ಕೋಗಿಲೆಯ ದನಿಯ ಇಂಪು ಆ ಕಾಗೆಯ ದನಿಗೆ ಬರಲಾರದು. ಅದರಿಂದ ಕೋಗಿಲೆಗೆ ಆಗುವ ಕುಂದೇನು? ಸೂರ್ಯನ ಬೆಳಕನ್ನು ಹಗಲು ಕಣ್ಣು ಕಾಣದ ಗೂಗೆ, ಸೂರ್ಯ ಕಪ್ಪುಮೈಯವನು ಎಂದು ಹೇಳಿದರೆ, ಅದರಿಂದ ಸೂರ್ಯನಿಗೆ ಕುಂದೇನು? ಕನ್ನಡಿಗೆ ಮೂಗಿಲ್ಲವೆಂದು ಮೂಗಿಲ್ಲದವನು ನಿಂದಿಸಿದರೆ, ಕನ್ನಡಿಗಾದ ಕೊರತೆಯೇನು? ತನ್ನಲ್ಲಿ ಇಲ್ಲದ ಮೂಗು ಕನ್ನಡಿಯಲ್ಲಿ ಕಾಣಿಸಲು ಹೇಗೆ ಸಾಧ್ಯ? ಹಾಗೆಯೇ, ಅಂಗ-ಲಿಂಗ ಸಾಮರಸ್ಯದ ವಿಧಾನವನ್ನು ತಿಳಿದು, ಸ್ವಯಂ ಲಿಂಗವೇ ಆದ ಶರಣನನ್ನು ಕಂಡು ಮಾನಸಿಕವಾಗಿ ವಿಕಾರಿಯಾದ ಹೆಳವನೊಬ್ಬ ಜರಿದು ಅಣಕಿಸಿದರೆ, ಆ ಲಿಂಗಾನುಭಾವಿ ಶರಣನಿಗೆ ಆದ ಭಂಗವೇನು? ಇದು ಘನಲಿಂಗಿದೇವರ ವಚನದ ಒಟ್ಟು ಸಾರ.

ಘನಲಿಂಗಿದೇವರು ಕಂಡ ಅಂತಹ 'ಹೆಳವ'ರನ್ನು ಇಂದು ಲೆಕ್ಕವಿಲ್ಲದಷ್ಟು ಸಂಖ್ಯೆಯಲ್ಲಿ ಕಾಣಬಹುದು. ತಾವು ಏನನ್ನೂ ಮಾಡದೆ, ಮಾಡುವವರನ್ನು ಅಣಕಿಸುವುದು ಅಥವಾ ಆಡಿಕೊಳ್ಳುವುದೇ ಅಂಥವರ ಪ್ರವೃತ್ತಿ. ಲೋಕದ ಸ್ವಭಾವವೇ ಹೀಗೆ.

ಘನಲಿಂಗಿ ದೇವರ ಈ ವಚನ 12ನೆಯ ಶತಮಾನದ ಹಿರಿಯ ವಚನಕಾರ ಮಡಿವಾಳ ಮಾಚಯ್ಯನ ಒಂದು ವಚನವನ್ನು ನೆನಪಿಗೆ ತರುತ್ತದೆ:

"ಉಂಡಡೆ ಭೂತನೆಂಬರು, ಉಣದಿರ್ದಡೆ ಚಕೋರಿ ಎಂಬರು. ಊರೊಳಗಿರ್ದಡೆ ಸಂಸಾರಿಯೆಂಬರು. ಅಡವಿಯೊಳಗಿರ್ದಡೆ ಮರ್ಕಟನೆಂಬರು. ಮಾತನಾಡಿದಡೆ ಪಾಪಕರ್ಮಿಯೆಂಬರು; ಮಾತನಾಡದಿರ್ದಡೆ ಮುಸುಕರ್ಮಿಯೆಂಬರು. ಮಲಗದಿದ್ದಡೆ

ಚೋರನೆಂಬರು; ಮಲಗಿರ್ದೊಡೆ ಜಡದೇಹಿಯೆಂಬರು. ಇಂತೀ ವಸುಧೆಯೊಳಗೆ ಎಂಟು ವಿಧ ಕಳೆಯಲು ವಶವಲ್ಲ ಕಾಣಾ ಕಲಿದೇವರ ದೇವಾ"

ಈ ವಚನದ ಇನ್ನೊಂದು ಪಾಠದಂತಿರುವ ಚೆನ್ನಬಸವಣ್ಣನ ವಚನವೊಂದಿದೆ (ಸ.ವ.ಸಂ.–3, ಪು.603, ವ.1651). ಆ ಪಾಠ ಹೀಗಿದೆ: "ಸರ್ವಸಂಗ ಪರಿತ್ಯಾಗ ಮಾಡಿದ ಶಿವಶರಣನ ಲೋಕದ ಸಂಸಾರಿಗಳೆಂತು ಮೆಚ್ಚುವರಯ್ಯಾ? ಊರೊಳಗಿರ್ದಡೆ ಉಪಾಧಿಕನೆಂಬರು, ಅಡವಿಯೊಳಗಿರ್ದಡೆ ಮೃಗನೆಂಬರು. ಹೊನ್ನ ಬಿಟ್ಟಡೆ ದರಿದ್ರನೆಂಬರು, ಹೆಣ್ಣ ಬಿಟ್ಟಡೆ ನಪುಂಸಕನೆಂಬರು, ಮಣ್ಣ ಬಿಟ್ಟಡೆ ಪೂರ್ವಕರ್ಮಿ ಎಂಬರು, ಮಾತನಾಡದಿರ್ದಡೆ ಮೂಗನೆಂಬರು. ನಿಜವನಾಡಿದರೆ ನಿಷ್ಠುರಿ ಎಂಬರು, ಸಮತೆಯನಾಡಿದಡೆ ಅಂಜಿದನೆಂಬರು. ಇದು ಕಾರಣ ಕೂಡಲ ಚೆನ್ನಸಂಗಯ್ಯಾ, ನಿಮ್ಮ ಶರಣ ಲೋಕದಿಚ್ಛೆಯ ನುಡಿಯ, ಲೋಕದಿಚ್ಛೆಯ ನಡೆಯ".

ಈ ಎರಡು ವಚನಗಳಲ್ಲಿ ಕಂಡು ಬರುವ ಲೋಕ ಸ್ವಭಾವವನ್ನೇ ಘನಲಿಂಗಿದೇವರು ತಮ್ಮ ವಚನದಲ್ಲಿ ಕೋಗಿಲೆ, ಕಾಗೆ, ಸೂರ್ಯ, ಗೂಗೆ, ಕನ್ನಡಿ ಮೂಕೊರೆಯರ ರೂಪದಲ್ಲಿ ತಿಳಿಸಿದ್ದಾರೆ.

ಕೌಟುಂಬಿಕವಿರಲಿ, ಸಾಮಾಜಿಕವಿರಲಿ, ಧಾರ್ಮಿಕವಿರಲಿ, ರಾಜಕೀಯವಿರಲಿ ಅಥವಾ ಮತ್ತಾವುದೇ ಕ್ಷೇತ್ರವಿರಲಿ, ಒಬ್ಬರು ಇನ್ನೊಬ್ಬರ ಬಗೆಗೆ ಅಸೂಯೆಪಡುವ, ಅನುಚಿತವನ್ನು ಹುಡುಕುವ ಅಥವ ವ್ಯಂಗ್ಯವಾಗಿ ಅಣಕಿಸುವ ವ್ಯಕ್ತಿಗಳನ್ನು ಕಾಣುತ್ತೇವೆ. ಅಂತಹ ವ್ಯಕ್ತಿಗಳಿಗೆ ಸಾತ್ವಿಕರನ್ನು, ಸಭ್ಯರನ್ನು ನೋಡಿ ಸಹಿಸಲಾಗುವುದಿಲ್ಲ ಅಥವಾ ಜನಪ್ರೀತಿ ಗಳಿಸಿದವರನ್ನು ಅಥವಾ ತಮ್ಮಿಂದ ಆಗದೆ ಇರುವುದನ್ನು ಸಾಧಿಸಿದವರನ್ನು ಕಂಡಾಗ ಸಹಿಸಲಾಗುವುದಿಲ್ಲ. ಅದಕ್ಕೆ ಕಾರಣವೆಂದರೆ, ಕೇವಲ ಅಸಹನೆ ಮತ್ತು ತಮ್ಮಿಂದ ಅದು ಸಾಧ್ಯವಾಗದಿರುವ ಕೀಳರಿಮೆ.

ಅಂತಹ ಕುಹಕಿಗಳನ್ನು ಘನಲಿಂಗಿದೇವರು ತಮ್ಮ ವಚನದಲ್ಲಿ ಕೋಗಿಲೆಯನ್ನು ಅಣಕಿಸುವ ಕಾಗೆಗೆ, ಸೂರ್ಯನನ್ನು ಅಣಕಿಸುವ ಗೂಗೆಗೆ, ಕನ್ನಡಿಯನ್ನು ಅಣಕಿಸುವ ಮೂಗಿಲ್ಲದವನಿಗೆ ಹೋಲಿಸಿ, ಅಂಗ–ಲಿಂಗ ಸಾಮರಸ್ಯ ಮಾರ್ಗವನ್ನು ಕಂಡುಕೊಂಡು ಲಿಂಗಾನುಭಾವವನ್ನು ಪಡೆದ ಸಿದ್ಧಪುರುಷನನ್ನು ಅಣಕಿಸುವವರನ್ನು 'ಪಂಗುಳ ಮಾನವರು' ಎಂದು ಕರೆದಿದ್ದಾರೆ.

'ಪಂಗುಳ' ಎಂದರೆ ಕುಂಟ, ಹೆಳವ ಎಂಬರ್ಥಗಳಿವೆ. ಸ್ವತಃ ನಡೆಯಲಾರದ ವ್ಯಕ್ತಿ ನಡೆದಾಡುವವರನ್ನು ಕಂಡು ಜರಿದರೆ, ಅಣಕಿಸಿದರೆ ಆ ನಡೆದಾಡುವವನಿಗೆ ಆದ ಕುಂದೇನು? ಭಂಗವೇನು? ಅಂತಹ ಹೆಳವರ ಮಾತಿಗೆ ಕಿವಿಗೊಡಬೇಕಾದ ಅಗತ್ಯವಿಲ್ಲ. "ಆನೆಯ ಮೇಲೆ ಹೋಹನ ಶ್ವಾನ ಬೊಗಳಿದರೇನು?" ಎಂಬುದು ಶರಣರ ನಿಲುವು.

ಬಹುಶಃ ಘನಲಿಂಗಿ ದೇವರ ಇಷ್ಟಲಿಂಗಾನುಸಂಧಾನ ಮತ್ತು ಸಾಹಿತ್ಯಾನುಸಂಧಾನದ ಸಿದ್ಧಿಯನ್ನು ಕಂಡು, ಸಹಿಸಲಾಗದ ಕೆಲವು ಅಜ್ಞಾನಿಗಳು ಅಣಕವಾಡಿರಬೇಕು. ಅಂಥವರನ್ನು ಕಂಡು ಕೇಳಿಯೇ ಅವರು ಈ ವಚನ ರಚಿಸಿದ್ದಾರೆ. ಇಲ್ಲಿಗೆ ಸುಮಾರು 500 ವರ್ಷಗಳ ಹಿಂದೆ ಅವರು ಹೇಳಿದ ಮಾತುಗಳು ಇಂದಿನ, ಮತ್ತೆಂದಿನ ಸನ್ನಿವೇಶಕ್ಕೂ ಅನ್ವಯವಾಗುತ್ತವೆ ಎಂದು ಬೇರೆ ಹೇಳಬೇಕಾಗಿಲ್ಲ.

ಸಂಕಲ್ಪಬದ್ಧನಾದವನು, ತತ್ವನಿಷ್ಠನಾದವನು, ಅಂತರಂಗ ಅರಳಿದವನು ಅವರಿವರ ಮಾತಿಗೆ ಅಂಜಿ ಹಿಂಜರಿಯದೆ ಮುನ್ನಡೆಯಬೇಕೆಂಬುದು ಘನಲಿಂಗಿ ದೇವರ ಈ ವಚನದ ಸಂದೇಶ. ಇದು ಸಾರ್ವಕಾಲಿಕ ಲೋಕ ಸಂದೇಶ.

ಸುತ್ತೂರು ಶ್ರೀಕ್ಷೇತ್ರದ ಪರಂಪರೆಯಲ್ಲಿ ಇಂತಹ ಅನುಭಾವಿಗಳು ಇದ್ದರೆಂತಲೇ ಇಂದು ಶ್ರೀಕ್ಷೇತ್ರದ ಹೆಸರು ಜಾಗತಿಕವಾಗಿದೆ. ಸುತ್ತೂರು ಮಠದ ಸೇವೆಯ ವಿಸ್ತಾರ ಕಂಡು ಬೆರಗಾಗುವವರೂ ಇದ್ದಾರೆ. ಕರುಬುವವರೂ ಇರಬಹುದು. ಇಂದಿಗೂ ಶ್ರೀಕ್ಷೇತ್ರವು ಯಾವುದೇ ಸ್ತುತಿನಿಂದೆಗಳಿಗೆ ಗಮನಕೊಡದೆ ಲೋಕಸೇವೆಯ ಸಂಕಲ್ಪದಿಂದ ತನ್ನ ಸೇವೆಯನ್ನು ವಿಸ್ತರಿಸಿದೆ; ವಿಸ್ತರಿಸುತ್ತಿದೆ.

ವ್ಯಕ್ತಿಯಿರಲಿ, ಸಂಸ್ಥೆಯಿರಲಿ ತಮ್ಮ ಸೇವಾ ಪಥದಲ್ಲಿ ಮುನ್ನಡೆಯಲು ಘನಲಿಂಗಿ ದೇವರ ಈ ವಚನ ಆತ್ಮವಿಶ್ವಾಸದ ಅಂತರಾಳವಾಗುತ್ತದೆ.

□

ಜಂಗಮವೆನ್ನ ಪ್ರಾಣ, ಜಂಗಮವೆನ್ನ ಜೀವ
ಜಂಗಮವೆನ್ನ ಪುಣ್ಯದ ಫಲ,
ಜಂಗಮವೆನ್ನ ನಿಧಿ ನಿಧಾನ
ಜಂಗಮವೆನ್ನ ಹರುಷದ ಮೇರೆ
ಚನ್ನಮಲ್ಲಿಕಾರ್ಜುನಾ
ಜಂಗಮದ ತಿಂಥಿಣಿಯಲ್ಲಿ ಓಲಾಡುವೆನು.

**– ಅಕ್ಕಮಹಾದೇವಿ**

# ಭಕ್ತಿ – ಭಕ್ತಿಯ ಸಂಕಥನಗಳು

ಡಾ. ಎನ್.ಎಂ. ಗಿರಿಜಾಪತಿ

**ಭ**ಕ್ತಿ ಮನಶ್ಶಾಸ್ತ್ರಜ್ಞರ ಪ್ರಕಾರ ಮನುಷ್ಯನ ಮಾನಸಿಕ ಸ್ಥಿತಿ, ಹಾಗೆಯೇ ಧರ್ಮವೆನ್ನುವುದನ್ನು ಮನಶಾಸ್ತ್ರದಲ್ಲಿ ಬೌದ್ಧಿಕ ಸಂರಚನೆ ಎಂದು ವಿಶ್ಲೇಷಿಸಲಾಗಿದೆ, ಅಂದರೆ ಮನುಷ್ಯನಿಗೆ ಸಂಬಂಧಿಸಿದ ಯಾವುದೇ ಸಮಸ್ಯೆಗಳಿಗೂ ಧರ್ಮ ಸ್ಪಂದಿಸುವ ಗುಣಾಂಶಗಳಿಂದ ಕೂಡಿರುತ್ತದೆ, ಹಾಗಾಗಿ ಧರ್ಮವನ್ನು ಮನುಷ್ಯನ ರಕ್ಷಾ ಕವಚವೆಂದು ಸಹ ಪರಿಭಾವಿಸಲಾಗಿದೆ. ಈ ಧರ್ಮವಿದ್ದ ಮೇಲೆ ಅಲ್ಲೊಬ್ಬ ದೇವರು ಬೇಕು, ಆ ದೇವರು ಭಕ್ತಿ ಮೂಲದ ರೂಪಕ ಹಾಗೂ ಪ್ರತೀಕ. ಅದು ಏಕರೂಪದ ರೂಪವೂ ಅಲ್ಲ, ಪ್ರತಿಮಾತ್ಮಕವೂ ಅಲ್ಲದ 'ಯದ್ಭಾವಂ ತದ್ಭವತಿ' ಎನ್ನುವ ಮಾದರಿಯದ್ದು, ಅವರವರ ಭಾವನೆಗೆ ಸಂಬಂಧಿಸಿದ ಸಾಕಾರ, ಸಗುಣ, ನಿರಾಕಾರ, ನಿರ್ಗುಣ ಹೀಗೆ ಅನಂತ ಮತ್ತು ಅನನ್ಯ ಪರಿಕಲ್ಪನೆಗಳ ಲಯ ಭಕ್ತಿಯಲ್ಲಿ ಮೇಳೈಸುತ್ತವೆ. ಈ ಎಲ್ಲ ಜಿಜ್ಞಾಸೆಗಳನ್ನು ನಾವು ಇಂದು ಸಂಕಥನಗಳು ಎಂಬ ಪರಿಭಾಷೆಯ ಮೂಲಕ ಚರ್ಚೆಗೆ ಆಗುಮಾಡಿಕೊಳ್ಳಬಹುದು. ಇಲ್ಲಿ ಸಂಕಥನ ಎಂದರೆ ಆದ್ಯಂತಿಕ ವಿಶ್ಲೇಷಣೆ ಎಂದು ಪರಿಭಾವಿಸಬೇಕಿದೆ. ಭಕ್ತಿ ವಿಷಯವೆಂದರೆ ಅದು ಭಕ್ತಿಯ ಸಂಕಥನ, ಭಕ್ತಿಯ ಇತಿವೃತ್ತಗಳೊಡನೆ ನಡೆಸುವ ಅನುಸಂಧಾನ, ಇದಿರುಗೊಳ್ಳುವ ಪ್ರಜ್ಞೆಯ ಮೀಮಾಂಸೆ.[1] ಈ ಮೀಮಾಂಸೆಯಲ್ಲಿ ಪ್ರಧಾನವಾಗಿ ಭಕ್ತಿ, ಭಕ್ತ, ಭಕ್ತೆ, ಭಗವಂತ, ಮತ್ತು ಧರ್ಮ, ಧಾರ್ಮಿಕತೆ ಇತ್ಯಾದಿಯಾದ ಪದಗಳ ಸೃಷ್ಟಿ ಮತ್ತು ವಿಶ್ಲೇಷಣೆ, ಸ್ವರೂಪ, ಗುಣ ಲಕ್ಷಣ ಮತ್ತು ಪ್ರಕಾರಗಳ ಪರಾಮರ್ಶೆ, ಸಂಪ್ರದಾಯ, ಆಚರಣೆ ಕ್ರಮ, ವಿಧಿ ನಿಷೇಧ, ಪ್ರಮಾಣು ಇತ್ಯಾದಿಗಳು ಕಂಡು ಬರುತ್ತವೆ.

ಭಕ್ತಿಯೆಂದರೇನು? ಈ ಪ್ರಶ್ನೆಗೆ ಸಾಮಾನ್ಯ ಉತ್ತರ ಭಕ್ತನ ಭಕ್ತಿ, ಭಕ್ತನು ತೋರುವ, ಭಕ್ತನಲ್ಲಿ ಕಾಣಿಸುವ ನಡೆಯೇ ಭಕ್ತಿ, ಭಕ್ತನಾದವನು ಅನುಸರಿಸುವ ಮಾರ್ಗ, ಭಕ್ತನಾದವನು ಮಾಡುವ ಭಕ್ತಿ? ಹೀಗೆ ಒಟ್ಟಾರೆ ಭಕ್ತಿಯೆನ್ನುವುದು ಭಕ್ತನ ಮೂಲಕ ಪ್ರಕಟಗೊಳ್ಳುವ ಕ್ರಿಯಾವಿಧಿ, ಆ ಕ್ರಿಯೆ ಜ್ಞಾನದ ಮೂಲಕ ಪ್ರಚ್ಛನ್ನಗೊಂಡಿರುತ್ತದೆ. ಹಾಗಿದ್ದಲ್ಲಿ ಭಕ್ತಿ ಭಂಡಾರಿ ಬಸವಣ್ಣನವರು ಭಕ್ತಿಯೆಂಬುದು ಮಾಡಲಾಗದು? ಎಂದು ಹೇಳಿರುವ ಮಾತಿನ ಹಿನ್ನೆಲೆ ಏನು? ಈ ಪ್ರಶ್ನೆಗೆ ಉತ್ತರ ಸರಳವಲ್ಲ, ಕಾರಣ ಭಕ್ತಿಯೆಂಬುದು

ಮಾಡಲಾಗದು, ಹೌದು ಮಾಡಲಾಗದ, ಮಾಡಿದೆನೆಂದು ಹೇಳಲಾಗದ, ಹೇಳಲೂ ಬಾರದ ಆತ್ಮವ್ಯವಸಾಯ, ಜೀವನಾದವನು (ಮನುಷ್ಯ) ತಾನು ತನ್ನ ಆಯ್ಕೆಯ ದೇವನಲ್ಲಿ ಸಮರಸಗೊಳ್ಳುವ ಕ್ರಿಯೆ, ಅನುಸಂಧಾನಿಸುವುದರ ಮೂಲಕ ಪಡೆಯುವ ದಿವ್ಯಾನುಭೂತಿ, ಅದನ್ನು ಭಾಷೆಯ ಮೂಲಕ ಹಾಗೂ ಬರವಣಿಗೆಯ ಮೂಲಕ ವ್ಯಕ್ತಪಡಿಸಿದಲ್ಲಿ ಅದು ವ್ಯಕ್ತಪಡಿಸಿದವರ ಅನುಭವವವೇ ಹೊರತು ಓದಿದವರ, ಕೇಳಿದವರ ಅನುಭವವಾಗದು. ಭಕ್ತಿ ಭಾಷಾದೃಷ್ಟಿಯಿಂದ ನೋಡುವುದಾದಲ್ಲಿ 'ಭಕ್ತಿ' ಎನ್ನುವುದು ಸಂಸ್ಕೃತದ 'ಭಜ್' ಎಂಬ ಧಾತುವಿನಿಂದ ಟಿಸಿಲೊಡೆದ ರೂಪ, ವೈಯಾಕರಣಿಗಳ ಪರಿಭಾಷೆಯಲ್ಲಿ 'ಭಜ್ ಸೇವಾಯಾಮ್' ಎಂದು ಇದರ ನಿಷ್ಪತ್ತಿಯನ್ನು ಗುರುತಿಸಿದೆ. ಇದರರ್ಥ ಜ್ಞಾನ, ಬೆಳಕು, ಅರಿವು, ಸೇವೆ ಇತ್ಯಾದಿ., ಇಲ್ಲಿನ 'ಭ' ನಮ್ಮೊಳಗಿನ ಭಾವಗಳನ್ನು ಸಂಕೇತ, ಭಾವವೆಂದರೆ ಇರುವಿಕೆ, ಇರುವುದು ಎಂದರ್ಥ, ಮನಶ್ಶಾಸ್ತ್ರೀಯ ದೃಷ್ಟಿಯಲ್ಲಿ 'ಇರುವಿಕೆ ಎನ್ನುವುದು ಪರಸ್ಪರ ಮನುಷ್ಯರಲ್ಲಿನ ಒಟ್ಟಾರೆ ಸ್ವಭಾವಗಳು, ಗುಣಗಳು, ನಡವಳಿಕೆಗಳು, ವರ್ತನೆಗಳು ಎಂದರ್ಥ'. ಜೊತೆಗೆ ಇದೊಂದು ಕ್ರಿಯಾಸೂಚಿ ಮತ್ತು ಕ್ರಿಯಾವಾಚಿ ಪದ, ಹಾಗಾಗಿ ಭಕ್ತಿ ಎಂದರೆ ಭಗವಂತನ ಸೇವೆ ಮಾಡುವುದು. ಸೇವೆ ಇದು ಸ್ಥಗಿತಾರ್ಥ ಸ್ವರೂಪದ ಪ್ರಯೋಗವಲ್ಲ, ಅದೊಂದು ಚಲನಶೀಲ ಗುಣದ ಸ್ವಭಾವ ಮತ್ತು ನಡಾವಳಿ, ಪ್ರತಿನಿಧಿಸುವ ಪದ. ಇದರ ಸಾಮಾನ್ಯ ಅರ್ಥಜ್ಞಾನ, ಉಪಾಸನೆ, ಸೇವೆ, ಆರಾಧನೆ ಎನ್ನಲಾಗಿದೆ. ಅಂದರೆ ಮನುಷ್ಯನ ಮನಸ್ಸಿನಲ್ಲಿ ಉತ್ಪನ್ನವಾಗುವ ಪ್ರಜ್ಞೆ, ಅರಿವು, ಎಚ್ಚರ, ವಿವೇಕ ಹೀಗೆ ವಿವಿಧ ರೀತಿಯಲ್ಲಿ ಅರ್ಥೈಸಬಹುದಾಗಿದೆ, ಭಕ್ತಿಯ ವ್ಯಾಖ್ಯೆ ಕುರಿತ ಸೂಕ್ತಿಗಳು, ಸೂತ್ರಗಳು, ಬೃಹತ್ ಪ್ರಮಾಣದಲ್ಲಿ ಲಭ್ಯವಿವೆ.[1]

ಈ ಭಕ್ತಿ ಪರಿಕಲ್ಪನೆಗಳು ಮೊದಲಿಗೆ ಕಂಡು ಬರುವುದು ನಾರದರ ಭಕ್ತಿ ಸೂತ್ರದಲ್ಲಿ, ಸಂಸ್ಕೃತದಲ್ಲಿನ ಆಗಮಗಳ ಪ್ರಕಾರಗಳಲ್ಲಿ ಅದರಲ್ಲಿಯೂ ಮುಖ್ಯವಾಗಿ ಪಂಚರಾತ್ರಾಗಮ ಗಳಲ್ಲಿ ಮೊದಲಿಗೆ ಭಕ್ತಿ ವಿಷಯದ ಪ್ರಸ್ತಾಪಗಳಿರುವುದರ ಬಗ್ಗೆ ಸಂಶೋಧಕರು ಪರಿಶೋಧಿಸಿದ್ದಾರೆ.[3] (ಕಾಲ ಕ್ರಿ. ಪೂ. 3ನೇ ಶತಮಾನ) ಒಟ್ಟು 250 ಸಂಹಿತೆಗಳಿಂದ ಕೂಡಿದ ಈ ರಚನೆಗಳಲ್ಲಿ ಹಲವು ಸಂಪುಟಗಳಿವೆ. ಅವುಗಳನ್ನು ಕ್ರಮವಾಗಿ ಅಹಿರ್ಬುಧ್ನಯಾ ಸಂಹಿತೆ, ಸತ್ವತಾ, ಜಯಾಖ್ಯ, ಪೌಷ್ಕರಾ, ವಿಷ್ಣು ಸಂಹಿತೆ, ನಾರದ ಮತ್ತು ಪರಮ ಸಂಹಿತೆ, ವಿಹಗೇಂದ್ರ ಸಂಹಿತೆ ಇತ್ಯಾದಿ ಹೆಸರುಗಳಲ್ಲಿ ಗುರುತಿಸಿದೆ. ಮಹಾವಿಷ್ಣುವಿನ ಹಲವು ಅವತಾರಗಳ ಹಿನ್ನೆಲೆ ಮತ್ತು ಆದರ್ಶಗಳನ್ನು ಕೇಂದ್ರವಾಗಿಟ್ಟು ಕೊಂಡ ಈ ಸಂಹಿತೆಗಳು ನಂತರದಲ್ಲಿ ಭಾಗವತ ಸಂಪ್ರದಾಯದೊಳಗೆ ವಿಲೀನಗೊಂಡು ವೈಷ್ಣವ ಪಂಥದ ವಿಕಾಸಕ್ಕೆ ಕಾರಣವಾಗಿದೆ. ಈ ಪಂಚರಾತ್ರಾ ನಿರೂಪಗೊಂಡ ಸನ್ನಿವೇಶ ಆಕರ್ಷಕವೆನಿಸಿದೆ.

ಪಂಚರಾತ್ರ ಅಂದರೆ ಈ ಐದು ರಾತ್ರಿಗಳು ಎಂದರ್ಥ, ಐದು ರಾತ್ರಿಗಳನ್ನು ಒಳಗೊಂಡಂತೆ ಅಹೋದಿನ ನಡೆದ ಚರ್ಚೆಗಳ ಫಲಿತವನ್ನು ಜ್ಞಾನರೂಪದಲ್ಲಿ ಗ್ರಹಿಸಲಾಗಿದ್ದು ನಾರದೀಯ ಸೂತ್ರದಲ್ಲಿ 'ಐದು ಬಗೆಯ ಜ್ಞಾನ' ಶಾಖೆಗಳನ್ನಾಗಿ ಪರಿಭಾವಿಸಿದೆ.[4] ಪಂಚರಾತ್ರ ಪ್ರಧಾನವಾಗಿ ಪಾರಮಾರ್ಥಿಕ ಜ್ಞಾನ, (theology) ವೇದಾಂತ, ಬ್ರಹ್ಮವಿದ್ಯೆಗೆ ಸಂಬಂಧಿಸಿದ ಕೃತಿ. ಇದು ದ್ವೈತವಾದವನ್ನು (dualistic theory) ಪ್ರತಿಪಾದಿಸುತ್ತದೆ. ಭಗವಂತನ ಮೂಲಕ ಸೃಷ್ಟಿ ರಚನೆಗೊಂಡ ಬಗೆ, ಪುರುಷ, ಪ್ರಕೃತಿ ಮತ್ತು ಗಂಡು, ಹೆಣ್ಣು, ದಿವಿಜ ಲೋಕ ಇತ್ಯಾದಿಗಳ ನಿರ್ಮಾಣಗಳ ವಿವರಗಳಿವೆ. ನಂತರದ ದಿನಗಳಲ್ಲಿ ಈ ಆಗಮವನ್ನು ಜ್ಞಾನದ ಭಾಗವಾಗಿ ಅಧ್ಯಯನ ಮಾಡಲಾಗಿದೆ. ಭಕ್ತಿಯಲ್ಲಿ ಪ್ರಮುಖವಾಗಿ ಒಟ್ಟು ಒಂಭತ್ತು ಪ್ರಕಾರಗಳನ್ನು ಗುರುತಿಸಲಾಗಿದೆ, ಆದರೆ ಇವು ಭಿನ್ನ ಧರ್ಮ, ಧಾರ್ಮಿಕ ಸಿದ್ಧಾಂತಗಳಲ್ಲಿ ಬೇರೆ ಬೇರೆಯಾಗಿವೆ.[5]

ಈ ಭಕ್ತಿಯ ಪರಿಭಾವನೆಗಳಿಗೆ ಮೂರು ಆಯಾಮಗಳಿವೆ; ಸಹಜ ಭಕ್ತಿ, ಸಾಧಿತ ಭಕ್ತಿ ಮತ್ತು ಕೃತ್ರಿಮ ಭಕ್ತಿ, ಮನುಷ್ಯ ಸ್ವಭಾವತಃ ಕೃತಜ್ಞತಾ ಭಾವಗಳಿಂದ ಕೂಡಿರುತ್ತಾನೆ, ತನ್ನ ಮತ್ತು ತನ್ನ ಪರಿವಾರ ಬಾಳಿ ಬದುಕಲು ಕಾರಣವಾದ ತನ್ನ ಸುತ್ತಲಿನ ಪ್ರಕೃತಿ ಭೂಮಿ, ಆಕಾಶ, ನೀರು, ಗಾಳಿ, ಬೆಂಕಿ, ಗಿಡ, ಮರ, ಬೆಟ್ಟ ಗುಡ್ಡ, ಸೂರ್ಯ, ಚಂದ್ರರ ಬೆಳಕು, ಕತ್ತಲೆ, ಮಳೆ, ಗುಡುಗು, ಮಿಂಚು ಇತ್ಯಾದಿಗಳ ಜೊತೆಗೆ ತನ್ನ ಮೂಲ ಅಗತ್ಯತೆಗಳನ್ನು ಪೂರೈಸುವಲ್ಲಿನ ಎಲ್ಲ ಆಕರಗಳಿಗೆ, ಆಗರಗಳಿಗೆ ಆತ ಕೃತಜ್ಞತೆಗಳನ್ನು ತೋರಲು ಇಚ್ಛಿಸುತ್ತಾನೆ, ಈ ಕೃತಜ್ಞತೆಯನ್ನು ಸಹಜಭಕ್ತಿ ಎಂದು ಗುರುತಿಸಬಹುದು. ಇದಕ್ಕೆ ಮತ, ಧರ್ಮ, ಜಾತಿ, ಕುಲ, ಗೋತ್ರ, ಹೆಣ್ಣು ಗಂಡು ಇತ್ಯಾದಿಗಳ ನಿರ್ಬಂಧಗಳಿಲ್ಲ, ಮೋಕ್ಷದಂತಹ ಯಾವುದೇ ದಿವ್ಯಾಪೇಕ್ಷೆಗಳು ಇಲ್ಲಿರುವುದಿಲ್ಲ, ಭಕ್ತ ತನ್ನ ಅಗತ್ಯತೆಗಳ ಪೂರೈಕೆಯ ಬಗ್ಗೆ ತಳೆದ ಧನ್ಯತಾ ಭಾವವೇ ಇಲ್ಲಿನ ಭಕ್ತಿಯ ಸ್ಥಾಯೀ ಗುಣ, ನಿಷ್ಕಲ್ಮಶವಾದ ಜೀವನ ಪ್ರೇಮವೇ ಅದರ ವ್ಯಭಿಚಾರಿ ಅಥವಾ ಸಂಚಾರಿ ಭಾವ.

ಸಾಧಿತ ಭಕ್ತಿ, ಪ್ರಾಯಶಃ ಇದನ್ನು ಸಹಜವಾಗಿ ದೊರೆತ ಜೀವನಾನುಕೂಲ ಸೌಲಭ್ಯಗಳಾದ ಭೂಮಿ, ಆಕಾಶ, ಗಾಳಿ, ಬೆಳಕು, ನೀರು, ಬೆಂಕಿ ಇತ್ಯಾದಿಗಳ ಹಿಂದಣ ಶಕ್ತಿಗಳನ್ನು ಆಯಾ ಕಾಲಗಳಲ್ಲಿ ಮುನ್ನೆಲೆಗೆ ಬಂದ ಮಹಾ ಮಹೋಪಾಧ್ಯಾಯ ಆಚಾರ್ಯರುಗಳಿಂದ, ಋಷಿ ಮುನಿಗಳಿಂದ, ದ್ರಷ್ಟಾರರಿಂದ, ದಾರ್ಶನಿಕರಿಂದ, ಪ್ರವಾದಿಗಳಿಂದ ಜ್ಞಾನದ ಬಲದ ಮೂಲಕ ನಡೆಸಿದ ಶೋಧದ ಫಲಗಳ ಭಕ್ತಿ, ರೂಪಿಸಲಾದ ವಿವಿಧ ಅಧ್ಯಯನ ಶಿಸ್ತುಗಳ ಮೂಲಕ ಪ್ರಕಟಗೊಂಡ ಪುಣ್ಯಮಾರ್ಗಗಳ. ತಾತ್ವಿಕ ಚಿಂತನೆಯ ಪ್ರಖರತೆಗಳ ಭಕ್ತಿ, ಮಹಾಜ್ಞಾನಿಗಳಿಗೆ, ಸಂತರಿಗೆ, ಋಷಿ ಮುನಿಗಳಿಗೆ,

ಪರಿವ್ರಾಜಕ ಮುಂತಾದ ಸಾಧಕ ಯೋಗಿವರೇಣ್ಯರ ದಾರ್ಶನಿಕ ಗ್ರಹಿಕೆಗಳ ಮೂಲಕ ಹುಟ್ಟಿಕೊಂಡ ಮತ ಧರ್ಮ ಜಿಜ್ಞಾಸೆಗಳಲ್ಲಿನ ಭಕ್ತಿ, ಇದು ಭೌತಿಕ, ಅಭೌತಿಕ ಹಾಗೂ ಆದಿಭೌತಿಕ, ಆದಿದೈವಿಕ ದರ್ಶನಗಳನ್ನು ಬಳಸಿನಿಂತ ಜ್ಞಾನ ಮತ್ತು ಕ್ರಿಯೆಗಳ ಸಂತುಲಿತ್ವಗೊಂಡಿರುತ್ತದೆ. ಇಲ್ಲಿನ ತಾತ್ವಿಕ ಬೋಧನೆಗಳು, ತರ್ಕಗಳು ಮುಂದೆ ಧರ್ಮದ ಪಾತಳಿಗಳಾಗಿ, ಮತೀಯ ಸಂಹಿತೆಗಳಾಗಿ, ಆಚಾರಗಳಾಗಿ, ವಿಚಾರಗಳಾಗಿ, ನೈಷ್ಠಿಕ ನೀತಿ ನಿಯಮಗಳಾಗಿ, ಸಂಪ್ರದಾಯಗಳಾಗಿ ಬೆಳಕಿಗೆ ಬಂದಿರಬಹುದು. ಹಾಗಾಗಿ ಇಲ್ಲಿ ಭಕ್ತಿಯೆನ್ನುವುದು ಭಗವಂತ ಮತ್ತು ಭಗವದ್ ಆರಾಧನೆಯಲ್ಲಿ ತನ್ಮಯ ವಾಗುವುದರಿಂದ ಲೋಕಬಿಡುಗಡೆ ಕಂಡುಕೊಳ್ಳುವ ಬಗೆಗಿನ ಚರ್ಚೆಗಳನ್ನು ಒಡಲುಗೊಂಡ ಭಕ್ತಿ. ಇದು ಶುದ್ಧ ಪ್ರೇಮವನ್ನು ಅರಸುವ ವಿಧಾನಗಳಲ್ಲಿ ಹದುಳಗೊಂಡ ಭಕ್ತಿ, ಇದನ್ನೇ ನಾರದರು ತಮ್ಮ ಭಕ್ತಿ ಸೂತ್ರದಲ್ಲಿ ಹೇಳಿರುವ 'ಸಾ ಪ್ರೇಮರೂಪದ ಭಕ್ತಿ'. ಆದರೆ ಹೀಗೆ ಸಾ ಪ್ರೇಮರೂಪದ ಭಕ್ತಿಭಾವಗಳ ಬಗ್ಗೆ ಧರ್ಮ ಸಂಸ್ಥಾಪಕರ ಬೋಧನೆಗಳಿಗೆ ವಿರೋಧವಾದ ನಡೆಗಳು ಕಂಡಾಗ ಅದನ್ನು ಸುಧಾರಿಸುವ ಪ್ರಯತ್ನಗಳೂ ನಡೆದಿದ್ದಿದೆ ಅದನ್ನು ಚರಿತ್ರೆಯಲ್ಲಿ ಭಕ್ತಿಪಂಥವೆಂದು ಹೆಸರಿಸಲಾಗಿದೆ.[6]

ಕೃತ್ರಿಮ ಭಕ್ತಿ ಇದೂ ತಾತ್ಕಾಲಿಕ, ಮತ್ತು ವಿಪರೀತವಾದ ಚಾಂಚಲ್ಯ ಭಾವಗಳ ನಡತೆ, ಇಲ್ಲಿ ಆಸೆಗಳಿಗಿಂತ ದುರಾಸೆ, ಮುಖಗಳಿಗಿಂತ ಮುಖವಾಡ, ಅತಿಯಾದ ಸ್ವಾರ್ಥ, ಆತ್ಮ ವಂಚನೆ, ದ್ರೋಹ ಮುಂತಾದ ಕುಟಿಲ ನಡೆ ನುಡಿಗಳಿಂದ ಮನುಷ್ಯ ಸಮಾಜಕ್ಕೆ ಮುಳುವಾಗುವ ಸನ್ನಿವೇಶಗಳನ್ನು ಸೃಷ್ಟಿಸುವ ಕೂಟವಾಗಿ ಈ ಕೃತ್ರಿಮ ಭಕ್ತಿ ಕಾಣಿಸಿಕೊಳ್ಳುತ್ತದೆ.

ನಮ್ಮ ಮುಂದಿನ ಪ್ರಶ್ನೆ ಭಕ್ತರು ಯಾರು ? ಎಲ್ಲ ಮನುಷ್ಯರಲ್ಲಿಯೂ ಭಕ್ತಿ ಎನ್ನುವ ಕೃತಜ್ಞತಾ ಭಾವ ಇದ್ದಿರಬಹುದೆಂಬ ಗ್ರಹಿಕೆಯ ದೃಷ್ಟಿಯಿಂದ ಮಾಡಲು ಹೊರಟ ಸಮೀಕ್ಷೆಯಲ್ಲಿ ನಮಗೆ ಎಲ್ಲ ಮನುಷ್ಯರೂ ಭಕ್ತರಾಗಿಯೇ ಅಂದರೆ ಭಕ್ತಿ ಭಾವದಿಂದ ಕೂಡಿದವರಾಗಿಯೇ ಕಾಣುತ್ತಾರೆ, ಇದು ನಿಜವೇ ಆಗಿದ್ದಲ್ಲಿ ಬಸವಣ್ಣನವರು ಸಮಾಜವನ್ನು ಭಕ್ತ ಮತ್ತು ಭವಿ ಎಂದು ವಿಂಗಡಿಸುವ ಹಾಗೂ ಭಕ್ತಸಮಾಜವನ್ನು ಕಟ್ಟುವ ಕ್ರಮಕ್ಕೆ ಮುಂದಾದದ್ದೇಕೆ ಎನ್ನುವ ಪ್ರಶ್ನೆಯೂ ಬರುತ್ತದೆ. ಈ ಪ್ರಶ್ನೆಯ ಬೆನ್ನ ಹಿಂದೆಯೇ ನಮಗೆ ದೊರೆಯುವ ಉತ್ತರ ಭವಿಗಳು, ಮನುಷ್ಯರಲ್ಲಿಯೇ ಇರುವ ಭವಿಗಳು ಇವರು ಭಕ್ತರಲ್ಲದವರು, (ನಾಸ್ತಿಕರು ಎಂಬ ಸೀಮಿತ ಅರ್ಥದಲ್ಲಿ ಭವಿ ಶಬ್ದದ ಅರ್ಥವನ್ನು ನೋಡುವುದು ಸರಿಯೆನಿಸದು, ಬದಲಿಗೆ ತಾನು ಬಾಳಿ ಬದುಕುತ್ತಿರುವ ಲೋಕದ ಬಗ್ಗೆ ಗೌರವಗಳಿಲ್ಲದ, ಸಮಾಜ, ಸಮುದಾಯಗಳ ಬಗೆಗೆ ಕೃತಜ್ಞತೆಗಳಿಲ್ಲದ,

ಜೀವಜಗತ್ತಿನ ಬಗ್ಗೆ ಸದ್ಭಾವಗಳಿಲ್ಲದ, ಮಾನವೀಯ ಗುಣಗಳಿಗೆ ಹೊರತಾದವರು, ಶೋಷಣೆ, ದೌರ್ಜನ್ಯಗಳ ಮೂಲಕ ಸ್ವಾರ್ಥಸಾಧನೆಗೆ ಮುಂದಾಗುವವರು, ತಮ್ಮ ತಮ್ಮ ಸ್ವ ಹಿತಾಸಕ್ತಿಗಳಿಗೆ ತಕ್ಕಂತೆ ದೇವರುಗಳನ್ನು, ಧಾರ್ಮಿಕ ಕೇಂದ್ರಗಳನ್ನು, ಧರ್ಮ ಸಿದ್ಧಾಂತಗಳನ್ನು ಬಳಸಿಕೊಳ್ಳುವ, ತಮಗೆ ಬೇಕಾದಂತೆ ಅರ್ಥೈಸಿ ಸಮಾಜವನ್ನು ಒಡೆಯುವ ಕುಟಿಲರು ಎಂದು ಸಹ ಪರಿಭಾವಿಸಬಹುದಾಗಿದೆ. ಹಾಗಾಗಿ ನಮ್ಮ ನಡುವಣ ಇರುವ 'ಮನುಷ್ಯರೆಲ್ಲರೂ ಮನುಷ್ಯರಲ್ಲ' ಎನ್ನುವ ತೀರ್ಮಾನಕ್ಕೆ ಬರಬೇಕಾಗುತ್ತದೆ. ಹೀಗೆ ತೀರ್ಮಾನಿಸಿದ ಭಕ್ತಿಪಂಥದ ಪ್ರತಿಪಾದಕರು ಭಕ್ತನೆಂದರೆ ಯಾರು ಎನ್ನುವ ಪ್ರಶ್ನೆಗೆ ತಮ್ಮದೇ ಆದ ಶೈಲಿಗಳಲ್ಲಿ ಚರ್ಚೆ ನಡೆಸಿದ್ದಾರೆ. ಭಕ್ತನೆಂದರೆ ದಯಾರ್ದ್ರ ಭಾವವುಳ್ಳವನು, ಇಲ್ಲಿ ದಯೆ ಮತ್ತು ಆರ್ದ್ರ ಭಾವ ಎರಡು ಪದಗಳಲ್ಲಿ ಅಹಿಂಸಾತ್ಮಕ ನಡೆ, ನುಡಿ, ಪರರ ನೋವು, ನಲಿವು, ಸಂಕಷ್ಟಗಳಿಗೆ, ಸ್ಪಂದಿಸುವ, ಸೇವಾ ಮನೋಭಾವಗಳುಳ್ಳ, ಪರರ ಒಳಿತಲ್ಲಿ ತನ್ನ ಆನಂದವನ್ನು ಕಾಣುವ, ಸಂವೇದನಾ ಶೀಲ, ಮಾನವಾಂತಃಕರಣಗಳ ಸ್ವಭಾವವುಳ್ಳವನು ಎಂದೆಲ್ಲ ಈ ಚರ್ಚೆಯಲ್ಲಿ ವಿಷಯಗಳು ಕಾಣಸಿಗುತ್ತವೆ.[1] ನಿಷ್ಕಪಟ, ನಿರ್ಮಲಚಿತ್ತಜರ, ಕುಟಿಲತೆಗಳಿಲ್ಲದ ಮತ್ತು ಭವಿಗಳಲ್ಲದವರನ್ನು ಭಕ್ತರೆನ್ನಲಾಗಿದೆ, ಹಾಗಾದರೆ ಈ ಭಕ್ತರೆಲ್ಲರೂ ಏಕ ಪ್ರಕಾರದ ಭಾವಜೀವಿಗಳಾಗಲು ಸಾಧ್ಯವೇ? ಲೋಕೋ ಭಿನ್ನ ರುಚಿ ಎನ್ನುವ ಮಾತಿನ ಪ್ರಕಾರ ಮನುಷ್ಯರೆಲ್ಲರೂ ಭಿನ್ನ ಅಭಿರುಚಿಗಳಿಂದ ಕೂಡಿರುವಂತೆ ಭಕ್ತರಲ್ಲಿಯೂ ಸಹ ಭಿನ್ನ ಭಾವಗಳಿರುತ್ತವೆ, ಭಗವಂತನ ಬಗೆಗೆ ತಮ್ಮದೇ ಆದ ಪರಿಕಲ್ಪನೆಗಳಿರುತ್ತವೆ, ಇವುಗಳನ್ನು ಅನುಲಕ್ಷಿಸಿ ಭಕ್ತರಲ್ಲಿ ಆರ್ತಭಕ್ತ (ತನ್ನೆಲ್ಲ ಕಷ್ಟ ನಷ್ಟ ನಿವಾರಣೆಗಳಿಗೆ ದೇವರೇ ಕಾರಣನೆಂದು ಪರಿಭಾವಿಸಿ, ಅವುಗಳಿಂದ ಬಿಡುಗಡೆ ಪಡೆಯುವಲ್ಲಿ ದೇವರ ಮೊರೆಹೋಗುವವರು), ಅರ್ಥಾರ್ಥಿ ಭಕ್ತ (ಅರ್ಥವೆಂದರೆ ಸಂಪತ್ತು ಭೋಗ ಸಾಧನಗಳನ್ನು ಬಯಸಿ ಭಗವಂತನನ್ನು ಪ್ರಾರ್ಥಿಸುವವರು), ಜಿಜ್ಞಾಸು ಭಕ್ತ (ಜೀವಿತದ ಅಂತ್ಯೋದ್ದೇಶ ಮತ್ತು ಏಕೋದ್ದೇಶ ಭಗವಂತನನ್ನು ಕುರಿತ ಜ್ಞಾನವನ್ನು ಗಳಿಸಿಕೊಳ್ಳುವುದು) ಹಾಗೂ ಜ್ಞಾನಿಭಕ್ತ (ಯಾವುದೇ ಕಾಮನೆಗಳಿಗೆ ಒಳಗಾಗದ ಜೀವ–ದೇವ ಭಾವದ ಒಳಾರ್ಥಗಳನ್ನು ಅರಿತವರು, ಎಲ್ಲವುದರಲ್ಲಿಯೂ ಭಗವಂತನನ್ನು ಕಾಣುವ ಸಂತ ಮನೋಭಾವದವರು)

1. ಭಕ್ತ : ದ್ರವೀಭೂತ ಚಿತ್ತ
2. ಭಕ್ತ್ಯಾ ಮಾಮಭಿಜಾನಾತಿ ಯಾವಾನ್ಯಶ್ಚಾಸ್ಮಿ ತತ್ವತಃ
   ತತೋ ಮಾಂತತ್ವತೋಜ್ಞಾತ್ವಾ ವಿಶತೇತದನಂತರಮ್ ॥
   ಭಗವದ್ಗೀತೆ ಆಶ್ವಾಸ : 15–55
3. ಸಂತುಷ್ಟಃ ಸತತಂಯೋಗೀಯತಾತ್ಮಾದೃಢ ನಿಶ್ಚಯಃ
   ಮಯ್ಯರ್ಪಿತ ಮನೋ ಬುದ್ಧಿರ್ಯೋರ್ಮೇ ಭಕ್ತಃ ಸ ಮೇಪ್ರಿಯಃ
   (ಭಗವದ್ಗೀತೆ ಪು: 12–14)

**ಭಕ್ತಿ – ಭಕ್ತ – ಭಗವಂತ : ದೇವರು**

ಭಕ್ತಿಗೂ, ಭಗವಂತ, ದೈವ ಅಥವಾ ದೇವರು ಎಂಬ ಕಲ್ಪನೆಗಳಿಗೂ ಅವಿನಾಭಾವ ಸಂಬಂಧವಿದೆ, ಮನುಷ್ಯನಿಗೆ ಈ ದೇವರು ಎಂಬ ಕಲ್ಪನೆ ಯಾವಾಗ ಬಂತೋ, ಅಂತು ದೇವರೊಬ್ಬನಿದ್ದಾನೆ. ಎಂಬ ನಂಬಿಕೆ ಮನುಷ್ಯನ ಮನಸ್ಸಿಗೆ ಒಂದು ರೀತಿಯ ಆನಂದ ಸಮಾಧಾನ ಮತ್ತು ಧೈರ್ಯವನ್ನು ಕೊಡುತ್ತದೆ ಎಂಬುದರಲ್ಲಿ ಭಿನ್ನಾಭಿಪ್ರಾಯಗಳು ಇರಲಾರವು. ಹಾಗೆ ತಾನು ನಂಬಿದ ದೇವರು ಮೂರ್ತನೋ, ಅಮೂರ್ತನೋ ಇತ್ಯಾದಿ ದ್ವಂದ್ವಗಳಿಗಿಂತ ಆತ ತನ್ನ ಬೆಂಗಾವಲು, ದಿಕ್ಸೂಚಿ, ಸಂರಕ್ಷಣಾ ಚೇತನ, ಆತ್ಮಚೈತನ್ಯ, ಕಣ್ಣ ಮುಂದಣ ಬೆಳಕು ಇತ್ಯಾದಿ ಭಾವಗಳು ಭಕ್ತರಾದವರಲ್ಲಿ ಭಗವಂತನ ಬಗ್ಗೆ ಸದಾ ಜಾಗೃತವಾಗಿರುತ್ತವೆ.

'ಈ ಭಕ್ತ ಮತ್ತು ಭಗವಂತನ ನಡುವಿನ ಸಂಬಂಧವನ್ನು ನಾಲ್ಕು ಪ್ರಕಾರಗಳಲ್ಲಿ ವಿಭಾಗಿಸಬಹುದು; ವಾತ್ಸಲ್ಯಭಾವ ಭಕ್ತಿ, ಸಖ್ಯ ಭಾವಭಕ್ತಿ, ದಾಸ್ಯ ಭಾವಭಕ್ತಿ, ಮತ್ತು ಮಾಧುರ್ಯ ಭಾವ ಭಕ್ತಿ. ಶಾಂತ, ದಾಸ್ಯ, ಸಖ್ಯ, ವಾತ್ಸಲ್ಯ ಮತ್ತು ಮಧುರ ಎಂಬ ಐದು ಬಗೆಯ ಮನಸ್ಥಿತಿಗಳು ಭಕ್ತಿಯೋಗದಲ್ಲಿ ಪ್ರತಿಪಾದಿತವಾಗಿವೆ. ಶ್ರವಣ ಮತ್ತು ಕೀರ್ತನಗಳು ಭಕ್ತಿಯ ಎರಡು ಸೋಪಾನಗಳು, ಭಾರತದ ವಿವಿಧ ಭಾಗಗಳ ಭಕ್ತರು ತಮ್ಮ ತಮ್ಮ "ಭಾಷೆಗಳಲ್ಲಿ ತಮ್ಮ ತಮ್ಮ ಶೈಲಿಗಳಲ್ಲಿ ಹಾಡಿ ಹೊಗಳುವ ಭಕ್ತಿ ಸಾಹಿತ್ಯಕ್ಕೆ ಸಹಸ್ರಾರು ವರ್ಷಗಳ ಇತಿಹಾಸವಿದೆ. ಉತ್ತರ ಭಾರತದಲ್ಲಿ ಕಬೀರ್, ನಾನಕ್, ನಾಮದೇವ, ತುಕಾರಾಮ್, ಮೀರಾಬಾಯಿ, ತುಲಸೀದಾಸ್, ಜಯದೇವ, ವಲ್ಲಭಾಚಾರ್ಯ, ಚೈತನ್ಯ ಮುಂತಾದವರು ದಕ್ಷಿಣದಲ್ಲಿ ತಮಿಳಿನ ಆಳ್ವಾರರು, ಅಂಡಾಳ್, ನಾಯನ್ಮಾರರು, ವೀರಶೈವ ಪಂಥದ ಶಿವಶರಣ ಶರಣೆಯರು, ವೈಷ್ಣವ ಪಂಥದ ದಾಸರು, ತೆಲುಗಿನ ದಾಸ ಸಾಹಿತ್ಯ ಮುಂತಾದ ಸಾಲು ಇದ್ದು ಪ್ರಾಯಶಃ ಭಾರತದಲ್ಲಿ ಬಿಟ್ಟರೆ ಜಗತ್ತಿನ ಇತರ ಭಾಷೆಗಳಲ್ಲಿ ಈ ಸಾಹಿತ್ಯ ದೊರಕುವುದಿಲ್ಲ.

'ಭಗ'ವೆನ್ನುವ ಪದಕ್ಕೆ ಸ್ತ್ರೀ ಜನನಾಂಗವೆನ್ನುವುದರ ಅರ್ಥದ ಹಿನ್ನೆಲೆಯಲ್ಲಿ ಸೃಷ್ಟಿಮೂಲ ವಾದ ಸ್ತ್ರೀಯಂತೆ ಕಣ್ಣಿಗೆ ಕಾಣದ ಆ ಶಕ್ತಿಯೂ ಸಹ ಸೃಷ್ಟಿಶೀಲವಾಗಿರುವುದರಿಂದ ಈ ಭಗವಂತ ಎನ್ನುವ ಪರಿಭಾವನೆ ಮುನ್ನೆಲೆಗೆ ಬಂದಿರಬಹುದಾಗಿದೆ. ಉತೇದಾನೀಂ ಭಗವಂತಃ ಸ್ಯಾಮ ಭಗ ಏವ ಭಗವಾ । ಅಸತುದೇವಾಸ್ತೇನ ವಯಂ ಭಗವಂತಃ ಸ್ಯಾಮ–ಫವ ಇರುವ ದೇವತೆಗಳನ್ನು ಪ್ರಾರ್ಥಿಸಿ ನಾವು ಭಗವಂತರಾಗೋಣ–ಋಗ್ವೇದ (7–41 ನೇ ಸೂಕ್ತ) ಯಜುರ್ವೇದ ವಾಜಸನೇಯ ಸಂಹಿತೆ–38ನೇ ಮಂತ್ರ, 'ಭಗ' ಎಂದರೆ ಜ್ಞಾನ, ಧನವನ್ನು ಹೊಂದಿದವನು, ಕೊಡುವವನು, ವೇಶೋಯಶ–ಅದೇರ್ಭಗಾದ್ಯಾತ್–ಪಾಣಿನಿ (4–4–131) ವಾಸ್ತವದಲ್ಲಿ ಈ ಭಗವಂತ ಎನ್ನುವ ಪದ ವೇದಮೂಲದ್ದಲ್ಲ, ಇದೊಂದು ಅವೈದಿಕ ಮೂಲದ ತಾಂತ್ರಿಕರ ಪ್ರಯೋಗ, ವಿಷ್ಣುಪುರಾಣದಲ್ಲಿ ಇದನ್ನು 'ಐಶ್ವರ್ಯಸ್ಯ

ಸಮಗ್ರಸ್ಯ ವೀರ್ಯಸ್ಯಯಶಸಂ ಬಲಃ / ಜ್ಞಾನ ವಿಜ್ಞಾನಯೋಶ್ಚೈವ ಷಷ್ಣಾಂ ಭಗಇತೀರಣೆ' ಎಂದು ವಿವರಿಸಿದೆ.

**ಭಕ್ತಿ – ಭಗವಂತ – ಧರ್ಮ**

ಭಾರತೀಯ ಸಂದರ್ಭದಲ್ಲಿ ಧರ್ಮದ ಗ್ರಹಿಕೆ ಪ್ರಾಥಮಿಕವಾಗಿ ಧರ್ಮದಿಂದ ಬದುಕು ಎನ್ನುವ ಅರ್ಥದಿಂದ ವಿವಿಧ ಮತಾಚಾರ್ಯರು, ಧರ್ಮಸಂಸ್ಥಾಪಕರು ಪ್ರತಿಪಾದಿಸಿದ ವೈದಿಕ, ವೈದಿಕೇತರ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿ ವಿಶಿಷ್ಟಾದ್ವೈತ, ಶೈವ, ವೀರಶೈವ, ವೈಷ್ಣವ, ವಿವಿಧ ಪಂಥಗಳಾದ ಸಿದ್ಧ, ನಾಥ, ಕೌಳ, ಸಿಖ್, ಇಸ್ಲಾಂ, ಕ್ರೈಸ್ತ, ಹೀಗೆ ಬಹು ದೀರ್ಘ ಧಾರ್ಮಿಕ ಮತಗಳ ಒಕ್ಕೂಟಗಳಲ್ಲಿ ಧರ್ಮವನ್ನು ಆಯಾ ದಾರ್ಶನಿಕ ತತ್ವಗಳ ಹಿನ್ನೆಲೆಗಳಲ್ಲಿ ಕಾಲ ಕಾಲಕ್ಕೆ ಪರಿಶೀಲನೆಗೆ, ಮರುಪರಿಶೀಲನೆಗೆ ಒಳಪಡಿಸುವ ಪ್ರಯತ್ನಗಳನ್ನು ನಿರಂತರವಾಗಿ ಮಾಡಿಕೊಂಡು ಬರಲಾಗಿದೆ. ಹಾಗಾಗಿ ಇಲ್ಲಿ ಧರ್ಮಕ್ಕೂ ಭಕ್ತಿಗೂ ಇರುವ ಸಂಬಂಧವೆಂದರೆ ಅದು ಬದುಕಿಗೂ ಮನುಷ್ಯನಿಗೂ ಇರುವ ಮೌಲಿಕ ಸಂಬಂಧ ಎಂಬ ಮೂಲಸೂತ್ರಗಳಲ್ಲಿ ವ್ಯಾಖ್ಯಾನಗೊಂಡಿರುವ ಸಂದರ್ಭಗಳೇ ಅಧಿಕ. ನಮ್ಮಲ್ಲಿನ ಬಹುತೇಕ ಮತಧರ್ಮ ಗ್ರಂಥಗಳು, ಅವುಗಳ ಮೂಲಕ ಪ್ರಕಟಗೊಂಡ ಪುರಾಣ. ಶಾಸ್ತ್ರಗಳು ಮನುಷ್ಯನನ್ನು ಹುಟ್ಟುತ್ತಲೇ ಪಶುವೆಂದು ಕರೆಯುತ್ತವೆ. ಇಲ್ಲಿ ಪಶು ಎಂದರೆ ಅಜ್ಞಾನಿ, ಆತ ಪರಮಾತ್ಮನಿಂದಲೇ ಪ್ರಕಟಗೊಂಡ ಜೀವಾತ್ಮನಾಗಿದ್ದರೂ ಮರ್ತ್ಯಲೋಕಕ್ಕೆ ಬರುತ್ತಲೇ ತನ್ನಲ್ಲಿನ ಪರಮ ಸ್ವರೂಪದ ಚೈತನ್ಯವನ್ನು ಮರೆತು ಬಿಡುತ್ತಾನೆ; ಈ ಮರೆವಿನಿಂದಾಗಿ ಆತ ಅಜ್ಞಾನಿ, ಹಾಗಾಗಿ ನಂತರದಲ್ಲಿ ಜ್ಞಾನಗಳಿಕೆಯ ಮೂಲಕ ಆ ಚೈತನ್ಯದ ಇರವನ್ನು ಅರಿತು ಕೊನೆಗೆ ಆ ಚೈತನ್ಯದೊಳಗೆ ಒಂದಾಗುತ್ತಾನೆ. ಈ ಒಂದಾಗುವಿಕೆಯ ಹಂಬಲವೇ ಮೋಕ್ಷ ಎಂದೆಲ್ಲ ಅರ್ಥೈಸಿದೆ. ಹೀಗಾಗಿ ಮನುಷ್ಯನಲ್ಲಿನ ಈ ಅಜ್ಞಾನದ ಆವರಣವನ್ನು ಕಳಚಿಕೊಂಡು ಹೊರಬರುವಲ್ಲಿ ನೆರವಾಗುವವನೇ ಪಶುಪತಿ, ಆತ ಶಿವ, ಬ್ರಹ್ಮ ಅಥವಾ ನಾರಾಯಣ ಇತ್ಯಾದಿ. ಈ ಪಶುಪತಿಯನ್ನು ಅರ್ಥೈಸಿಕೊಳ್ಳುವಂತೆ ಮಾಡುವುದು ಭಕ್ತಿಭಾವ. ಹಾಗಾಗಿ ಇಲ್ಲಿನ ಎಲ್ಲ ಮತ ಧರ್ಮಗಳಲ್ಲಿಯೂ ಭಕ್ತಿಯ ಪ್ರಸ್ತಾವಗಳಿವೆ, ಭಗವಂತನ ಇರುವಿಕೆಯ ಅರಿವಿನ ರಹದಾರಿಗಳಿವೆ, ಮಾರ್ಗದರ್ಶನಗಳಿವೆ, ಮಾರ್ಗದರ್ಶಕ ಆಚಾರ್ಯ, ಸಂತ, ಯೋಗಿವರೇಣ್ಯರ, ಸಾಧಕರ, ಗುರುಪೀಠ, ಮಠ, ಆಶ್ರಮ ಪರಂಪರೆಗಳಿವೆ. ದೇಗುಲ, ಮಂದಿರ, ಮಸೀದಿ, ಬಸದಿ, ಗುರುದ್ವಾರ, ಚರ್ಚ್ ಮುಂತಾದ ದೈವಸಮುಚ್ಚಯಗಳ ಪ್ರಥಮೋದ್ಧೇಶ ಮನುಷ್ಯನನ್ನು ಮಾನವನನ್ನಾಗಿ ಮಾಡುವ ಮಾಧ್ಯಮವನ್ನಾಗಿ ಭಕ್ತಿ ತತ್ವಾನುಷ್ಠಾನಗಳನ್ನು ನೆಲೆಗೊಳಿಸಿ ಲೋಕದಲ್ಲಿ 'ನ ಅಧರ್ಮಃ' ಅಂದರೆ ಅಧರ್ಮಕ್ಕೆ ಅವಕಾಶವಿಲ್ಲದೆ ಮನುಷ್ಯನ ಆತ್ಮೋನ್ನತಿಗೆ ಮುಂದಾಗುವುದಾಗಿದೆ.

**ಅಡಿ ಟಿಪ್ಪಣಿ**

1. 'ಭಕ್ತಿಸಂಕಥನಗಳು' ಎನ್ನುವಲ್ಲಿ ಭಕ್ತಿ ಎನ್ನುವ ವಿಷಯ ಹಾಗೂ ಆ ವಿಷಯವನ್ನು ಮುಂಚೂಣಿಗೆ ತರುತ್ತಿರುವ ಲೋಕಾನುಭವಗಳನ್ನು ಕಟ್ಟಿಕೊಡುವ ಆಲೋಚನೆ, ಅಭಿಪ್ರಾಯ, ಕ್ರಿಯೆ, ನಂಬಿಕೆ ಆಚರಣೆಗಳನ್ನು ಪ್ರಸ್ತುತ ಪಡಿಸುವುದು. ಭಕ್ತಿ ವಿಷಯಕವಾಗಿ ಪ್ರಕಟಗೊಂಡಿರುವ ವಿವಿಧ ಆಲೋಚನಾ ಕ್ರಮ ಮತ್ತು ನಂಬುಗೆಗಳನ್ನು ಭಕ್ತಿಸಂಕಥನ ವೆನ್ನುವುದನ್ನು ಸಾದ್ಯಂತವಾಗಿ ವಿವರಿಸಬೇಕಿದೆ. ಇಲ್ಲಿ ಸಂಕಥನವೆನ್ನುವುದು ಸೈದ್ಧಾಂತಿಕ ಮತ್ತು ಸಾಂಸ್ಕೃತಿಕ ಭಿತ್ತಿಯಲ್ಲಿ ಭಾಷೆಯ ಮೂಲಕ ನಡೆಸುವ ಸಂವಾದವಾಗಿದೆ.
2. **ಭಕ್ತಿ ವ್ಯಾಖ್ಯೆಗಳು**
   * ಯಸ್ಯದೇವ ಪರಾಭಕ್ತಿಃಯಥಾದೇವೇತಥಾಗುರೌ
     ತಸ್ಯೈತೇಕಥಿರತಾಹ್ಯರ್ಥಾ ಪ್ರಕಾಶಂತೇ ಮಹಾತ್ಮನ – ಶ್ವೇತಾಶ್ವೇತರ ಉಪನಿಷತ್ತು
   * ಸಾ ತ್ವಸ್ಮಿನ್ ಪರಮ ಪ್ರೇಮರೂಪಾಅಮರತಸ್ವರೂಪಾ ಚ ಭಕ್ತಿಃ–ನಾರದ ಸೂತ್ರ
   * ಭಕ್ತಿಃ ಪ್ರಮೇಯಾ ಶ್ರುತಿಭ್ಯಃ – ಶಾಂಡಿಲ್ಯ ಸೂತ್ರ
   * ಸಾಪದನುರಕ್ತಿರೀಶ್ವರೀ – ಶಾಂಡಿಲ್ಯ
   * ಹರಿಭಕ್ತೇರ್ಮಹಾದೇವ್ಯಾಃ ಸರ್ವಾ ಮುಕ್ತ್ಯಾದಿ ಸಿದ್ಧಯಃ
     ಭುಕ್ತಯಶ್ಚಾದ್ಭುತಾಸ್ತಸ್ಯಾಶ್ಚೇಷ್ಟಿಕಾವದನುವ್ರತಾಃ – ಶಾಂಡಿಲ್ಯ ಸೂತ್ರ
   * ಮನೋಗತಿರವಿಚ್ಛಿನ್ನಾಹತಾ ಪ್ರೇಮಪರಿಪ್ಲುತಾ
     ಅಭಿಸಂಧಿವಿ ನಿರ್ಮುಕ್ತಾ ಭಕ್ತಿಃ ವಿಷ್ಣುವಶಂಕರೀ–ನಾರದ ಪಾಂಚರಾತ್ರದ ವಚನ
   * ಸಾಮಗ್ರ್ಯಾಂ ಭಕ್ತಿರೇವ ಬಲೀಯಸೀ – ಶಂಕರಾಚಾರ್ಯರು
   * ಮಹಾತ್ಮಜ್ಞಾನ ಪೂರ್ವಸ್ತು ಸುಧೃಢಃ ಸರ್ವತೋಧಿಕಃ
     ಸ್ನೇಹೋ ಭಕ್ತಿರಿತಿ ಪ್ರೋಕ್ತಾಸ್ತಯಾ ಮುಕ್ತಿರ್ನಚಾನ್ಯಥಾ – ಮಹಾಭಾರತತಾತ್ಪರ್ಯ ನಿರ್ಣಯ
   * ಪೂರ್ಣಸ್ವರೂಪಾನಂದಅನುಭವಃ ಭಕ್ತೇಃ–ಆಚಾರ್ಯ ವಲ್ಲಭರು
   * ಭಗವದ್ವಿರಹಾನುಭವ ಸಾಮರ್ಥ್ಯಂಇತಿ ಭಕ್ತಿಃ – ಪಂಡಿತ ಹರಿರಾಯರು
   * ಮನಾಗೇವ ಪ್ರರೂಢಾಯಂ ಹೃದಯೇ ಭಗವದ್ರತಾ
     ಪುರುಷಾರ್ಥಾಸ್ತುಚತ್ವಾರಃತೃಣಾಯಂತೇ ಸಮಂತತಃ – ಭಕ್ತಿರಸಾಮೃತ ಸಿಂಧು – ಚೈತನ್ಯ ಪಂಥ
   * ಶ್ರುತಸ್ಯ ಭಗವದ್ಧರ್ಮಾತ್‌ಧಾರವಾಹಿಕಂಗತಃ
     ಸರ್ವೇಷಾಂ ಮನೋವೃತ್ತಯಾ ಭಕ್ತಿರಿತ್ಯಭಿದೀಯತೇ–ಮಧುಸೂಧನ ಸರಸ್ವತಿ – ಭಕ್ತಿರಸಾಯನಂ
3. ವೇದವ್ಯಾಸರು ಬದರಿಯಲ್ಲಿ ತಪಸ್ಸು ಮಾಡುತ್ತಿದ್ದಾಗ ಅಲ್ಲಿಗೆ ಬರುವ ನಾರದರಲ್ಲಿ ಭಗವಂತನನ್ನು ಕಾಣುವ ಮಾರ್ಗದ ಬಗ್ಗೆ ನಡೆಸಿದ ಚರ್ಚೆಗೆ ನಾರದರು ನೀಡಿದ ವಿವರಗಳು ನಾರದ ಭಕ್ತಿಸೂತ್ರಗಳಾಗಿ ರಚನೆಗೊಂಡಿವೆ ಎಂದು ತಿಳಿಯಲಾಗಿದೆ. ನಾರದರ ಪ್ರಕಾರ ಭಕ್ತಿಗೆ ಭಕ್ತನ ಅರ್ಹತೆಗಳು ಬಹಳ ಮುಖ್ಯ. ಅವುಗಳನ್ನು ಭಗವಂತನಲ್ಲಿನ ಮಾನಸಿಕ ವಿರಹವೇದನೆ, ಭಗವಂತನ ವಿನಹ ಜೀವನ ಶೂನ್ಯವೆಂಬ ಭಾವ ಮತ್ತು

ಭಗವಂತನ ಹೊರತಾದ ಜೀವನ ವ್ಯರ್ಥವೆಂಬ ನಿಷ್ಠೆಗಳನ್ನು ನಾರದರು ಗುರುತಿಸುತ್ತಾರೆ. ಇಲ್ಲಿನ ಒಟ್ಟು 84 ಸೂತ್ರಗಳಲ್ಲಿ ಭಗವತ್ ಆರಾಧನೆ ಕುರಿತ ವಿಶ್ಲೇಷಣೆಗಳಿಂದ ಕೂಡಿದ ಭಾರತೀಯ ಭಕ್ತಿಪರಂಪರೆಯ ಕೈಪಿಡಿಯಾಗಿ ಮಹತ್ವ ಪಡೆದಿದೆ

4. ಪಾಂಚರಾತ್ರ ಯಾ ಪಂಚರಾತ್ರಾ ಹೆಸರೇ ಹೇಳುವಂತೆ ಐದುರಾತ್ರಿ ಮತ್ತು ಐದು ಹಗಲು ಅವಿರತವಾಗಿ ನರ – ನಾರಾಯಣ ಮತ್ತಿತರ ಮಹರ್ಷಿಗಳೆಲ್ಲ ಸೇರಿ ಮಹಾ ವಿಷ್ಣುವಿನ ದಿವ್ಯರೂಪವನ್ನು ಕಾಣಲು ನಡೆಸಿದ ಯಜ್ಞ, ಆದರೆ ಈ ಯಜ್ಞ ವಿಫಲವಾದಾಗ ಋಷಿ ನಾರದರು ನೀವೆಲ್ಲರೂ ಆ ದೇವನನ್ನು ನೋಡಬೇಕೆಂದರೆ ಆತನ ಲೋಕಕ್ಕೆ ತೆರಳಬೇಕು ಎಂದು ಹೇಳುತ್ತಾರೆ, ಅದನ್ನು ಕೇಳಿದ ಋಷಿ ಮುನಿಗಳು ಮತ್ತು ಅಲ್ಲಿದ್ದವರೆಲ್ಲ ವೈಕುಂಠಕ್ಕೆ ತೆರಳಿದಾಗ ಅಲ್ಲಿ ಪ್ರಕಾಶಮಾನವಾದ ಬೆಳಕಿನ ಕಿರಣಗಳು, ಮತ್ತಿ ಕಿಡಿಗಳನ್ನು ಕಂಡು ಅಚ್ಚರಿಗೊಳ್ಳುತ್ತಾರೆ. ಆಗ ಶ್ರೀಮನ್ನಾರಾಯಣ ನೀವು ಅದೆಂಥ ಮೂರ್ಖರಿದ್ದೀರಿ ನಾನು ನಿಮ್ಮ ಹೃದಯದಲ್ಲಿಯೇ ನೆಲೆಸಿದ್ದೇನೆ (ಆತ್ಮನ್) ಎಂದು ಹೇಳುವ ಪ್ರಸಂಗ ಭಗವಂತನ ಆವಾಸ ಸ್ಥಾನವೆನ್ನುವುದು ಭಕ್ತರ ಹೃದಯವೆಂಬ ಭಾವನೆಯನ್ನು ಮೂಡಿಸುತ್ತದೆ. ಅಲ್ಲಿಂದ ಮರಳಿಬಂದ ಋಷಿಗಳಲ್ಲಿ ಸನಕ, ಸ್ಕಂದ, ಸನತ್ಕುಮಾರ, ನಾರದ, ಪರಮ, ಮುಂತಾದವರು ತಮಗೊದಗಿದ ಅನುಭವಗಳನ್ನೇ ಸಂಹಿತೆಗಳನ್ನಾಗಿ ನಿರೂಪಿಸಿದರೆಂದು ತಿಳಿಯಲಾಗಿದೆ.

5. ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಂ । ಅರ್ಚನಂ ವಂದನಂ ದಾಸ್ಯಂ ಸಖ್ಯಂ ಆತ್ಮನಿವೇದನಂ–ಭಾಗವತ

6. **ಭಕ್ತಿ ಪಂಥ** attachment, state of mind where the devotees surrender himself or herself unquestioningly to God, The Union of the human soul with a supreme God. Man's love and devotion for God are some of the concepts which were dwelt upon by the saints. The tenets which developed out of these thoughts are known as Bhakthism.

□

ಕಾಯ ಪ್ರಸಾದವೆನ್ನ, ಜೀವ ಪ್ರಸಾದವೆನ್ನ,
ಪ್ರಾಣ ಪ್ರಸಾದವೆನ್ನ, ಮನ ಪ್ರಸಾದವೆನ್ನ,
ಧನ ಪ್ರಸಾದವೆನ್ನ, ಭಾವ ಪ್ರಸಾದವೆನ್ನ,
ಸಯದಾನ ಪ್ರಸಾದವೆನ್ನ, ಸಮಭೋಗ ಪ್ರಸಾದವೆನ್ನ
ಚೆನ್ನಮಲ್ಲಿಕಾರ್ಜುನಯ್ಯಾ,
ನಿಮ್ಮ ಪ್ರಸಾದವ ಹಾಸಿ ಹೊದಿಸಿಕೊಂಡಿಪ್ಪೆನು.

**– ಅಕ್ಕಮಹಾದೇವಿ**

# ವಚನ ಚಳವಳಿಯ ಗುರಿ : ಪರ್ಯಾಯ ಸಂಸ್ಕೃತಿ

ಡಾ. ಸೀ.ಚ. ಯತೀಶ್ವರ

**ಕ**ರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಹನ್ನೆರಡನೇ ಶತಮಾನದ ವಚನಕಾರರ ಆಂದೋಲನಕ್ಕೆ ಮಹತ್ವದ ಸ್ಥಾನವಿದೆ. ಏಕೆಂದರೆ ಅಂದಿನ ಜಡಗಟ್ಟಿದ ಸಾಮಾಜಿಕ ವ್ಯವಸ್ಥೆಯನ್ನು ಸಮಗ್ರ ಪರಿವರ್ತನೆಗೆ ಒಳಪಡಿಸಿದ ವಚನಕಾರರು ತಮ್ಮದೇ ಆದ ವಿಶಿಷ್ಟ ಚಿಂತನೆಗಳು ಪರಿಕಲ್ಪನೆಗಳ ಮೂಲಕವಾಗಿ ನವ ಸಮಾಜದ ನಿರ್ಮಾತೃಗಳಾದರು. ಸಾಮಾಜಿಕವಾಗಿ ಶೋಷಿತರಾದ ಸಮುದಾಯಗಳಿಂದ ಬಂದವರನ್ನು ಆತ್ಮೀಯವಾಗಿ ಬರಮಾಡಿಕೊಂಡು ಅವರ ಸಮಗ್ರ ವ್ಯಕ್ತಿತ್ವದ ವಿಕಾಸಕ್ಕೆ ಅನುವು ಮಾಡಿಕೊಟ್ಟಿದ್ದೆ ಅಲ್ಲದೆ ಪರ್ಯಾಯ ಸಂಸ್ಕೃತಿಯನ್ನು ಸ್ಥಾಪಿಸುವ ದಿಟ್ಟ ಪ್ರಯತ್ನವನ್ನು ಮಾಡಿದರು. ಇಡೀ ವ್ಯವಸ್ಥೆಯನ್ನು ಪ್ರಾಯೋಗಿಕ ಚಿಂತನೆಗಳಿಗೆ ಒಳಪಡಿಸಿ ಸಮಾಜದ ಎಲ್ಲಾ ಕ್ಷೇತ್ರಗಳನ್ನು ಪರ್ಯಾಯವಾದ ಚಿಂತನೆಗಳ ನೆಲೆಯಲ್ಲಿ ಮರು ರೂಪಿಸುವ ಪ್ರಯತ್ನ ಮಾಡಿದವರು ವಚನಕಾರರು. ಸ್ಥಗಿತಗೊಂಡಿದ್ದ ಯಥಾಸ್ಥಿತಿ ವಾದದ ಮೌಲ್ಯಗಳನ್ನು ಧಿಕ್ಕರಿಸಿ ಕ್ರಾಂತಿಕಾರಕವಾದ ಪರ್ಯಾಯ ಸಂಸ್ಕೃತಿಯನ್ನು ನಿರ್ಮಿಸುವ ದಿಸೆಯಲ್ಲಿ ದೃಢವಾದ ಹೆಜ್ಜೆಗಳನ್ನಿಟ್ಟರು.

ವಚನ ಚಳವಳಿ ಕೇವಲ ಧಾರ್ಮಿಕ ಚಳವಳಿ ಆಗಿರದೆ ಸಮಾಜವನ್ನು ಆರ್ಥಿಕ ಮತ್ತು ಸಾಮಾಜಿಕ ಶೋಷಣೆಯಿಂದ ಬಿಡುಗಡೆಗೊಳಿಸುವ ದೃಢಸಂಕಲ್ಪವನ್ನು ಹೊಂದಿತ್ತು. ಅದಕ್ಕಾಗಿ ಶೋಷಿತರನ್ನು ಒಂದುಗೂಡಿಸುವ ಪ್ರಯತ್ನ ನಡೆದಿತ್ತು ಎಂಬ ಸಂಗತಿಯನ್ನು ಹನ್ನೆರಡನೇ ಶತಮಾನದ ಕಾಯಕಜೀವಿಗಳ ಚಳವಳಿ ಎಂಬ ಗ್ರಂಥದಲ್ಲಿ ಡಾ. ಸಿ. ವೀರಣ್ಣನವರು ಸಾಧಾರ ಪೂರ್ವಕವಾಗಿ ನಿರೂಪಿಸಿರುವುದನ್ನು ಸ್ಮರಿಸಬಹುದು.

ವಚನಕಾರರ ಚಳವಳಿ ಭಾರತೀಯ ಸಾಮಾಜಿಕ ವ್ಯವಸ್ಥೆಯನ್ನು ನಿರಂತರವಾಗಿ ಕಾಡುತ್ತಿರುವ ಜಾತಿ ವ್ಯವಸ್ಥೆಯನ್ನು ಶ್ರೇಣೀಕರಣವನ್ನು ಸ್ಪಷ್ಟವಾಗಿ ನಿರಾಕರಿಸಿದೆ. ಸಮಾಜದ ಮುನ್ನಡೆಗೆ ಸಂಪತ್ತಿನ ಸೃಷ್ಟಿಗೆ ಕಾರಣರಾದ ಕೆಳಜಾತಿಗಳಿಗೆ ಸೇರಿದ ಕಾಯಕಜೀವಿಗಳನ್ನು ಸಂಘಟಿಸಿ ಸಮಾಜದಲ್ಲಿ ಬದಲಾವಣೆಯನ್ನು ತರಬಯಸಿದೆ.

ಇಡೀ ಭಾರತೀಯ ಸಾಮಾಜಿಕ ಚಳವಳಿಗಳ ಸಂದರ್ಭದಲ್ಲಿ ಶ್ರಮ ಸಂಸ್ಕೃತಿಯ ನೆಲೆಗಟ್ಟಿನ ಆಧಾರದ ಮೇಲೆ ಪರ್ಯಾಯ ಸಂಸ್ಕೃತಿಯ ನಿರ್ಮಾಣದ ಸದಾಶಯವನ್ನು

ಪ್ರಕಟಿಸಿದೆ. ಇದನ್ನು ಅರ್ಥಮಾಡಿಕೊಳ್ಳಲು ನಮಗಿರುವ ಖಚಿತವಾದ ಆಧಾರಗಳೆಂದರೆ ವಚನಗಳು. ವಚನಗಳನ್ನು ಬರೆದವರೆಲ್ಲರೂ ಅನುಭವ ಮಂಟಪದಲ್ಲಿ ತಮ್ಮ ವಿನೂತನವಾದ ಚರ್ಚೆಯ ಮೂಲಕ ಅಂತರಂಗದ ಭಾವನೆಗಳಿಗೆ ವಿಶೇಷವಾದ ಅಭಿವ್ಯಕ್ತಿಯನ್ನು ನೀಡಿದರು. ಅನುಭವ ಮಂಟಪವನ್ನು ಕುರಿತು ರೆ. ಚನ್ನಪ್ಪ ಉತ್ತಂಗಿಯವರು ಅತ್ಯಂತ ಅರ್ಥಪೂರ್ಣವಾಗಿ ಅಭಿಪ್ರಾಯಪಡುತ್ತಾರೆ.

"ಅನುಭವ ಮಂಟಪ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪಡೆದ ಲಕ್ಷಾವಧಿ ಜನರು ಸುಸಂಸ್ಕೃತರಾದರು, ಸತ್ಯನಿಷ್ಠರಾದರು, ಸರ್ವಜೀವದಯಾಪರರಾದರು, ಪ್ರೀತಿಯ ಸಾಕಾರಮೂರ್ತಿಗಳಾದರು, ತ್ಯಾಗಶೀಲರಾದರು, ನಿಸ್ವಾರ್ಥ ಸಮಾಜ ಸೇವಾ ದುರಂಧರ ರಾದರು. ನವಸಮಾಜ ನಿರ್ಮಾಪಕರಾದರು, ಇವರು ಸರ್ವೋದಯ ತತ್ವಗಳನ್ನು ಬಿತ್ತರಿಸುವ ಸಾಹಿತ್ಯ ರಚನೆ ಮಾಡಿದರು."

ಪರ್ಯಾಯ ಸಂಸ್ಕೃತಿಯನ್ನು ರೂಪಿಸುವ ಚಳವಳಿಯನ್ನು ಕಟ್ಟಬಯಸಿದ ವಚನಕಾರರು ಅದಾಗಲೇ ಅಸ್ತಿತ್ವದಲ್ಲಿದ್ದ ಸಾಮಾಜಿಕ ಘಟಕಗಳನ್ನು ಮತ್ತು ಚಿಂತನೆಗಳನ್ನು ಅವುಗಳ ದುಷ್ಪರಿಣಾಮಗಳನ್ನು ಒತ್ತಿ ಹೇಳುವುದರ ಮೂಲಕ ಖಂಡತುಂಡವಾಗಿ ಖಂಡಿಸಿದರು. ಅವುಗಳನ್ನು ನಿರಾಕರಿಸುತ್ತಲೇ ಪರ್ಯಾಯವಾಗಿ ಸುಲಭವಾದ ಶೋಷಣಾರಹಿತ ಮಾರ್ಗಗಳನ್ನು ಸೂಚಿಸಿದರು. ಪರ್ಯಾಯ ಸಂಸ್ಕೃತಿಯ ಚಿಂತನೆಗಳನ್ನು ಮುಂದಿಟ್ಟು ಅವು ಸಮಾಜದಲ್ಲಿ ನೆಲೆಗೊಳ್ಳುವುದಕ್ಕೆ ಅವಶ್ಯಕವಾದ ಕಾಲಾವಕಾಶ ಸಾಮಾಜಿಕ ರಾಜಕೀಯ ಸ್ಥಿರತೆಯ ಪರಿಸರವನ್ನು ಸೃಷ್ಟಿ ಮಾಡುವ ಪ್ರಯತ್ನ ಮಾಡಿದರು.

**ದೇವರು :** ಮನುಷ್ಯ ಕೂಡಿ ಬಾಳಲಾರಂಭಿಸಿದ ಮೇಲೆ ಜಗತ್ತಿನ ಹುಟ್ಟು ಉತ್ಪತ್ತಿಯ ಬಗೆಗೆ ಕುತೂಹಲ ಬೆಳೆದು ಕಾಲಕ್ರಮೇಣ ಎರಡು ಕವಲಾಗಿ ಬೆಳೆದು ಒಂದು ಧಾರ್ಮಿಕ ಕ್ಷೇತ್ರವಾಗಿ ಇನ್ನೊಂದು ವಿಜ್ಞಾನ ಕ್ಷೇತ್ರವಾಗಿ ಬೆಳೆಯಿತು. ಧಾರ್ಮಿಕ ಕ್ಷೇತ್ರ 'ಸರ್ವಶಕ್ತ'ನೊಬ್ಬನನ್ನು ಸೃಷ್ಟಿಸಿ ಭಯ ಮೂಲ ಕಲ್ಪನೆಗಳ ಬೆಳವಣಿಗೆಗೆ ಕಾರಣವಾಯಿತು. ಇದರಿಂದ ಸರ್ವಶಕ್ತ ದೇವರು ಮತ್ತು ಜನರ ನಡುವೆ ಮಧ್ಯವರ್ತಿಯ (ಪುರೋಹಿತನ) ಪ್ರವೇಶವಾಯಿತು. ಹೀಗೆ ಮಠ ದೇವಾಲಯಗಳ ವ್ಯವಸ್ಥೆಯಿಂದ ಜನರನ್ನು ಬಿಡುಗಡೆ ಮಾಡಲು ಸಾಧ್ಯವಿಲ್ಲವೆಂದೆನಿಸಿದಾಗ ಇರುವುದನ್ನು ಭಗ್ನಗೊಳಿಸು ವುದಕ್ಕೆ ಬದಲಾಗಿ ಅಸ್ತಿತ್ವದಲ್ಲಿದ್ದ ಲಿಂಗವನ್ನು ಇಷ್ಟಲಿಂಗವಾಗಿ ಪರಿವರ್ತಿಸಿದರು. ಇದರಿಂದ ಪರ್ಯಾಯ ಸಂಸ್ಕೃತಿಯ ಅನಾವರಣಕ್ಕೆ ದಾರಿಯಾಯಿತು.

ಈ ವಿಚಾರದಲ್ಲಿ ಮೊದಲು ದನಿಯೆತ್ತಿದವನೇ ಜೇಡರ ದಾಸಿಮಯ್ಯ. "ಕಂಚು ಮುಟ್ಟು ಕಲ್ಲುವೇರುವಣ್ಣಗಳಿರಾ ಘಂಟೆಯ ಧ್ವನಿಗೆ ಒಂದು ಗೋಟಡಕೆಯ ಸೋಲ

ಎಂದು ಟೀಕಿಸುತ್ತಾನೆ. ಅಷ್ಟೇ ಅಲ್ಲದೆ ಮೆಳೆಯ ಮೇಲಣ ಕಲ್ಲು ಜಗದೆರೆಯನಾಗಬಲ್ಲುದೆ ಮೆಳೆ ಶಿವಭಕ್ತನಾಗಬಲ್ಲದೆ" ಎಂದು ವಿಗ್ರಹ ಪೂಜೆಯನ್ನು ನಿರಾಕರಿಸಿ ತನುಮನವನರಿಯುವ ಅರಿವೇ ಮುಖ್ಯ ಎಂದಿದ್ದಾನೆ.

ಮನುಷ್ಯನಿಗೆ ಸರ್ವಶಕ್ತ(ದೇವರು)ನ ಬಗೆಗಿನ ತಿಳಿವು ಕಲ್ಲಿನ ಮೂಲಕ ಬರಬೇಕೊ ಅರಿವಿನ ಮೂಲಕವೋ ಎಂದು ಅಂಬಿಗರ ಚೌಡಯ್ಯ ಕೇಳುತ್ತಲೇ 'ವಿಶ್ವಾಸದಿಂದ ಕುರುಹನರಿವುದು ಶಿಲೆಯೋ ಮನವೋ' ಎಂದು ಪ್ರಶ್ನಿಸುತ್ತಾನೆ. 'ಕಲ್ಲದೇವರ ಪೂಜಿಸಿ ಕತ್ತೆಗಳಾಗಿ ಹುಟ್ಟಿದರು' ಎನ್ನುತ್ತಾ ಅನೇಕ ಹೆಸರುಗಳ ದೇವರುಗಳನ್ನು ನಿರಾಕರಿಸುತ್ತಾನೆ.

ಇಡೀ ವಚನಕಾರರ ಸಮುದಾಯದಲ್ಲಿ ತನ್ನ ಕ್ರಾಂತಿಕಾರಕ ಚಿಂತನೆಗಳಿಂದ ಪ್ರಸಿದ್ಧನಾದವನು ಅಲ್ಲಮ. "ಮರ್ತ್ಯಲೋಕದ ಮಾನವರು ದೇಗುಲದೊಳಗೊಂದು ದೇವರ ಮಾಡಿದರೆ ಆನು ಬೆರಗಾದೆ" "ದೇಹದೊಳಗೆ ದೇವಾಲಯವಿದ್ದು ಬೇರೆ ದೇವಾಲಯವೇಕೆ" ಎಂದು ಪ್ರಶ್ನಿಸುತ್ತಲೇ ವಚನಕಾರರ ವಿಚಾರಗಳನ್ನು ಬೆಂಬಲಿಸುತ್ತಾನೆ. ಅಲ್ಲಮನ ಮಾತನ್ನು ಬೆಂಬಲಿಸುವ ರೀತಿಯಲ್ಲಿ ಬಸವಣ್ಣ ದೇವಾಲಯಕ್ಕೆ ಹೊಸ ಆಯಾಮವನ್ನು ನೀಡುತ್ತಾನೆ. "ಉಳ್ಳವರು ಶಿವಾಲಯವ ಮಾಡುವರು ನಾನೇನ ಮಾಡುವೆ ಬಡವನಯ್ಯಾ" ಎಂಬ ವಿಶಿಷ್ಟ ಕಲ್ಪನೆಯ ಮೂಲಕ ಸ್ಥಾವರದ ಪ್ರತೀಕವಾಗಿದ್ದ ದೇವಾಲಯವನ್ನು ಮನುಷ್ಯನ ಶರೀರಕ್ಕೆ ಸ್ಥಳಾಂತರ ಮಾಡಿಬಿಡುತ್ತಾನೆ. "ಎನ್ನ ಕಾಲೇ ಕಂಬ ದೇಹವೇ ದೇಗುಲ ಶಿರ ಹೊನ್ನ ಕಳಶವಯ್ಯಾ" ಎಂದು ಹೇಳಿ ಬಹಿರಂಗದ ದೇವಾಲಯದ ಅಗತ್ಯ ಮತ್ತು ಅಸ್ತಿತ್ವವನ್ನು ನಿರಾಕರಿಸುತ್ತಾನೆ. ಮಡಿವಾಳ ಮಾಚಿದೇವರ ವಚನವೊಂದು ಅರ್ಥಪೂರ್ಣವಾಗಿದೆ.

ಪೃಥ್ವಿಯ ಮೇಲಣ ಶಿಲೆಯ ತಂದು ಪ್ರತಿಮೆಗಳ ಮಾಡಿ
ಕಲ್ಲುಕುಟಿಗನಲ್ಲಿಯೆ ಗುರುವಾದ ಕಲ್ಲು ಶಿಷ್ಯನಾದ
ಹಿಂದಿನಾದಿಯನರಿಯದ ಗುರು
ಮುಂದೆ ವೇಧಿಸಲಿಲ್ಲದ ಉಪದೇಶಕೊಳ್ಳಲರಿಯಾದ ಶಿಷ್ಯ

ಈ ಎರಡೂ ಕಲ್ಲುಕುಟಿಗನ ಕಲ್ಲಿನಂತೆ ಕಾಣಾ ಕಲಿದೇವಯ್ಯ, ಅಂಬಿಗನ ಚೌಡಯ್ಯನ ವಚನವೊಂದು ಕ್ರಾಂತಿಕಾರಕವಾಗಿದೆ.

ಕಲ್ಲದೇವರ ಪೂಜೆಯಾ ಮಾಡಿ
ಕಲಿಯುಗದ ಕತ್ತೆಗಳಾಗಿ ಹುಟ್ಟಿದರು
ಮಣ್ಣದೇವರ ಪೂಜಿಸಿ ಮಾನಹೀನರಾದರು
ಮರನದೇವರ ಪೂಜಿಸಿ ಮಣ್ಣಕೂಡಿದರು
ದೇವರ ಪೂಜಿಸಿ ಸ್ವರ್ಗಕ್ಕೇರದೆ ಹೋದರು
ಜಗದ್ಭರಿತನಾದ ಪರಶಿವನೊಳಗೆ
ಕಿಂಕರನಾದ ಶಿವಭಕ್ತನೆ ಶ್ರೇಷ್ಠನೆಂದಾತ ನಮ್ಮ ಅಂಬಿಗರ ಚೌಡಯ್ಯ

ವಚನಕಾರರು ದೇವಾಲಯ ಮತ್ತು ಅದರಲ್ಲಿ ಪ್ರತಿಷ್ಠಾಪಿಸಿದ ದೇವರ ಅಸ್ತಿತ್ವವನ್ನು ಹಲವು ಬಗೆಯಲ್ಲಿ ನಿರಾಕರಿಸಿರುವುದನ್ನು ಮೇಲಿನ ವಚನಗಳು ದೃಢಪಡಿಸುತ್ತವೆ.

**ಸ್ವರ್ಗ–ನರಕ :** ವಚನಕಾರರು ಸ್ವರ್ಗ, ನರಕ, ಕರ್ಮಸಿದ್ಧಾಂತ, ಪಾಪಪುಣ್ಯ ಪರಂಪರಾಗತವಾಗಿ ಬೆಳೆದುಬಂದಿದ್ದ ಪರಿಕಲ್ಪನೆಗಳನ್ನು ಜನರ ಮನಸ್ಸಿನಿಂದ ಕಿತ್ತೊಗೆಯುವ ದೊಡ್ಡ ಸವಾಲನ್ನು ಎದುರಿಸಿದರು. ಇಹದ ಅಸ್ತಿತ್ವವನ್ನು ಕುರಿತು ಜನರಲ್ಲಿ ಭರವಸೆ ಮೂಡಿಸುವ ಕೆಲಸವನ್ನು ಮಾಡಿದರು. ಅಲ್ಲಮಪ್ರಭು "ಇಹಲೋಕ ಪರಲೋಕ ತಾನಿದ್ದಲ್ಲಿ" ಎಂದು ವ್ಯಕ್ತಿಯ ಅಸ್ತಿತ್ವದೊಂದಿಗೆ ಸಮೀಕರಿಸುತ್ತಾನೆ. "ಎನ್ನ ಕಾಯವೇ ಕೈಲಾಸ" ಎಂದು ಕೈಲಾಸವನ್ನು ಆಕಾಶದಿಂದ ನೆಲದ ಮನುಷ್ಯನಲ್ಲಿಗೆ ತರುತ್ತಾನೆ. ಇದನ್ನೇ ಬಸವಣ್ಣ "ದೇವಲೋಕ ಮರ್ತ್ಯಲೋಕ ಬೇರೆ ಮತ್ತುಂಟೇ, ಶಿವಭಕ್ತನಿರ್ದ ಠಾವೇ ದೇವಲೋಕ" ಎನ್ನುವ ಮೂಲಕ ಮರ್ತ್ಯದ ಮಹತ್ವವನ್ನು ಸ್ಥಾಪಿಸಲು "ಮರ್ತ್ಯಲೋಕ ಎಂಬುದು ಕರ್ತಾರನ ಕಮ್ಮಟವಯ್ಯ ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರು ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ" ಎಂದು ಬದುಕೆಂಬ ನಾಣ್ಯದ ಚಲಾವಣೆ ಮುಖ್ಯ ಎನ್ನುತ್ತಾನೆ.

"ಅಯ್ಯಾ ಎಂದಡೆ ಸ್ವರ್ಗ ಎಲವೊ ಎಂದಡೆ ನರಕ" ಎಂದು ಹೇಳಿ ಸದ್ವರ್ತನೆಯ ಸರಳ ಸತ್ಯಕ್ಕೆ ಅದನ್ನು ತಂದಿಳಿಸಿರುವುದು ವಿಶೇಷವಾದುದು. ಘಟ್ಟಿವಾಳಯ್ಯ ಬಸವಣ್ಣನಿಗಿಂತ ಮುಂದುವರಿದು "ಇಹವೂ ಇಲ್ಲ ಪರವೂ ಇಲ್ಲ ಪರಾತ್ಪರವೂ ಇಲ್ಲ" ಎಂದು ಇಹಪರದ ನಿರಾಕರಣೆಯನ್ನು ಗಟ್ಟಿಯಾಗಿ ಮಾಡುತ್ತಾನೆ. ಮೋಳಿಗೆ ಮಹಾದೇವಿ "ಮರ್ತ್ಯಕೈಲಾಸವೆಂಬುದು ಭಕ್ತರಿಗೆ ಯುಕ್ತಿಯಲ್ಲಾ ಆ ಬಚ್ಚಬರಿಯ ಬೆಳಗ ನೀನೆ ನೋಡಿಕೊ" ಎಂದು ಬೆಳಕಿನ ಸಾಕ್ಷಾತ್ಕಾರಕ್ಕೆ ಗಮನ ಹರಿಸಿರುವುದನ್ನು ಕಾಣಬಹುದು.

ಅಲ್ಲಮನ ವಚನ ತುಂಬಾ ಅರ್ಥಪೂರ್ಣವಾಗಿದೆ

> ನೆನೆ ಎಂದಡೆ ಏನ ನೆನೆವೆನಯ್ಯಾ
> ಎನ್ನ ಕಾಯವೇ ಕೈಲಾಸವಾಯಿತು
> ಮನವೇ ಲಿಂಗವಾಯಿತು ತನುವೇ ಸೆಜ್ಜೆಯಾಯಿತು.
> ನೆನೆವಡೆ ದೇವನುಂಟೇ ನೋಡುವೊಡೆ ಭಕ್ತನುಂಟೇ
> ಗುಹೇಶ್ವರಲಿಂಗ ಲೀಯ್ಯವಾಯಿತು.

ಬಸವಣ್ಣನವರ ಈ ವಚನ ಈ ವಿಚಾರದಲ್ಲಿ ಮತ್ತಷ್ಟು ಬೆಳಕನ್ನು ಬೀರುತ್ತದೆ.

> ದೇವಲೋಕ ಮರ್ತ್ಯಲೋಕವೆಂಬುದು ಬೇರೆ ಮತ್ತುಂಟೇ
> ಈ ಲೋಕದೊಳಗೆ ಮತ್ತೆ ಅನಂತಲೋಕ
> ಶಿವಲೋಕ ಶಿವಾಚಾರವಯ್ಯಾ,
> ಶಿವಭಕ್ತನಿದ್ದಠಾವೇ ದೇವಲೋಕ,

ಭಕ್ತನಂಗಳವೇ ವಾರಣಾಸಿ, ಕಾಯವೇ ಕೈಲಾಸ
ಇದು ಸತ್ಯ ಕೂಡಲಸಂಗಮದೇವಾ.

ಆಯ್ದಕ್ಕಿ ಮಾರಯ್ಯನ ವಚನವನ್ನು ಗಮನಿಸಬಹುದಾಗಿದೆ.

ಭಕ್ತರಿಗೆ ಬಡತನವುಂಟೇ ಸತ್ಯರಿಗೆ ಕರ್ಮವುಂಟೇ
ಚಿತ್ತಮುಟ್ಟಿ ಸೇವೆಯ ಮಾಡುವ ಭಕ್ತಂಗೆ
ಮರ್ತ್ಯ ಕೈಲಾಸವೆಂಬುದುಂಟೇ
ಆತನಿದ್ದುದೇ ಸುಕ್ಷೇತ್ರ
ಆತನಂಗವೆ ಅಮಲೇಶ್ವರಲಿಂಗದ ಸಂಗಸುಖ

ಹೀಗೆ ಬಸವಾದಿ ಶರಣರು ತಾವು ನಿರ್ಮಿಸಬೇಕೆಂದಿದ್ದ ಪರ್ಯಾಯ ಸಂಸ್ಕೃತಿಯ ಬುನಾದಿ ಅರಿವು ಅಥವಾ ತಿಳುವಳಿಕೆ ಎಂಬುದನ್ನು ಹತ್ತಾರು ವಚನಗಳಲ್ಲಿ ಸೂಕ್ಷ್ಮವಾಗಿ ಅಭಿವ್ಯಕ್ತಿಸಿದ್ದಾರೆ.

**ವೇದ–ಶಾಸ್ತ್ರ:** ಭಾರತೀಯ ಸಮಾಜದಲ್ಲಿ ಪುರೋಹಿತಶಾಹಿ ಕಾಲಕಾಲಕ್ಕೆ ಹೊಸ ವೇಷವನ್ನು ಧರಿಸಿ ಹಳೆಯ ವಿಚಾರಗಳನ್ನು ಹೇಳುತ್ತಲೇ ಜನಮಾನಸವನ್ನು ನಿರ್ವೀರ್ಯಗೊಳಿಸುವ ಕೆಲಸ ಹಿಂದಿನಿಂದಲೂ ಇಂದಿನ ತನಕವೂ ನಡೆಯುತ್ತಲೇ ಬರುತ್ತಿದೆ ಎಂಬುದು ಸೂರ್ಯನಷ್ಟೇ ಸ್ಪಷ್ಟ. ಬೌದ್ಧ, ಜೈನ ಧರ್ಮಗಳು ವೈದಿಕ ಚಿಂತನೆಯನ್ನು ನಿರಾಕರಿಸಲು ಹೊಸ ಮಾರ್ಗಗಳನ್ನು ಶೋಧಿಸಿದವು. ಇದರಲ್ಲಿ ವೇದಗಳ ಮಾಧ್ಯಮವಾಗಿದ್ದ ಸಂಸ್ಕೃತವನ್ನು ನಿರಾಕರಿಸುವುದೂ ಸೇರಿತ್ತು. ತಾವು ಹೇಳಬೇಕಾದುದನ್ನು ಜನಭಾಷೆಯಲ್ಲಿ ಹೇಳುವುದು ಅನಿವಾರ್ಯವೂ ದಿಟ್ಟತನದ ಕ್ರಮವೂ ಆಗಿತ್ತು. ವಚನಕಾರರೂ ತಾವು ಪ್ರತಿಪಾದಿಸುವ ವಿಚಾರಗಳನ್ನು ಜನಭಾಷೆಯಲ್ಲಿಯೇ ಹೇಳಿದ್ದು ಕ್ರಾಂತಿಕಾರಕವಾದ ಸಂಗತಿ.

ಅಲ್ಲಮನ ದೃಷ್ಟಿಯಲ್ಲಿ "ವೇದ ವೇಧಿಸಲರಿಯದೆ ಕೆಟ್ಟವು, ಶಾಸ್ತ್ರ ಸಾಧಿಸಲರಿಯದೆ ಕೆಟ್ಟವು" ಎಂದು ಅವುಗಳಿಂದಾದ ಅನರ್ಥವನ್ನು ಧ್ವನಿಸಿ ಅವುಗಳ ಮಿತಿಯನ್ನು ಹೇಳಿದೆ. "ವೇದವೆಂಬುದು ಓದಿನ ಮಾತು, ಶಾಸ್ತ್ರವೆಂಬುದು ಸಂತೆಯ ಸುದ್ದಿ, ಪುರಾಣವೆಂಬುದು ಪುಂಡರ ಗೋಷ್ಠಿ ತರ್ಕವೆಂಬುದು ತಗರ ಹೋರಟೆ" ಎಂದು ಕಟುವಾಗಿ ಖಂಡಿಸುತ್ತಾನೆ. ವೇದಶಾಸ್ತ್ರಗಳನ್ನು ಅಕ್ಕಮಹಾದೇವಿ ದಿಟ್ಟವಾಗಿ ಟೀಕಿಸುತ್ತಾಳೆ. "ವೇದ ಶಾಸ್ತ್ರ ಆಗಮ ಪುರಾಣಗಳು ಕೊಟ್ಟಣ ಕುಟ್ಟಿದ ನುಚ್ಚು ತೌಡು" ಎನ್ನುತ್ತಾಳೆ.

ವೇದಪುರಾಣಗಳು ಸ್ಥಾಪಿಸಿದ ಚಾತುರ್ವರ್ಣ ವ್ಯವಸ್ಥೆ, ಮುಂದೆ ಹುಟ್ಟಿ ಬಲಗೊಂಡ ಜಾತಿವ್ಯವಸ್ಥೆ ಮುಂತಾದುವೆಲ್ಲವನ್ನೂ ತಿರಸ್ಕರಿಸುವ ಬಸವಣ್ಣ ಅದಕ್ಕೆ ಹೇಳುವ ಉತ್ತರ ಇದು: "ವೇದ ನಡುಗಿ ಶಾಸ್ತ್ರ ಕೆಲಕ್ಕೆ ಸಾರಿ, ತರ್ಕ ಮೂಗುವಂದಿ‍ತಯ್ಯಾ. ಆಗಮ ಹೆರತೊಲಗಿದ್ದು ಕೂಡಲಸಂಗ ಮಾದಾರಚೆನ್ನಯ್ಯನ ಮನೆಯಲುಂಡ ಕಾರಣ" ಎನ್ನುತ್ತಾನೆ.

ವರ್ಗಭೇದ, ವರ್ಣಭೇದಗಳ ನಿರಾಕರಣೆಯ ಮೂಲದ ವೇದಾದಿಗಳನ್ನು ವಚನಕಾರರು ಸ್ಪಷ್ಟವಾಗಿ ನಿರಾಕರಿಸಿದರು.

ಬಸವಣ್ಣನ ವಚನವೊಂದು ಕ್ರಾಂತಿಕಾರಕವಾಗಿದೆ.

ಆದಿಪುರಾಣ ಅಸುರರಿಗೆ ಮಾರಿ
ವೇದಪುರಾಣ ಹೋತಿಂಗೆ ಮಾರಿ
ರಾಮಪುರಾಣ ರಕ್ಕಸರಿಗೆ ಮಾರಿ
ಭಾರತಪುರಾಣ ಗೋತ್ರಕ್ಕೆ ಮಾರಿ
ಎಲ್ಲಾಪುರಾಣ ಕರ್ಮಕ್ಕೆ ಮಾರಿ
ನಿಮ್ಮ ಪುರಾಣಕ್ಕೆ ಪ್ರತಿಯಿಲ್ಲ ಕೂಡಲಸಂಗಮದೇವಾ

ವೇದವನೋದಿದಡೇನು ಶಾಸ್ತ್ರವ ಕೇಳಿದಡೇನಯ್ಯಾ
ಜಪವ ಮಾಡಿದಡೇನು ತಪವ ಮಾಡಿದಡೇನಯ್ಯಾ
ಏನ ಮಾಡಿದಡೇನು
ನಮ್ಮ ಕೂಡಲಸಂಗಯ್ಯನ ಮನಮುಟ್ಟದನ್ನಕ್ಕ.

ಅಲ್ಲಮಪ್ರಭುಗಳು ವೇದ ಶಾಸ್ತ್ರಗಳನ್ನು ನಿರಾಕರಿಸುವ ವಚನ ಅರ್ಥಪೂರ್ಣವಾಗಿದೆ.

ಅಜ್ಞಾನವೆಂಬ ತೊಟ್ಟಿಲೊಳಗೆ ಜ್ಞಾನವೆಂಬ ಶಿಶುವ ಮಲಗಿಸಿ
ಸಕಲ ವೇದ ಶಾಸ್ತ್ರವೆಂಬ ನೇಣಕಟ್ಟಿ
ಹಿಡಿದು ತೂಗಿ ಜೋಗುಳವಾಡುತ್ತಿದ್ದಾಳೆ ಭ್ರಾಂತಿಯೆಂಬ ತಾಯಿ
ತೊಟ್ಟಿಲು ಮುರಿದು ನೇಣುಹರಿದು ಜೋಗುಳನಿಂದಲ್ಲದೆ
ಗುಹೇಶ್ವರನೆಂಬ ಲಿಂಗವ ಕಾಣಬಾರದು.

**ಶುಭಲಗ್ನ – ಪುಣ್ಯಕ್ಷೇತ್ರ :** ಪಟ್ಟಭದ್ರ ಪುರೋಹಿತಶಾಹಿಗಳು ಸೃಷ್ಟಿಸಿದ ಭ್ರಮೆಗಳಲ್ಲಿ ತೀರ್ಥಕ್ಷೇತ್ರಗಳ ಮಹಿಮೆಗಳು ಕೂಡ ಒಂದು. ಪುಣ್ಯಕ್ಷೇತ್ರಗಳ ಯಾತ್ರೆ ಮಾಡಿದರೆ ಪುಣ್ಯ ಸಂಪಾದನೆಯಾಗುತ್ತದೆ ಎಂದು ಜನರನ್ನು ನಂಬಿಸಿ ಇಂದಿಗೂ ಜನರನ್ನು ಶೋಷಿಸುವ ಸಂಗತಿ ಅವ್ಯಾಹತವಾಗಿ ನಡೆಯುತ್ತಲೇ ಇದೆ. ಹನ್ನೆರಡನೇ ಶತಮಾನದಲ್ಲಿ ಇವುಗಳನ್ನು ಕುರಿತ ಭ್ರಮೆಯ ಹಾವಳಿ ಹೆಚ್ಚಾಗಿಯೇ ಇರಬೇಕು. ಜನಮಾನಸದಲ್ಲಿ ಇದ್ದ ಭ್ರಮೆಗಳನ್ನು ಆಮೂಲಾಗ್ರವಾಗಿ ಕಿತ್ತುಹಾಕುವ ಕೆಲಸಕ್ಕೆ ಕೈಹಾಕಿದರು. ಕ್ರಾಂತಿಕಾರಿಯಾದ ಅಂಬಿಗರ ಚೌಡಯ್ಯ **"ಕಾಶಿಯಾತ್ರೆಗೆ ಹೋದೆವೆಂಬ ದೇಸಿಮೂಳರ ಮಾತ ಕೇಳಲಾಗದು, ಕೇದಾರಕ್ಕೆ ಹೋದೆವೆಂಬ ಹೇಸಿಹೀನರ ನುಡಿಯ ಲಾಲಿಸಲಾಗದು ಸೇತುಬಂಧ ರಾಮೇಶ್ವರಕ್ಕೆ ಹೋದೆವೆಂಬ ಸರ್ವಹೀನರ ಮುಖವ ನೋಡಲಾಗದು"** ಎಂದು ಹೇಳುತ್ತಾನೆ. ಇದಕ್ಕೆ ಪರ್ಯಾಯವಾಗಿ ಹೇಳುವ ಜೇಡರ ದಾಸಿಮಯ್ಯ.

ಸತ್ಯದ ನುಡಿ ತೀರ್ಥ
ಭಕ್ತಿಯ ನಡೆ ತೀರ್ಥ
ಹರಿವ ನದಿ ಎತ್ತಣ ತೀರ್ಥ

ಎನ್ನುತ್ತಾನೆ. ತಾನಿರುವಲ್ಲಿಯೇ ತನ್ನ ನಡೆನುಡಿಯಲ್ಲಿಯೇ ತೀರ್ಥದರ್ಶನ ಸಾಧ್ಯವಿದೆ ಎಂದು ಸೂಚಿಸುತ್ತಾನೆ.

ಇಂದಿಗೂ ನಮ್ಮ ಸಮಾಜವನ್ನು ಕಾಡುತ್ತಿರುವ ಪ್ರಬಲ ಪಿಡುಗೆಂದರೆ ಒಳ್ಳೆಯ ಕಾಲ, ಕೆಟ್ಟ ಕಾಲ ಒಳ್ಳೆಯ ದಿನ, ಕೆಟ್ಟ ದಿನ ಎಂಬ ಸಂಗತಿ ಶುಭಲಗ್ನ ಚಂದ್ರಬಲ, ತಾರಾಬಲಗಳ ಕಾರಣದಿಂದ ಎಷ್ಟೋ ಕೆಲಸಗಳು ನಿಂತುಹೋಗಿವೆ. ಇಂತಹ ಮೌಢ್ಯತೆಯ ವಿರುದ್ಧ ಸಮರ ಸಾರಿದ ವಚನಕಾರರು ಹೊಸ ಆಲೋಚನೆಗಳನ್ನು ಪರ್ಯಾಯವಾಗಿ ಹುಟ್ಟುಹಾಕಲೆತ್ನಿಸಿದರು.

ಈ ದಿಕ್ಕಿನಲ್ಲಿ ದೃಢವಾದ ಹೆಜ್ಜೆಯಿಟ್ಟ ಜೇಡರ ದಾಸಿಮಯ್ಯ ನಂಬಿಕೆಯನ್ನು ಖಂಡಿಸುತ್ತ, **"ಹೊತ್ತಾರೆ ಅಮಾವಾಸ್ಯೆ ಮಟ್ಟಮಧ್ಯಾಹ್ನ, ಸಂಕ್ರಾಂತಿ ಅಸ್ತಮಾನ ಪೌರ್ಣಮಿ ಹುಣ್ಣಿಮೆ ಎಂದೇಕೆ"** ಎನ್ನುತ್ತಾ 'ಭಕ್ತನ ಮನೆಯೆ ವಾರಣಾಸಿ' ಎಂದಿದ್ದಾನೆ.

ಈ ದಿಕ್ಕಿನಲ್ಲಿ ಮತ್ತು ಮುಂದುವರೆದ ಬಸವಣ್ಣ **"ಲಗ್ನವೆಲ್ಲಿಯದೊ ವಿಘ್ನವೆಲ್ಲಿಯದೊ ಭವಕರ್ಮವೆಲ್ಲಿಯದೊ"** ಎಂದು ಇಡಿಯಾಗಿ ಶುಭಲಗ್ನದ ವಿಚಾರವನ್ನೇ ನಿರಾಕರಿಸುತ್ತಾನೆ.

ಎಮ್ಮವರು ಬೆಸಗೊಂಡಡೆ ಶುಭಲಗ್ನವೆನ್ನಿರಯ್ಯಾ
ರಾಶಿಕೂಟ ಋಣ ಸಂಬಂಧ ಉಂಟೆಂದು ಹೇಳಿರಯ್ಯಾ
ಚಂದ್ರಬಲ ತಾರಾಬಲವುಂಟೆಂದು ಹೇಳಿರಯ್ಯಾ
ನಾಳಿನ ದಿನಕ್ಕಿಂದಿನ ದಿನ ಲೇಸೆಂದು ಹೇಳಿರಯ್ಯಾ
ಕೂಡಲ ಸಂಗಮದೇವನ ಪೂಜಿಸಿದ ಫಲ ನಿಮ್ಮದಯ್ಯಾ

ಎನ್ನುವ ಮೂಲಕ ಲಗ್ನ – ಕಾಲ – ಗಳಿಗೆಯ ನಂಬಿಕೆಯನ್ನು ನಿರಾಕರಿಸಲು ಕರೆಕೊಡುತ್ತಾನೆ. ಚೆನ್ನಬಸವಣ್ಣ ಈ ದೃಷ್ಟಿಯಲ್ಲಿ ತನ್ನ ಕ್ರಾಂತಿಕಾರಕ ಚಿಂತನೆಗಳಿಂದ ಗಮನ ಸೆಳೆಯುತ್ತಾನೆ.

ಸೋಮವಾರ ಮಂಗಳವಾರ ಶಿವರಾತ್ರಿಯೆಂದು ಮಾಡುವ
ಭಕ್ತರ ಲಿಂಗಭಕ್ತರಿಗೆ ನಾನೆಂತು ಸರಿಯೆಂಬೆನಯ್ಯಾ
ದಿನ ಶ್ರೇಷ್ಠವೋ ಲಿಂಗ ಶ್ರೇಷ್ಠವೋ
ದಿನ ಶ್ರೇಷ್ಠವೆಂದು ಮಾಡುವ
ಪಂಚಮಹಾಪಾತಕರ ಮುಖವ ನೋಡಲಾಗದು
ಕೂಡಲ ಚೆನ್ನಸಂಗಯ್ಯ ಇಂಥವರ ಮುಖವ ನೋಡಲಾಗದು

ಎನ್ನುತ್ತಾನೆ. ಹಾಗೆ ಆಚರಿಸುವವರನ್ನು ಪಂಚಮಹಾಪಾತಕರು ಎಂದು ಕರೆಯುವ

ಚೆನ್ನಬಸವಣ್ಣ ಲಗ್ನ, ತಿಥಿ, ವಾರ, ನಕ್ಷತ್ರಗಳನ್ನು ವಿರೋಧಿಸಿದ್ದು ಮಾತ್ರವಲ್ಲದೆ ಸೂತಕ ಸಂಪ್ರದಾಯವನ್ನು ಖಡಾಖಂಡಿತವಾಗಿ ನಿರಾಕರಿಸುತ್ತಾರೆ.

> ಜಾತಿ ಸೂತಕ ಬಿಡದು ಜನನ ಸೂತಕ ಬಿಡದು
> ಪ್ರೇತ ಸೂತಕ ಬಿಡದು ರಜ ಸೂತಕ ಬಿಡದು
> ಎಂಜಲು ಸೂತಕ ಬಿಡದು, ಭ್ರಾಂತು ಸೂತಕ ಬಿಡದು
> ವರ್ಣ ಸೂತಕ ಬಿಡದು
> ಇವರೆಂತು ಭಕ್ತರಹರು
> ಹೂಸಿ ಹುಂಡನ ಮಾಡಿದಲ್ಲಿ ಬಾಯಿಗೆ ಬೆಲ್ಲವ ತೊಡೆದಲ್ಲಿ
> ಸದ್ಗುರು ಲಿಂಗವು ಮೂಗ ಕೊಯ್ಯದೆ ಮಾಬನೆ
> ಕಾಡು ಕಿಚ್ಚಿನ ಕೈಯಲ್ಲಿ ಕರಡದ ಹುಲ್ಲ ಕೊಯ್ಯಿಸಿದಂತಿರಬೇಕು ಭಕ್ತಿ
> ಹಿಂದೆ ಮೆದೆಯಿಲ್ಲ ಮುಂದೆ ಹುಲ್ಲಿಲ್ಲ
> ಇದು ಕಾರಣ ಕೂಡಲ ಚೆನ್ನಸಂಗನ ಭಕ್ತಿಸ್ಥಲ ನಿಮ್ಮ ಶರಣಗಲ್ಲದೆ ಅಳವಡದು.

ಹೀಗೆ ಹಲವು ಸೂತಕಗಳ ಮೂಲಕ ಭಯಹುಟ್ಟಿಸಿ ಜನರನ್ನು ತಮ್ಮ ಹಿಡಿತದಲ್ಲಿಟ್ಟು ಕೊಳ್ಳುವ ಪುರೋಹಿತಶಾಹಿ ಹುನ್ನಾರವನ್ನು ಶರಣರು ಪ್ರಶ್ನಿಸಿದ್ದು ಸಹಜವಾಗಿದೆ.

**ಕುಲ–ಜಾತಿ :** ಭಾರತೀಯ ಗಣ ಸಮಾಜವನ್ನು ವರ್ಣವ್ಯವಸ್ಥೆಯ ಮೂಲಕ ಒಡೆದು ಅವುಗಳಿಗಿಂತ ಕೆಳಗಿದ್ದವರನ್ನು ಅಂತ್ಯಜರು, ಪಂಚಮರು ಎಂದು ಕರೆದು ಜಾತಿ ಉಪಜಾತಿಗಳು ರೂಪುಗೊಂಡು ಮನುಷ್ಯರು ಒಂದಾಗಿ ಬದುಕಲಾರದ ಸ್ಥಿತಿ ನಿರ್ಮಿತವಾಯಿತು. ಜಾತಿ ಆಧಾರಿತ ಸಮಾಜವನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಂಡು ಕೆಲವೇ ಜನರು ತಮಗೆ ಬೇಕಾದಂತೆ ಶೋಷಿಸುವ ವ್ಯವಸ್ಥೆ ನಿರ್ಮಾಣವಾಗಿ ಸಾವಿರಾರು ವರ್ಷಗಳೇ ಕಳೆದಿವೆ. ಇದರ ವಿರುದ್ಧವಾಗಿ ಶರಣರು ಬಂಡೆದ್ದರು.

ಜಾತಿ ಸಂಘರ್ಷದ ವಿಚಾರದಲ್ಲಿ ಎಲ್ಲರಿಗಿಂತ ಹೆಚ್ಚು ಮಾನಸಿಕ ಸಂಘರ್ಷವನ್ನು ಹೊಂದಿದ್ದ ಬಸವಣ್ಣ "ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯಾ" ಎಂದು ಹೇಳುವ ಮೂಲಕ 'ಜಾತಿ'ಯ ಸಂಕೋಲೆಯಿಂದ ಬಿಡಿಸಿಕೊಂಡು ಎಲ್ಲರವನಾಗುವ ಅಭೀಪ್ಸೆಯನ್ನು ವ್ಯಕ್ತಪಡಿಸುತ್ತಾನೆ.

ಹೊಲೆಯೆಂಬುದು ವ್ಯಕ್ತಿಗೆ ಸಾಲದೆ ನೆಲಕ್ಕೂ ಅಂಟಿರುವುದನ್ನು ವಿರೋಧಿಸಲು ಬಸವಣ್ಣ –

> ನೆಲನೊಂದೆ ಹೊಲೆಗೇರಿ ಶಿವಾಲಯಕ್ಕೆ
> ಜಲವೊಂದೆ ಶೌಚಾಚಮನಕ್ಕೆ,
> ಕುಲವೊಂದೆ ತನ್ನ ತಾನರಿದವಂಗೆ,
> ಫಲವೊಂದೆ ಷಡುದರುಶನ ಮುಕ್ತಿಗೆ
> ನಿಲವೊಂದೆ ಕೂಡಲಸಂಗಮದೇವಾ ನಿಮ್ಮನರಿದವಂಗೆ

ಎಂದು ಸ್ಪಷ್ಟಪಡಿಸಿದ್ದಾನೆ. ಮಹರ್ಷಿಗಳಲ್ಲಿ ಕೆಲವರು ಯಾವ್ಯಾವ ಜಾತಿಗಳಿಗೆ ಸೇರಿದವರು ಎಂಬುದನ್ನು ತಿಳಿಸಿ ಹೇಳುವ ಬಸವಣ್ಣ –

> ವ್ಯಾಸ ಬೋವಿತಿಯ ಮಗ ಮಾರ್ಕಾಂಡೇಯ ಮಾತಂಗಿಯ ಮಗ
> ಮಂಡೋದರಿ ಕಪ್ಪೆಯ ಮಗಳು
> ಕುಲವನರಸದಿರಿಂಭೋ ಕುಲದಿಂದ ಮುನ್ನೇನಾದಿರಿಂಬೊ
> ಸಾಕ್ಷಾತ್ ಅಗಸ್ತ್ಯ ಕಬ್ಬಿಲ ದೂರ್ವಾಸ ಮುಚ್ಚಿಗ ಕಶ್ಯಪ ಕಮ್ಮಾರ
> ಕೌಂಡಿನ್ಯನೆಂಬ ಋಷಿ ಮೂರು ಭುವನವರಿಯೆ ನಾವಿದ ಕಾಣಿಭೋ
> ನಮ್ಮ ಕೂಡಲಸಂಗನ ವಚನವಿಂತೆಂದುದು
> ಶ್ವಪಚೋಪಿಯಾದಡೇನು ಶಿವಭಕ್ತನೆ ಕುಲಜಂಭೋ

ಎಂದು ಸಾದ್ಯಂತವಾಗಿ ವಿವರಿಸಿದ್ದಾನೆ.

ವಿಪ್ರರೂ ತಮ್ಮ ಜೊತೆ ಸೇರಲು ಅರ್ಹರೆನ್ನುವಂತೆ "ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರೆಲ್ಲರನೊಂದೆ ಎಂಬೆ" ಎನ್ನುತ್ತಲೇ ಜಾತಿರಹಿತ ಸಮಾಜದ ಸ್ವರೂಪವನ್ನು ಮುಂದಿಡುತ್ತಾನೆ. ಜಾತಿಯ ತಾರತಮ್ಯವನ್ನು ತೊಡೆದುಹಾಕಲು ಬಸವಣ್ಣನವರು ಇಷ್ಟೊಂದು ಗಮನಹರಿಸಿರುವುದನ್ನು ನೋಡಿದರೆ ಶರಣ ಚಳವಳಿಯ ಆದ್ಯತೆಯಾಗಿತ್ತು ಎಂದು ತಿಳಿದುಬರುತ್ತದೆ.

ಜಾತಿ ವಿಚಾರದಲ್ಲಿ ಚೆನ್ನಬಸವಣ್ಣನು ತಾರ್ಕಿಕವಾದವನ್ನು ಮಂಡಿಸುತ್ತ "ಧರೆಗೆ ಸೂತಕ ವಾರಿಧಿಗೆ ಹೊಲೆ ಉರಿವ ಅನಿಲಂಗೆ ಜಾತಿ ಸೂತಕವುಂಟೆ" ಎಂದು ಪ್ರಶ್ನಿಸುತ್ತಾನೆ. ಸಿದ್ಧರಾಮನು ಸಹ ಕುಲವ ನೋಳ್ಪಡೆ ಹುರುಳಿಲ್ಲ" ಎಂದು ಹೇಳಿ "ಜಾತಿ ವಿಜಾತಿ ನೀರು ಕುಡಿಯ ಹೋದರೆ ಸುಡು ಹೋಗೆಂದು ನೂಕಿತ್ತೆ ಆ ಜಲವು" ಎಂದು ಪ್ರಶ್ನಿಸುತ್ತಾನೆ.

"ಎಡ ಬಲವೆಂದೇನೂ ನಿಮ್ಮ ಅಡಿಗಳನರಿದವಂಗೆ" ಎಂದು ಭಿನ್ನತೆಯನ್ನು ಸರಿಸಲು ಹಡಪದ ಅಪ್ಪಣ್ಣ ಪ್ರಯತ್ನಿಸುತ್ತಾನೆ.

ಹೀಗೆ ಅನೇಕ ವಚನಕಾರರು ಜಾತಿಯ ವಿಚಾರದಲ್ಲಿ ಸ್ವತಃ ಕೀಳುತನದ ನಿಂದೆಗೆ ಗುರಿಯಾದ ಕಾರಣ ತಮಗಾದ ನೋವು ಅಪಮಾನಗಳನ್ನು ಪರಿಣಾಮಕಾರಿಯಾಗಿ ವಚನಗಳಲ್ಲಿ ಅಭಿವ್ಯಕ್ತಿಸಿ ಪರ್ಯಾಯ ಸಂಸ್ಕೃತಿಯ ನಿರ್ಮಾಣದಲ್ಲಿ ತೊಡಗಿರುವುದು ಎದ್ದು ಕಾಣುವ ಸಂಗತಿ.

**ಕಾಯಕ:** ವಚನಕಾರರು ಪ್ರತಿಪಾದಿಸುವ ಪ್ರಮುಖ ಪರಿಕಲ್ಪನೆ ಎಂದರೆ ಕಾಯಕ. ಸಮಾಜದ ವಿಭಿನ್ನ ಸ್ತರಗಳಿಂದ ಬಂದ ಶರಣರೆಲ್ಲರೂ ಕಾಯಕಜೀವಿಗಳೇ ಆಗಿದ್ದರು. ಕೆಲಸ ಮಾಡುವವರು ಶ್ರಮದ ಫಲವನ್ನು ಉತ್ತಮರು ಉಣ್ಣುವ ಪರಂಪರೆ ವಚನಕಾರರ ಕಾಲಕ್ಕಾಗಲೇ ಸ್ಥಾಪಿತವಾಗಿತ್ತು. ಪ್ರತಿಯೊಬ್ಬರೂ ಕಾಯವನ್ನು ದಂಡಿಸಿ ಕಾಯಕ

ಮಾಡಬೇಕೆಂಬುದು ಕಡ್ಡಾಯ ಮಾಡಿದ ಶರಣರು ಶ್ರಮದ ಘನತೆಗೆ ಗೌರವವನ್ನು ನೀಡಿದರು. ಕಾಯಕ ಮಾಡದೆ ಬದುಕುತ್ತಿದ್ದವರಿಗೆ ಎಚ್ಚರಿಸುವ ಕೆಲಸವನ್ನು ಅದರ ಮೂಲಕ ಕಾಯಕದ ಮಹತ್ವವನ್ನು ಸಾರುವುದನ್ನು ಮಾಡಬೇಕಿತ್ತು. ಕಾಯಕ ಮಾಡುವಾಗ ಕೂಡ ಅದು ಪರರೊಡವೆಯನ್ನು ಮುಟ್ಟದ ಸತ್ಯಶುದ್ಧ ಕಾಯಕ ಆಗಿರಬೇಕು. ಗುರುವಾದರೂ ಕಾಯಕದಿಂದಲೇ ಬದುಕನ್ನು ಸಾಗಿಸಬೇಕು ಎಂಬುದು ಮುಖ್ಯ.

ತನುಮನ ಬಳಲದೆ ಉದ್ದಂಡ ವೃತ್ತಿಯಲ್ಲಿ ಧನವ
ತಂದು ಭಕ್ತನಾದೆನೆಂದು ತೋರದಿರು.
ಅವ ಪರಧನ ಚೋರ ಪಾಪಿ

ಎಂದು ವಾಮಮಾರ್ಗದಲ್ಲಿ ಹಣ ಮಾಡುವುದನ್ನು ಮಡಿವಾಳ ಮಾಚಯ್ಯ ವಿರೋಧಿಸುತ್ತಾನೆ. ಕಾಯಕ ಮಾಡುವ ಭಕ್ತ ಇನ್ನೊಬ್ಬರನ್ನು ಕಾಡಬಾರದೆಂದು ಆಯ್ದಕ್ಕಿ ಮಾರಯ್ಯ ಎಚ್ಚರಿಸುತ್ತಾನೆ. ಹಾಗೆಯೇ "ಸತ್ಯಶುದ್ಧ ಕಾಯಕದಲ್ಲಿ ಬಂದವ ದ್ರವ್ಯದಿಂದಲ್ಲದೆ ನೇಮದ ಕೂಲಿಯ ಬಿಟ್ಟು ಹೇಮದಾಸೆ ಕಾಮದಾಸೆಗೆ ದ್ರವ್ಯವ ಹಿಡಿದರೆ ತಾನು ಮಾಡಿದ್ದೆಲ್ಲ ವ್ಯರ್ಥ" ಎಂಬುದಾಗಿ ನುಲಿಯ ಚಂದಯ್ಯ ಪ್ರತಿಪಾದಿಸುತ್ತಾನೆ.

ಯಾವುದೇ ವೃತ್ತಿ ಮಾಡಿದರೂ ಅದು ಹೇಗಿರಬೇಕು ಎಂದು ಮೆರೆಮಿಂಡಯ್ಯ ಹೇಳುತ್ತ "ಅಸಿಯಾಗಲಿ ಕೃಷಿಯಾಗಲಿ ವಾಚಕ ವಾಣಿಜ್ಯ ಮಸಿಯಾಗಲೀ ಮಾಡುವಲ್ಲಿ ಹುಸಿಯಿಲ್ಲದಿರಬೇಕು" ಎಂಬುದಾಗಿ ಹೇಳಿದ್ದಾನೆ. ಎಲ್ಲಾ ವೃತ್ತಿಗಳಲ್ಲೂ ಪರಿಶುದ್ಧತೆ ಕಾಪಾಡಿಕೊಳ್ಳಬೇಕು ಎಂಬುದಾಗಿ ಹೇಳುವ ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವ "ಸತ್ಯ ಶುದ್ಧ ಕಾಯಕವಿಲ್ಲದುದು ಕಾಯಕವಲ್ಲ" ಎಂದು ಸಾರುತ್ತಾಳೆ.

ಕಾಯಕದಲ್ಲಿ ನಿರತನಾದಡೆ
ಗುರುದರ್ಶನವಾದಡೂ ಮರೆಯಬೇಕು.
ಲಿಂಗಪೂಜೆಯಾದಡೂ ಮರೆಯಬೇಕು.
ಜಂಗಮ ಮುಂದೆ ಎಂದಿದ್ದಡೂ ಹಂಗ ಹರಿಯಬೇಕು
ಕಾಯಕವೇ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು.

ಕಾಯಕದ ಮೂಲಕವೇ ಕೈಲಾಸವನ್ನು ಕಾಣಬಹುದೆಂದು ಸಾರಿ ಕಾಯಕದಲ್ಲಿ ನಿರತನಾದಡೆ ಗುರುದರ್ಶನವಾದರೂ ಮರೆಯಬೇಕು, ಲಿಂಗಪೂಜೆಯನ್ನಾದರೂ ಮರೆಯಬೇಕು ಎಂಬ ಕ್ರಾಂತಿಕಾರಕ ಚಿಂತನೆಯನ್ನು ನೀಡಿ ಕಾಯಕದ ಮಹತ್ವವನ್ನು ಜಗತ್ತಿಗೆ ಸಾರಿದ ಕೀರ್ತಿ ಆಯ್ದಕ್ಕಿ ಮಾರಯ್ಯನವರಿಗೆ ಸಲ್ಲಬೇಕಾಗುತ್ತದೆ. ಕಾಯಕ ಜೀವಿಗಳಾದ ಶರಣರು ವೃತ್ತಿಗೌರವ ಶ್ರಮಗೌರವಗಳನ್ನು ಕುರಿತು ಹೇಳಿರುವ ಮಾತುಗಳು ಸಾರ್ವಕಾಲಿಕವಾಗಿವೆ.

**ನಡೆ ನುಡಿ :** ಶಿವಶರಣರು ವ್ಯಕ್ತಿಯ ಶುದ್ಧ ಬದುಕಿಗೆ ಆದ್ಯತೆಯನ್ನು ನೀಡಿದವರು. ನಡೆ ನುಡಿಗೆ ಮಹತ್ವವನ್ನು ಲೋಕಕ್ಕೆ ಸಾರಿದವರು. ವಚನಕಾರರು ಅಂತರಂಗಶುದ್ಧಿ, ಬಹಿರಂಗ ಶುದ್ಧಿ ಎನ್ನುವ ಮೂಲಕ ನಡೆ ನುಡಿ ಶುದ್ಧಿ ಎಂದು ಹೊಸ ವ್ಯಾಖ್ಯಾನ ನೀಡಿದರು. ಬಸವಣ್ಣನವರ ಇವನಾರವ ಇವನಾರವ ಎಂದೆನಿಸದಿರಯ್ಯ ಇವನಮ್ಮವ ಇವನಮ್ಮವ ಎಂದೆನಿಸಯ್ಯ ಎಂಬುದು ಅವರ ಸಾಮಾಜಿಕ ಸಾರ್ವತ್ರಿಕ ಆಶಯವಾಗಿತ್ತು. "ನುಡಿಗೆ ತಕ್ಕ ನಡೆಯ ಕಂಡಡೆ" ಅಂಥ ವ್ಯಕ್ತಿಗಳನ್ನು ಅಸಾಮಾನ್ಯರು ಎಂದು ನಮಿಸುತ್ತಾರೆ. ಇದನ್ನು ಸಾಧಿಸಿದ ಶಿವಭಕ್ತರನ್ನು ಗೌರವಿಸಿ "ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ" ಎಂದು ಮನದುಂಬಿ ನುಡಿದಿದ್ದಾರೆ. ಮನುಷ್ಯರ ನಡುವೆ ಕೂಡಿ ಬಾಳುವ ಸಾಮರಸ್ಯ ಅಗತ್ಯ ಎಂಬ ಕಾರಣದಿಂದಲೇ "ಕಾಗೆ ಒಂದಗುಳ ಕಂಡಡೆ ಕೂಗಿ ಕರೆಯದೆ ತನ್ನ ಬಳಗವ ಎಂದು ಹೇಳಿ ಮನುಷ್ಯರು ಹಂಚಿಕೊಂಡು ಬದುಕಬೇಕೆಂದು ಪ್ರತಿಪಾದಿಸುತ್ತಾರೆ. ಸಮಾಜಜೀವನದಲ್ಲಿ ಮನುಷ್ಯರ ನಡುವೆ ಸುಮಧುರ ಸಂಬಂಧದ ಅಗತ್ಯವನ್ನು ಬಸವಣ್ಣನ ಹಾಗೆ ಮನಗಂಡವರಿಲ್ಲ.

ಏನು ಬಂದಿರಿ ಹದುಳವಿದ್ದಿರೆ
ಎಂದರೆ ನಿಮ್ಮೈಸಿರಿ ಹಾರಿಹೋಹುದೆ?
ಮೃದುವಚನವೆ ಸಕಲ ತಪಂಗಳಯ್ಯಾ
ಕಳಬೇಡ ಕೊಲಬೇಡ ಹುಸಿಯ ನುಡಿಯಲುಬೇಡ
ಮುನಿಯಬೇಡ ಅನ್ಯರಿಗೆ ಅಸಹ್ಯಪಡಬೇಡ
ತನ್ನ ಬಣ್ಣಿಸಬೇಡ ಇದಿರ ಹಳಿಯಲುಬೇಡ

ಎಂಬ ಮಾತುಗಳು ಇಡೀ ಶರಣಧರ್ಮದ ಪರ್ಯಾಯ ಸಂಸ್ಕೃತಿಯ ಸರ್ವಸಾರವನ್ನು ಸೂತ್ರೀಕರಿಸುವಂತಿವೆ. ನಡೆ ನುಡಿ ಅಂತರಂಗ – ಬಹಿರಂಗ ಶುದ್ಧಿ ವಿಚಾರದಲ್ಲಿ ಅನೇಕ ವಚನಕಾರರು ತಮ್ಮ ನಿಲುವನ್ನು ದಾಖಲಿಸಿದ್ದಾರೆ. ನಡೆ ನುಡಿ ಒಂದಾಗಿರಬೇಕು ಎನ್ನುವುದೇ ಶರಣರು ಸಮಾಜಕ್ಕೆ ಕೊಟ್ಟ ಸಂದೇಶ ಮತ್ತು ಬದುಕಿಗೆ ಕೊಟ್ಟ ಸಿದ್ಧಾಂತ.

**ಅರಿವು :** ವಚನಕಾರರು ಪರ್ಯಾಯ ಸಂಸ್ಕೃತಿಯನ್ನು ರೂಪಿಸುವ ಹೊತ್ತಿನಲ್ಲಿ ಪ್ರತಿಯೊಬ್ಬ ಶರಣ ಶರಣೆಯೂ ಅರಿವನ್ನು ಗಳಿಸಿಕೊಳ್ಳಬೇಕೆಂಬ ಆಶಯದಿಂದಲೇ ಮಾತನಾಡಿದ್ದಾರೆ. ವೇದಾದಿಗಳ ಅಧ್ಯಯನದಿಂದ ಅರಿವನ್ನು ಪಡೆಯುವ ಮಾರ್ಗ ಎನ್ನುವುದನ್ನು ಶರಣರು ಒಪ್ಪುವುದಿಲ್ಲ. ಆದ್ಯ ವಚನಕಾರ ಜೇಡರ ದಾಸಿಮಯ್ಯ ಹೇಳುವಂತೆ "ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ, ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ ನಿಮ್ಮ ಶರಣರ ಸೂಳ್ನುಡಿಯ ಒಂದರಘಳಿಗೆ ಇತ್ತಡೆ ನಿಮ್ಮನಿತ್ತೆ ರಾಮನಾಥ" ಎಂದು ಹೇಳುವಾಗ ವೇದಾದಿಗಳಿಗಿಂತ ತನ್ನ ಪೂರ್ವದ ಶರಣರು ಕೊಟ್ಟ ಅರಿವನ್ನು ಕುರಿತು ಮಾತನಾಡಿದ್ದಾನೆ. ಮೃಡಶರಣರ ನುಡಿಗಡಣವೆ ಕಡೆಗೀಲು ಎಂದೂ ಸಹ ಹೇಳಿದ್ದಾನೆ.

ವಚನಕಾರರಿಗೆ ತನ್ನನರಿವುದರ ಬಗ್ಗೆ ತೀವ್ರತೆಯಿದೆ. ಇದನ್ನು "ತನ್ನನರಿದವಂಗೆ ಹಿಂದೆ ಮುಂದೆ ಎಂಬುದೊಂದು ಇಲ್ಲ" ಎಂದು ಅಂಬಿಗರ ಚೌಡಯ್ಯ ದೃಢೀಕರಿಸುತ್ತಾನೆ. ಮನಸ್ಸು ಸಮಾಧಾನವಿರುವ ಶರಣನಿಗೆ ಮಠ ಪರ್ವತ ಯಾವುದರ ಗೊಡವೆಯೂ ಬೇಕಿಲ್ಲ. ಅಷ್ಟೇ ಅಲ್ಲ ಮಣಿಯನೆಣಿಸಿ ದಿನವನ್ನು ಕಳೆಯುವುದಕ್ಕಿಂತ ಕ್ಷಣವಾದರೂ "ನಿಜದ ನೆನಹೇ ಸಾಕು." ಏಕೆಂದರೆ ಈ ಕ್ಷಣದ ನಿಜಾನುಭವವೇ ಶರಣನ ಬದುಕಿನ ನಿಜನೆಲೆ. ಭ್ರಮೆಯಳಿದು ನಿಜವು ಸಾಧ್ಯವಾದ ಬಳಿಕ ನೆನೆವುದಿನ್ನಾರನಯ್ಯಾ ಎಂದು ನಿಜದ ದರ್ಶನದತ್ತ ಬೆರಳು ಮಾಡುತ್ತಾನೆ ಅಲ್ಲಮ. ಅರಿವಿನ ವಿಚಾರದಲ್ಲಿ ಹಿರಿದು ಕಿರಿದು ಎಂಬ ಭೇದವಿಲ್ಲ ಎಂದು ಸಾರುವ ಅಲ್ಲಮ "ಕಿರಿಯರಾದಡೇನು ಹಿರಿಯರಾದಡೇನು ಅರಿವಿಂಗೆ ಹಿರಿದು ಕಿರಿದುಂಟೆ" ಎಂದು ಘೋಷಿಸುತ್ತಾನೆ. "ಅರಿವು ಅರಿವು ಎನ್ನುತ್ತೀರಿ ಅರಿವು ಸಾಮಾನ್ಯವೇ, ಹಿಂದಿನ ಹೆಜ್ಜೆಯ ನೋಡಿ ಕಂಡಲ್ಲದೆನಿಂದ ಹೆಜ್ಜೆಯನರಿಯಬಾರದು" ಎಂಬುದು ಅಲ್ಲಮ ನೀಡುವ ಸೂತ್ರ. ಅರಿವು ಎಂಬ ವಿಚಾರದಲ್ಲಿ ವಚನಕಾರರು ತಮ್ಮ ಅನುಭವ ಚಿಂತನೆಗೆ ಗಮನ ನೀಡಿದ್ದಾರೆ. ಅರಿವು ಎನ್ನುವುದು ಅಂತರಂಗ ಬಹಿರಂಗಗಳನ್ನು ಬೆಸೆಯುವ ಸಾಧನ ಎಂಬುದು ಶರಣರ ಗ್ರಹಿಕೆ.

**ಬಯಲು :** ವಚನಕಾರರು ತಾವು ಸಾಧಿಸಹೊರಟ ಗುರಿ ಗಮ್ಯಗಳನ್ನು ಸ್ವರ್ಗ, ನರಕ, ಕೈಲಾಸ ಎಂದು ಕರೆಯಲಿಲ್ಲ. ಅವರ ಹುಡುಕಾಟವೆಲ್ಲ ಯಾವುದನ್ನು ಅವರು "ಶೂನ್ಯ" ಎಂದು ಭಾವಿಸಿದರೋ ಅದರ ಸಂಪಾದನೆಯನ್ನು ಕೇಂದ್ರೀಕರಿಸಿತು. ಈ ಶೂನ್ಯ ಎಂಬುದನ್ನು ಬಯಲು ಎಂದು ಕರೆದು ಎರಡನ್ನೂ ಒಂದೇ ಅರ್ಥದಲ್ಲಿ ಬೆಸೆದಿದ್ದಾರೆ. ಬಸವಣ್ಣ ಇದನ್ನು ಹುಡುಕುವ ರೀತಿ ಅರ್ಥಪೂರ್ಣವಾಗಿದೆ.

> ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ
> ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯ
> ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯ
> ಎನ್ನ ಭವದ ಕೇಡು ನೋಡಯ್ಯ

ಹಡಪದ ಅಪ್ಪಣ್ಣನ ದೃಷ್ಟಿಯಲ್ಲಿ

> ಕಟ್ಟಬೇಕು ಮನವ
> ಮೆಟ್ಟಬೇಕು ಮದವ
> ಸುಟ್ಟುರುಹಬೇಕು ಸಪ್ತವ್ಯಸನಗಳ
> ಆ ತೊಟ್ಟಿಲ ಮುರಿದು ಕಣ್ಣಿಯ ಹರಿದು
> ಆ ಬಟ್ಟಬಯಲಲ್ಲಿ ನಿಲದೆ
> ಬಸವಪ್ರಿಯ ಕೂಡಲ ಚೆನ್ನಬಸವಣ್ಣ

ಸಾಧನೆಯಾಗಬೇಕಾದರೆ ಮೇಲೆ ಹೇಳಿದ ಸಂಗತಿಗಳನ್ನು ನಿಯಂತ್ರಿಸಿದಾಗ ಮಾತ್ರ ಸಾಧ್ಯ ಎನ್ನುತ್ತಾನೆ.

**ದಾಸೋಹ:** ಬಸವಾದಿ ಶರಣರ ಪರಿಕಲ್ಪನೆಯಲ್ಲಿ ಪ್ರತಿಯೊಬ್ಬನೂ ಶಾರೀರಿಕ ಶ್ರಮವಹಿಸಿ ದುಡಿದು ಗಳಿಸಬೇಕು. ಅರ್ಥಶಾಸ್ತ್ರದಲ್ಲಿ ಮೂರು ಮುಖ್ಯ ತತ್ವಗಳಿಗೆ ಪ್ರಾಮುಖ್ಯತೆ ಇದೆ. 1. ಗಳಿಕೆ 2. ಉಳಿಕೆ ಮತ್ತು 3. ಬಳಕೆ. ಈ ಮೂರು ಪರಿಕಲ್ಪನೆಗಳನ್ನು ವಚನಕಾರರು ದಾಸೋಹ ಎಂಬ ತತ್ವದಲ್ಲಿ ಅಳವಡಿಸಿದ್ದಾರೆ. ಜೀವನ ನಿರ್ವಹಣೆಗಾಗಿ ಕಾಯಕವನ್ನು ನಿಷ್ಠೆ, ಪ್ರಾಮಾಣಿಕತೆ, ಶ್ರದ್ಧೆ, ಪ್ರೀತಿ, ಸೇವೆ ಮುಂತಾದ ಭಾವನೆಗಳಿಂದ ಮಾಡಿ ಬಂದ ಗಳಿಕೆಯ ಉಳಿಕೆಯನ್ನು ದಾಸೋಹಕ್ಕಾಗಿ ಬಳಸುವುದು, ಹಂಚುವುದು ಶರಣ ಸಿದ್ಧಾಂತದಲ್ಲಿ ಕಡ್ಡಾಯ ತತ್ವವಾಗಿದೆ. ಶರಣರು ಅರ್ಥಶಾಸ್ತ್ರದ ಮೂಲ ಸಿದ್ಧಾಂತಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಬದುಕಿದವರು.

ದಾಸೋಹದ ಅರ್ಥವಿವರಣೆಯನ್ನು ಡಾ. ಬಾಲಿಯವರು ಕೆಳಗಿನಂತೆ ನೀಡಿದ್ದಾರೆ. "ವಚನಕಾರರ ಮತ್ತೊಂದು ಮಹತ್ವದ ತತ್ವ ದಾಸೋಹ. ಪ್ರತಿಯೊಬ್ಬನೂ ತನ್ನ ಜೀವನ ನಿರ್ವಹಣೆಗೆ ಸಾಕಾಗುವಷ್ಟನ್ನು ಕಾಯಕದಿಂದ ಗಳಿಸುವುದರಿಂದ ತನ್ನ ಶ್ರಮದ ಉಳಿದ ಭಾಗವನ್ನು ಸಮಾಜಕ್ಕೆ ಕೊಡುವುದರ ಬದಲಾಗಿ ತನ್ನ ಸ್ವಂತ ಸಂಪತ್ತಾಗಿ ಸಂಗ್ರಹಿಸುವಂತಿರಲಿಲ್ಲ. ಆದುದರಿಂದ ಕಾಯಕವು ಸಂಪತ್ತಿನ ಕೂಡಿಡುವಿಕೆಯನ್ನು ಪ್ರೋತ್ಸಾಹಿಸುವುದಿಲ್ಲ. ಕಾಯಕವನ್ನು ದಾಸೋಹ ಭಾವನೆಯಿಂದಲೇ ಮಾಡಬೇಕು. ಬಸವಣ್ಣನವರ ದೃಷ್ಟಿಯಲ್ಲಿ ದಾಸೋಹದ ಅರ್ಥವು ವ್ಯಕ್ತಿಯ ಜೀವನ ನಿರ್ವಹಣೆಗಾಗಿ ಮತ್ತು ಸಮಾಜ ಸಂರಕ್ಷಣೆಗಾಗಿ ಮಾಡುವ ಕಠಿಣ ಶ್ರಮವಾಗಿದೆ. ವ್ಯಕ್ತಿಯು ತನ್ನನ್ನು ತಾನು ಒಬ್ಬ ದಾಸೋಹಿ ಎಂದು ಸಮರ್ಪಣೆ ಮಾಡಿಕೊಳ್ಳಬೇಕಾದರೆ ತಾನೊಬ್ಬ ಸಮಾಜಸೇವಕನೆಂದು ಭಾವಿಸಬೇಕು ಮತ್ತು ಸಂಗ್ರಹ ದೃಷ್ಟಿಯನ್ನು ಅಹಂಭಾವವನ್ನು ಖಂಡಿತವಾಗಿ ಬಿಟ್ಟುಬಿಡಬೇಕು. ಆದ್ದರಿಂದ ದೇವರ ಸೊತ್ತು ದೇವರಿಗೆ ಸಲ್ಲಬೇಕೆಂಬ ತತ್ವದ ಮೇಲೆ ದಾಸೋಹ ನಿಂತಿದೆ. ಸಮಾಜದಿಂದ ಬರುವ ಸಂಪತ್ತು ಸಮಾಜಕ್ಕೆ ಸಲ್ಲಬೇಕೆಂಬ ಸಮಾಜದ ಸಮೃದ್ಧಿಗಾಗಿ ಕ್ಷೇಮಕ್ಕಾಗಿ ಜನರೆಲ್ಲ ದುಡಿಯಬೇಕು ಎಂದು ಬಸವಣ್ಣ ಎಚ್ಚರಿಸಿದ್ದಾನೆ. ಏಕೆಂದರೆ ಸಮಾಜವು ದೈವ ಸೃಷ್ಟಿಯಾಗಿದೆ. ಸಮಾಜಕ್ಕಾಗಿ ಮೀಸಲಾಗಿ ದುಡಿಯುವುದರಲ್ಲಿ ತನ್ನದೇ ಆದ ಆನಂದವಿದೆ. ಬಸವಣ್ಣನವರ ವಚನಗಳಲ್ಲಿ ದಾಸೋಹಿಯ ಗುಣಲಕ್ಷಣಗಳನ್ನು ಹೇಳುವ ಎರಡು ವಚನಗಳು ಅರ್ಥಗರ್ಭಿತವಾಗಿವೆ. ಅವು ಭಾರತೀಯ ತತ್ವಜ್ಞಾನದ ಮೂಲ ಬೇರುಗಳನ್ನೇ ಸಡಿಲಿಸಿವೆ. ಶಾರೀರಿಕ ಶ್ರಮವಿಲ್ಲದೆ ಅನಾಯಾಸ ಬಂದ ಧನವನ್ನು ತನ್ನ ಕೀರ್ತಿವಾರ್ತೆಗಾಗಿ ಸಮಾಜಕ್ಕೆ ನೀಡುವುದು ನಿಷಿದ್ಧ.

ತನುಶ್ರಮ ಮಾನಸಿಕ ತೃಪ್ತಿಯಿಂದ ಉಳಿಕೆಯ ಧನವನ್ನು ಸಮಾಜಕ್ಕೆ ಧಾರೆಯೆರೆಯಬೇಕು.

ಜನ್ಮ ಜನ್ಮಕ್ಕೆ ಹೋಗಲೀಯದೆ
ಸೋಹಂ ಎಂದೆನಿಸದೆ
ದಾಸೋಹಂ ಎಂದೆನಿಸಯ್ಯಾ
ಲಿಂಗ ಜಂಗಮ ಪ್ರಸಾದದ ನಿಲವತೋರಿ ಬದುಕಿಸಯ್ಯಾ
ಕೂಡಲಸಂಗಮದೇವಾ ನಿಮ್ಮ ಧರ್ಮ

ಬಸವಣ್ಣನ ವಿಚಾರಕ್ಕೆ ಸಿದ್ದರಾಮ ಶಿವಯೋಗಿಗಳು

ಸೋಹಂ ಎಂಬುದದು ಅಂತರಂಗದ ಮದ ನೋಡಯ್ಯಾ
ಶಿವೋಹಂ ಎಂಬುದದು ಬಹಿರಂಗದ ಮದ ನೋಡಯ್ಯಾ
ಈ ದ್ವಂದ್ವವನಳಿದು ದಾಸೋಹಂ ಎಂದೆನಿಸಯ್ಯಾ
ಕಪಿಲಸಿದ್ಧ ಮಲ್ಲಿಕಾರ್ಜುನಾ

ಹೀಗೆ ವಚನಕಾರರು ತಮ್ಮ ಕಾಲದಲ್ಲಿ ಯಾವ್ಯಾವ ವಿಚಾರಗಳು ಪರಮಶ್ರೇಷ್ಠ ಎಂದು ಹೇಳಲಾಗುತ್ತಿತ್ತೊ ಅವೆಲ್ಲವನ್ನು ತಾರ್ಕಿಕವಾಗಿ ನಿರಾಕರಿಸಿದರು. ಅವುಗಳ ಜಾಗದಲ್ಲಿ ತಾರತಮ್ಯವಿಲ್ಲದ ಸಮಾನತೆಯನ್ನು ಎತ್ತಿ ಹಿಡಿಯುವ ವೈಚಾರಿಕತೆಯಿಂದ ಕೂಡಿದ ವಿಚಾರಗಳನ್ನು ಮುಂದಿಟ್ಟರು. ವರ್ಗ ವರ್ಣಗಳ ಆಧಾರದ ಮೇಲೆ ಸಮಾಜವನ್ನು ಒಡೆದು ಮನುಷ್ಯರ ನಡುವೆ ಭೇದಭಾವ ತುಂಬುತ್ತಿದ್ದ ಆಲೋಚನಾ ಕ್ರಮವನ್ನು ತಿರಸ್ಕರಿಸಿದರು. ಸಮಾಜವನ್ನು ಹೊಸ ಚಿಂತನೆಯ ಆಧಾರದಲ್ಲಿ ಮರುನಿರ್ಮಾಣ ಮಾಡುವ ಆಶಯಗಳನ್ನು ಅರ್ಥಪೂರ್ಣವಾಗಿ ಪ್ರಕಟಪಡಿಸಿದರು.

ವಚನಕಾರರ ದೃಷ್ಟಿ ಮತ್ತು ಗುರಿ ಧ್ಯೇಯ ಪರ್ಯಾಯ ಸಂಸ್ಕೃತಿಯನ್ನು ಕಟ್ಟುವ ಕಡೆಗಿತ್ತು. ಶೋಷಣೆಗೆ ಮೂಲವಾದ ಎಲ್ಲಾ ಸಾಮಾಜಿಕ ಘಟಕಗಳನ್ನು ಟೀಕಿಸುತ್ತ ದೃಢವಾಗಿ ತಿರಸ್ಕರಿಸಿದರು. ಸಾಮಾಜಿಕ ಧಾರ್ಮಿಕ ಶೋಷಣೆಯಿಂದ ಹೊರಬರುವ ಮಾರ್ಗಗಳ ಬಗ್ಗೆ ತಮ್ಮದೇ ರೀತಿಯಲ್ಲಿ ಚಿಂತಿಸಿದರು. ಸಮಾಜದಲ್ಲಿ ಪರಿವರ್ತನೆ ಆಗಬೇಕೆಂದು ಹಂಬಲಿಸಿ ಶ್ರಮ ಸಂಸ್ಕೃತಿಯ ಪರಿಕಲ್ಪನೆಯನ್ನು ಸಮಾಜದ ಮುಂದಿಟ್ಟರು.

ಬಸವಣ್ಣನವರ ಬಗ್ಗೆ ಅವರು 12ನೇ ಶತಮಾನದಲ್ಲಿ ಮಾಡಿದ ಕ್ರಾಂತಿಕಾರಕ ಆಂದೋಲನದ ಬಗ್ಗೆ ರಾಷ್ಟ್ರಕವಿ ಕುವೆಂಪು ಈ ರೀತಿ ನುಡಿನಮನವನ್ನು ಅರ್ಪಿಸಿದ್ದಾರೆ:

ಕಾರ್ತಿಕದ ಕತ್ತಲಲ್ಲಿ ಆಕಾಶ ದೀಪವಾಗಿ
ನೀ ಬಂದೆ
ಬಟ್ಟೆಗೆಟ್ಟವರಿಗೊಂದು ದೊಂದಿ ದಿಕ್ಕಾಗಿ
ಎಂಟು ಶತಮಾನಗಳ ಹಿಂದೆ
ಅಗ್ನಿ ಖಡ್ಗವನಾಂತ ಓ ಅಧ್ಯಾತ್ಮ ಕ್ರಾಂತಿವೀರ
ದೇವದಯೆಯೊಂದು ಹೇ ಧೀರಾವತಾರ

ಶ್ರೀ ಬಸವೇಶ್ವರಾ
ಜಾತಿಪದ್ಧತಿಯ ಹೋಮಕೂಪಕ್ಕೆ
ಬಿದ್ದು ವೈದಿಕರ ಯಜ್ಞತಾಪಕ್ಕೆ
ಬಲಿವೋದ ದಲಿತ ಜೀವರನ್ನೆತ್ತಿ ಮತಿವಿಚಾರಕ್ಕೆ
ಕಾಯಕದ ದಿವ್ಯ ತತ್ವದ ಸುಕ್ಷೇಮ ಧರ್ಮನಾಕಕ್ಕೆ
ನಡೆಸಿದ ಮಹಾತ್ಮನೇ ನಿನಗೆ ನಮೋನಮಃ
ಇಂದಿಗೂ ನಾವು ನಿನ್ನೆತ್ತರಕ್ಕೆ ಏಳಲಾರದೆ ಅಯ್ಯೋ
ಮತದ ಉಸುಬಿಗೆ ಸಿಲುಕಿ ತತ್ತರಿಸುತ್ತಿಹೆವಯ್ಯಾ
ಬಾರಯ್ಯ, ಕೈಹಿಡಿದೆತ್ತಿ ಬದುಕಿಸು ನಮ್ಮನೆಳೆದು
ವರ್ಣಾಶ್ರಮದ ಹೆಸರ ಹೊಲೆಗೆಸರ ವಂಚನೆಯ ಕುಂಡದಿಂದೆ
ಭಕ್ತಿ ಗಂಗೆಯ ನೆರೆದು,
ಭಾಗವತ ಶಕ್ತಿಯಂ ಕರೆದು
ಮತಮೌಢ್ಯದ ಜ್ಞಾನ ಪಂಕವನು ತೊಳೆದು
ಶುಚಿಗೊಳಿಸು ವಿಜ್ಞಾನ ವೇದಾಂತ ತೀರ್ಥದಿಂದೆ

ವಚನಕಾರರು ಏಕಾಂಗಿಗಳಾಗಲಿಲ್ಲ. ತಮ್ಮ ಆತ್ಮೋದ್ಧಾರದ ಸ್ವಾರ್ಥಸಾಧನೆಗಾಗಿ ಲೌಕಿಕ ಬದುಕನ್ನು ತೊರೆದು ಯಾವುದೋ ಗುಹೆಯಲ್ಲಿ ಕುಳಿತು ತಪಸ್ಸು ನಡೆಸಲಿಲ್ಲ. ಬಸವಾದಿ ಶರಣರಿಗೆ ತಮ್ಮ ದಿನನಿತ್ಯದ ಬದುಕೇ ತಪಸ್ಸಾಯಿತು. ತಾವು ಮಾಡುವ ಕಾಯಕವೇ ಕೈಲಾಸವಾಯಿತು. ಸತ್ಯಶುದ್ಧಿ ಕಾಯಕದಿಂದ ಗಳಿಸಿದ್ದನ್ನು ಎಲ್ಲರಿಗೂ ಪ್ರೀತಿಯಿಂದ ಹಂಚಿದ ದಾಸೋಹವೇ ಅವರ ಬದುಕಿನ ತ್ಯಾಗದ ಪೂಜೆಯಾಯಿತು.

ಬಸವಣ್ಣನವರನ್ನು ಕುರಿತು ನಾಡಿನ ಶ್ರೇಷ್ಠ ಕವಿಗಳಾದ ಡಾ. ಜಿ.ಎಸ್. ಶಿವರುದ್ರಪ್ಪನವರು ಈ ರೀತಿಯಲ್ಲಿ ತಮ್ಮ ಕಾವ್ಯನಮನ ಸಲ್ಲಿಸಿದ್ದಾರೆ. ಈ ಕವಿತೆ ಇಡೀ ವಚನ ಚಳವಳಿಯನ್ನು ಕುರಿತ ಭಾಷ್ಯದಂತಿದೆ.

ನೀನಲ್ಲ ಏಕಾಂಗಿ ನೀನಲ್ಲ ಯಾವುದೋ ದೂರ
ಗುಹಾವಾಸದೇಕಾಂತದಲ್ಲಿ ಬದುಕಿದ ಸಿದ್ಧ ಉರ
ದುದ್ದ ಶಿರದುದ್ದವಾದ ನಾನಾ ವರ್ಣಗಳ ಸಂಸಾರ
ದಲೆಗಳ ನಡುವೆ ಹೋರಾಡುತ್ತಲೇ ನಿಂತ ಸಾಧಕ ವೀರ
ನೀನು ಅಧಿಕಾರ ಐಶ್ವರ್ಯಗಳ ನಾಯಿ ಕೂಗಿನ ನಡುವೆ
ಅಜ್ಞಾನಿಗಳ ನಡುವೆ ಪರಮ ಸುಜ್ಞಾನಿಗಳ ನಡುವೆ
ಮತ ಮೌಢ್ಯಗಳ ನಡುವೆ, ಸದ್ದಿರದೆ ಕೈಮುಗಿದು
ನಿಂತ ದೀಪದ ಕಂಬ, ನಿನ್ನ ಸುತ್ತಲೂ ಬಂದು
ಸಂಗಮವಾಯ್ತು ನೂರು ಬೆಳಕಿನ ಬಿಂಬ
ತಮಂಧ ಘನವಾದಂದಿನಾವರಣಗಳ ತುಂಬ
ಕಿರಣ ಸಂಚಾರ ಹೊತ್ತಿ ಕಲ್ಯಾಣವೆನ್ನುವ ಪ್ರಣತಿ
ತೊಳಗಿ ಬೆಳಗಿತ್ತು ಶಿವನ ಪ್ರತಾಪ ಆ ಜ್ಯೋತಿ

ಯಡಿಯಲ್ಲಿ ಕನ್ನಡಕ್ಕೆ ಬಂತು ವಚನೋದಯ ಸ್ಫೂರ್ತಿ
ಇರಬಹುದು ನಿನಗಿಂತ ದೊಡ್ಡವರು ಅನುಭಾವದಲ್ಲಿ
ಮೇಲೇರಿ ಬಯಲಾದವರು ಇರಬಹುದು
ನಿನಗಿಂತಲೂ ದೊಡ್ಡ ತ್ಯಾಗಿಗಳು ವಿರಾಗಿಗಳು
ಇರಲಾರರೆಂದೇ ತೋರುತಿದೆ ನಿನ್ನಂತೆ ನಿನ್ನೊಳಗಿನಂಕು
ಡೊಂಕುಗಳನ್ನು ಕಂಡುಕೊಂಡವರು
ಇರಲಾರರೆಂದೇ ತೋರುತಿದೆ ನಿನ್ನಂತೆ ಒಳಗು ಹೊರಗುಗಳನ್ನು
ಮುಚ್ಚುಮರೆಯಿಲ್ಲದೆಯೆ ದಿನವೂ ಬಿಚ್ಚಿಟ್ಟು
ಒಗೆದು ಮಡಿಮಾಡಿ
ಇಷ್ಟದೈವದ ಗುಡಿಗೆ ನಡೆಮಡಿಯಾಗಿ ಹಾಸಿದವರು;
ಕರ್ತಾರನೀ ಕಮ್ಮಟದ ಅಡಿಗಲ್ಲು
ಸುತ್ತಿಗೆ ನಡುವೆ ಕಡಿಹಕ್ಕೆ ಬಡಿಹಕ್ಕೆ ಸಿಕ್ಕಿ
ಮೃಡನ ಶರಣರ ಕಾಲ ಕಡೆಯಾಣಿಯಾದವರು
ಹೀಗಾಗಿ ಮಾತೆಲ್ಲ ಮುತ್ತಿನಹಾರ ನಡೆಯೆಲ್ಲ ಲಿಂಗವೆ
ಮೆಚ್ಚಿ ಅಹುದೆಂಬ ಪರಿ ಇಲ್ಲಿ ಸಂದದ್ದು ಅಲ್ಲಿಯೂ ಸಲುವಂತೆ
ಬದುಕಿದವ ನೀನು ಸಂಗನ ಮುಂದೆ ಕರ್ಪೂರ ಉರಿದಂತೆ.

ಕನ್ನಡನಾಡಿನಲ್ಲಿ ಹನ್ನೆರಡನೇ ಶತಮಾನದ ವಚನಕಾರರು ತಮ್ಮ ಸಾಮಾಜಿಕ ಚಿಂತನೆ ವೈಚಾರಿಕಪ್ರಜ್ಞೆ ಹಾಗೂ ಸಾರ್ವಕಾಲಿಕ ಆಧ್ಯಾತ್ಮಿಕ ಅನುಭಾವದ ವಿಚಾರಧಾರೆಯ ಮೂಲಕ ಕನ್ನಡ ಸಾಹಿತ್ಯವನ್ನು ಸಂಪದ್ಭರಿತಗೊಳಿಸಿದ್ದಾರೆ. ಮಾತು, ಕೃತಿ, ನಡೆ, ನುಡಿ, ನಂಬಿಕೆಗಳಲ್ಲಿ ಸತ್ಯ ಸಾಕ್ಷಾತ್ಕಾರವನ್ನು ಸಾಧಿಸಿದ್ದಾರೆ. ಬದುಕಿನೊಂದಿಗೆ ಸದಾ ನಡೆಸಿದ ಅನುಸಂಧಾನದಲ್ಲಿ ಜೀವನದರ್ಶನವನ್ನು ಕಂಡುಕೊಂಡಿದ್ದಾರೆ. ಜಗತ್ತಿಗೆ ಬದುಕಿನ ದರ್ಶನ ಮಾಡಿಸಿದ್ದಾರೆ. ಒಂಬತ್ತು ಶತಮಾನಗಳ ಹಿಂದೆ ವಚನಕಾರರು ವಚನ ಸಾಹಿತ್ಯದ ಮೂಲಕ ನಡೆಸಿದ ಚಿಂತನೆ ಇಡೀ ವಿಶ್ವಕ್ಕೆ ಮಾದರಿಯಾಗಿದೆ. ದಿಕ್ಕುಗೆಟ್ಟ ಜಗತ್ತಿಗೆ ಹಾದಿತೋರುವ ಆಶಾಕಿರಣವಾಗಿದೆ.

**ಪರಾಮರ್ಶನ ಗ್ರಂಥಗಳು**


1. ಸಮಗ್ರ ವಚನ ಸಂಪುಟ, ಭಾಗ–1, ಭಾಗ–2, ಕರ್ನಾಟಕ ಸರ್ಕಾರ, ಬೆಂಗಳೂರು
2. ವಚನಗಳಲ್ಲಿ ಸಾಮಾಜಿಕ ಚಿಂತನೆ, ಡಾ. ಸಿ. ಸೋಮಶೇಖರ
3. ಇಹಪರ ವಚನ ಚಿಂತನ ಡಾ. ಸೀ.ಚ. ಯತೀಶ್ವರ
4. ಪರ್ಯಾಯ ಸಂಸ್ಕೃತಿ ವಚನ ಸಂಪುಟ, ಸಂ.: ಡಾ. ಸಿ. ವೀರಣ್ಣ


□

# ಉಡಿಯ ಲಿಂಗವ ಬಿಟ್ಟು ಗುಡಿಯ ಲಿಂಗಕ್ಕೆ ಶರಣೆಂದವರಿಗೇನೆಂಬೆ?...

**ವೆಂಕಟೇಶ ಕೆ. ಜನಾದ್ರಿ, ಕನಕಗಿರಿ**

ಬಹಿರಂಗದಲ್ಲಿ ಶುಚಿತ್ವ ಮಾಡುವವರು, ಮಾಡಿಕೊಳ್ಳುವವರು ಮತ್ತು ಮಾಡಿಸುವವರಿಗೇನು ಈ ನಾಡಿನಲ್ಲಿ ಕೊರತೆಯಿಲ್ಲ. ಆದರೆ ಅಂತರಂಗದ ಶುಚಿತ್ವ ಅಂತರಂಗದ ಶುದ್ಧಿತನ ಮಾಡಿಕೊಳ್ಳುವುದಿರಲಿ ಪ್ರಯತ್ನಿಸುವವರೂ ಕಡಿಮೆಯೇ. ಅಂತರಂಗ ಶುದ್ಧಿ ಮಾಡಿಕೊಳ್ಳುವುದು ಕಷ್ಟ. ಮಾಡಿಸುವವರಂತೂ ಇಲ್ಲವೇ ಇಲ್ಲ. ಹಾಗೆ ಮಾಡಿಸಲೂ ಸಾಧ್ಯವೂ ಇಲ್ಲ. ಬಾಹ್ಯದಲ್ಲಿ ಉಡುವ ತೊಡುವ ವಸ್ತ್ರಗಳ ಜೊತೆಗೆ ಭೌತಿಕವಾದ ಶರೀರದ ಶುಚಿತ್ವವೆಷ್ಟು ಮುಖ್ಯವೋ ಆಂತರ್ಯದ ಶುದ್ಧತೆ ಮತ್ತು ಮನಸ್ಸಿನ ಸ್ವಚ್ಛತೆ ಕಾಪಾಡಿಕೊಂಡರೆ ಆತ ಶರಣನಾಗುತ್ತಾನೆ. ಮಹಾತ್ಮನಾಗುತ್ತಾನೆ. ಈ ಬಗೆಯ ಅಂತರಂಗ-ಬಹಿರಂಗದ ಶುದ್ಧತೆಯೇ ನಿಜವಾದ ಮಡಿತನವಾಗುತ್ತದೆ. ಮಡಿವಂತಿಕೆಯಾಗುತ್ತದೆ. ಅದು ಹಾಗಾಗಬೇಕು.

ಹನ್ನೆರಡನೇ ಶತಮಾನದಲ್ಲಿ ಬಸವಣ್ಣನ ಸಮಕಾಲೀನ ಶರಣರಲ್ಲಿ ಮಡಿವಾಳ ಮಾಚಯ್ಯನವರದ್ದು ಶರಣರ ಬಟ್ಟೆಗಳನ್ನು ಶುಚಿ ಮಾಡಿಕೊಡುವ ಪವಿತ್ರವಾದ ಕಾಯಕ. ಇಲ್ಲಿ ಶರಣರೆಂದರೆ ಬಹಿರಂಗದೊಂದಿಗೆ ಅಂತರಂಗದಲ್ಲಿಯೂ ಶುದ್ಧವಾಗಿರುವವರೆಂಬ ಅರ್ಥ. ಇಂಥ ಶರಣರು ಉಡುವ ಬಟ್ಟೆಗಳನ್ನು ಶುಚಿಗೊಳಿಸಿ ಅವರಿಗೊಪ್ಪಿಸಿ ಅವರ ಶುದ್ಧ ಮನಸ್ಸಿನ ವಿಚಾರಗಳು ಇನ್ನಷ್ಟು ಅರಳುವಂತೆ ಮಾಡುವ ಮಾಚಯ್ಯ ತಂದೆ ನಿಜಕ್ಕೂ ಒಬ್ಬ ಅನುಭಾವಿ ಶರಣ. ಸಾಮಾನ್ಯರು ವಿಷಯವನ್ನು ಮತ್ತು ಅರಿವನ್ನು ಅನುಭವಿಸಬಹುದು. ಆದರೆ ಅನುಭಾವಿಕ ನೆಲೆಯಲ್ಲಿ ಕಂಡುಕೊಂಡವರು ಶರಣರು. ಅವರು ಬರೀ ಓದುವುದು, ಉಪದೇಶ ಮಾಡುವುದನ್ನು ಮಾಡದೇ ತಮ್ಮ ತಮ್ಮ ಕಾಯಕದೊಂದಿಗೆ ತಮ್ಮ ವಿವೇಚನೆಗೆ ಕಂಡುಕೊಂಡ ಅನುಭಾವಿಕ ನಿಲುವನ್ನು ವಚನಗಳ ಮೂಲಕ ಅನುಭವ ಮಂಟಪದಲ್ಲಿ ಮಂಥಿಸುತ್ತಿದ್ದರು. ಆ ಮಂಥನದಲ್ಲಿ ಆವಿರ್ಭವಿಸುವವು ಶುದ್ಧವಾದ ವಚನಗಳಾಗುತ್ತಿದ್ದವು. ಮುಂದೇ ಇವೇ ವಚನಧರ್ಮ, ಶರಣಧರ್ಮವಾದವು. ಇವುಗಳನ್ನು ನುಡಿದು ನಡೆದವರೇ ಶರಣರಾದರು. ಇಂಥವರ ತಾಣವೇ ಅನುಭವ, ಅನುಭಾವ ಮಂಟಪವಾದವು.

ಮೌಢ್ಯತೆ, ಜಾತೀಯತೆ, ಧರ್ಮಾಂದತೆ, ಅಸಮಾನತೆಯಂಥ ಗಾಡಾಂಧಕಾರ

ತುಂಬಿಕೊಂಡಿದ್ದ ಹನ್ನೆರಡನೆ ಶತಮಾನದಲ್ಲಿ ಬಸವಾದಿ ಪ್ರಮಥರ ವೈಚಾರಿಕ ಚಿಂತನೆಗಳು ನಿಜಕ್ಕೂ ಅಂದು ಅವಶ್ಯಕವಾಗಿದ್ದವು. ಇಂಥ ಕಾಲಘಟ್ಟದಲ್ಲಿ ಉದಯಿಸಿದವರು ಮಡಿವಾಳ ಮಾಚಯ್ಯ ಶರಣರು. ಇಂದಿನ ವಿಜಯಪುರ ಜಿಲ್ಲೆಯ ದೇವರಹಿಪ್ಪರಗಿಯಲ್ಲಿ ಪರವತಯ್ಯ ಮತ್ತು ಸುಜ್ಞಾನಮ್ಮ ಎಂಬ ಶರಣ ದಂಪತಿಗಳ ಮಗನಾಗಿ ಕ್ರಿ.ಶ. 1120–30ರ ಕಾಲದಲ್ಲಿ ಜನಿಸುತ್ತಾರೆ. ಇವರು ಗುರುಗಳಾದ ಮಲ್ಲಿಕಾರ್ಜುನಯ್ಯ ಸ್ವಾಮಿಯವರ ಆಶೀರ್ವಚನ ಇವರನ್ನು ಬೆಳೆಸಿ ಬೆಳಗಿಸುತ್ತದೆ. ಇವರನ್ನು ಬಸವ ಕಲ್ಯಾಣದತ್ತ ಮುಖ ಮಾಡುವಂತೆಯೂ ಈ ಗುರುಗಳು ಪ್ರೇರಕರಾಗುತ್ತಾರೆ. ನಿಷ್ಠಾವಂತರ ಶರಣರ ಬಟ್ಟೆಗಳನ್ನು ಮಾತ್ರ ಶುಚಿಗೊಳಿಸುವುದು ಇವರ ಕಾಯಕ. "ಅರಸುತನ ಮೇಲಲ್ಲ, ಅಗಸುತನ ಕೀಳಲ್ಲ" ಎಂಬುದು ಇವರ ಸಮಾನತೆಯ ಮಂತ್ರ. ಕಾಯಕದ ಮಹತ್ವವಾಗಿತ್ತು.

ಅನುಭವ ಮಂಟಪಕ್ಕೆ ಬರುವ ಶರಣರನ್ನು ಸ್ವಾಗತಿಸಿ, ಹೊಸಬರಾಗಿದ್ದರೆ ಪರೀಕ್ಷಿಸಿ ಪ್ರವೇಶ ಪತ್ರ ನೀಡುವಂಥದ್ದು ಸಹ ಇವರ ಹೊಣೆಯಾಗಿತ್ತು. ಗಣಾಚಾರಿ ಸಂಪನ್ನರಿವರು. ಭವಿಯಾದ ಬಿಜ್ಜಳ ಮಹಾರಾಜನ ಬಟ್ಟೆಯನ್ನೂ ಸಹ ಶುಚಿಗೊಳಿಸಿ ಮಡಿ ಮಾಡಲು ಅಧಿಕಾರಯುತವಾಗಿ ದಿಟ್ಟತನದಿಂದ ನಿರಾಕರಿಸಿದ ಗಣಾಚಾರಿ. ಅಂದಿನ ವ್ಯವಸ್ಥೆಯಲ್ಲಿ ಇದೊಂದು ಮಹತ್ವವಾದ ಪ್ರತಿಭಟನೆಯಾಗಿತ್ತು. ಇಂದಿಗೂ ಅವ್ಯವಸ್ಥೆಯ ವಿರುದ್ಧ ಮುಷ್ಕರ ಮಾಡಲು ಹೆದರುವ, ಯೋಚಿಸುವ ಕೆಲವರಿಗೆ ಇವರ ಧೀರತನ ಮಾದರಿಯಾಗಬೇಕು. ಮಾಚಯ್ಯನವರ ಈ ಧೋರಣೆಗೆ ಕಾರಣ ಎಲ್ಲರೂ ಸತ್ಯ ಶುದ್ಧವಾದ ಕಾಯಕದಿಂದ ಶರಣತನದ ವ್ಯಕ್ತಿತ್ವದಿಂದ ಬದುಕಬೇಕು. ಇಡೀ ವ್ಯವಸ್ಥೆಯ ಶರಣಮಯವಾಗಬೇಕೆಂಬ ಹಸಿವು, ತವಕ ಇತ್ತು. ಪರಿಶುದ್ಧವಾದ ಕಾಯಕವೇ ಎಲ್ಲರೊಡಲ ಹಸಿವಾಗಿರಬೇಕೆಂಬ ಧೋರಣೆಯಲ್ಲಿ ಅವರು ಹಲವಾರು ವಚನಗಳನ್ನು ರಚಿಸಿದ್ದರು. ಇವರು "ಕಲಿದೇವರ ದೇವ" ಎಂಬ ಅಂಕಿತದಲ್ಲಿ ರಚಿಸಿರುವ 346 ವಚನಗಳು ಇಂದು ದೊರೆತಿವೆ. ಅಧ್ಯಯನಕ್ಕೆ ಲಭ್ಯವಿವೆ.

ಮಾಚಯ್ಯನವರು ಬಸವಕಲ್ಯಾಣಕ್ಕೆ ಬರುವಾಗ ಭೀಮಾ ನದಿಯನ್ನು ದಾಟಿಕೊಂಡು ಬರಬೇಕಾಗುತ್ತದೆ. ಆ ಸಂದರ್ಭದಲ್ಲಿ ನದಿಯೇ ಎರಡು ಭಾಗವಾಗಿ ಇವರಿಗೆ ದಾರಿ ಮಾಡಿಕೊಡುತ್ತದೆಂಬ ಪ್ರತೀತಿ ಇದೆ. ಇದನ್ನು ನಂಬುವುದು ಅಸಾಧ್ಯ ಆದರೆ ಒಳ್ಳೆಯ ಈಜುಗಾರರಾದ ಇವರು ಈಜಿಕೊಂಡೇ ನದಿಯನ್ನು ದಾಟಿರಬಹುದು. ಸರಾಗವಾಗಿ ಈಜುವಾಗ ನೀರು ಎರಡು ಭಾಗವಾದಂತೆ ಭಾಸವಾಗಿರುತ್ತದೆ. ಅಲ್ಲದೇ ಸಕಲ ಕೊಳೆಯನ್ನು ತೊಳೆಯುವ ಶಕ್ತಿ ನದಿ ನೀರಿಗೆ ಇರುತ್ತದೆ ಎನ್ನುತ್ತಾರೆ. ಇಲ್ಲಿ ಮಾಚಯ್ಯನವರಲ್ಲಿ ಯಾವುದೇ ಕೊಳೆ ಇಲ್ಲದ ಕಾರಣ ಆ ನದಿಯ ನೀರೂ ಇವರನ್ನು ಸೋಂಕಲು ಅವಶ್ಯವಿಲ್ಲವೆಂದು ಯೋಚಿಸಿರಬಹುದೇನೋ? ಭೌತಿಕವಾಗಿ ಮಾನಸಿಕವಾಗಿ ಶುದ್ಧವಾಗಿರುವವರಿಗೆ ಮತ್ತಾವ ಶುದ್ಧತೆಯ ಅವಶ್ಯಕತೆ ಇಲ್ಲವೆನ್ನುವುದರ

ಪ್ರತೀಕವಾಗಿ ಹರಿಯುವ ನದಿಯೇ ಎರಡು ಭಾಗವಾಗಿ ಇವರಿಗೆ ದಾರಿ ಮಾಡಿದೆಯೆಂದು ಪರಿಭಾವಿಸಬಹುದು. "ಶುದ್ಧಿಯಿಂದ ಇದ್ದವರು ಇನ್ನೊಬ್ಬರನ್ನು ಶುದ್ಧ ಮಾಡುವುದು ಬಹಳ ಸುಲಭ. ಅಶುದ್ಧವಾದವರು ಇನ್ನೊಬ್ಬರನ್ನು ಶುದ್ಧಿಗೊಳಿಸಲು ತೊಡಗಿದರೆ ಆ ಇನ್ನೊಬ್ಬರೂ ಮತ್ತಷ್ಟು ಅಶುದ್ಧರಾಗುತ್ತಾರೆ". ಅದಕ್ಕಾಗಿಯೇ ಶರಣರು ಮೊದಲು ತಾವು ಶುದ್ಧರಾಗಿ ನಡೆದು ಇನ್ನೊಬ್ಬರಿಗೆ ಹೇಗೆ ಶುದ್ಧವಾಗಿ ನಡೆಯಬೇಕೆಂದು ನುಡಿದು ದಾರಿ ತೋರಿಸುತ್ತಿದ್ದರು. "ಮೊದಲು ನೀನು ಶುದ್ಧನಾಗು ಜಗತ್ತಿನಲ್ಲಿ ಒಬ್ಬ ಅಶುದ್ಧಿ ಕಡಿಮೆಯಾಗುತ್ತಾನೆ" ಎಂಬುದವರ ನಿಲುವು.

ಮಾಚಯ್ಯನವರು ಬಸವಕಲ್ಯಾಣದಲ್ಲಿ ಕಾಯಕ ನಿರತರಾದ ಸಂದರ್ಭದಲ್ಲಿ ಒಂದು ದಿನ ಶರಣ ನುಲಿಯ ಚಂದಯ್ಯನವರ ಇಷ್ಟಲಿಂಗ ಕಳಚಿ ಬೀಳುತ್ತದೆ. ಆ ಇಷ್ಟಲಿಂಗವನ್ನು ಮತ್ತೇ ಪಡೆಯಲು ಚೆಂದಯ್ಯ ನಿರಾಕರಿಸುತ್ತಾರೆ. ಇಷ್ಟಲಿಂಗ ತಾನಾಗಿಯೇ ಕೆಳಗೆ ಬಿದ್ದಿದೆ ಅದನ್ನು ತೆಗೆದುಕೊಳ್ಳುವ ಅವಶ್ಯಕತೆ ನನಗೆ ಇಲ್ಲವೆನ್ನುತ್ತಾರೆ. ಹಾಗೆಂದು ಮತ್ತೇ ತಾವು ಕಾಯಕನಿರತರಾಗುತ್ತಾರೆ. ಅವರಿಗೆ ಇಷ್ಟಲಿಂಗಕ್ಕಿಂತ ಕಾಯಕ ಮುಖ್ಯವಾಗುತ್ತದೆ. ಆಗ ಇಷ್ಟಲಿಂಗ ಇವರ ಬೆನ್ನತ್ತಿ ಬರುತ್ತದೆ. ಅದಕ್ಕೆ ಕಾಯಕ ಮಾಡಲು ಇವರು ತಿಳಿಸುವುದು ಈ ಎಲ್ಲಾ ಪ್ರಸಂಗ ಬಹುಶಃ ತಮಗೆಲ್ಲಾ ತಿಳಿದಿದೆ. ಈ ಇಷ್ಟಲಿಂಗ ನಿರಾಕರಣೆಯ ಸಂದರ್ಭ ಅನುಭವ ಮಂಟಪದಲ್ಲಿ ಚರ್ಚೆಯಾಗುತ್ತದೆ. ನಿರಾಕಾರ ಲಿಂಗವನ್ನನುಭವಿಸಿದ ನನಗೆ ಸಾಕಾರ ಲಿಂಗದ ಅವಶ್ಯಕತೆ ಇಲ್ಲವೆಂದು ಚೆಂದಯ್ಯ ವಾದಿಸಿದಾಗ ಮಾಚಯ್ಯನವರು ಬಹಳ ಮಾರ್ಮಿಕವಾಗಿ "ಸವಿ ಬೇಕು, ಹಣ್ಣು ಬೇಡ" ಎಂದರೆ ಹೇಗೆ?" ಚೆಂದಯ್ಯ. ನೀನು ಹಣ್ಣಿನ ಸವಿಯನ್ನು ಸವಿಯಬೇಕಾದರೆ ಹಣ್ಣನ್ನು ಸ್ವೀಕರಿಸಿ ಅದನ್ನು ತಿಂದು ಅನುಭವಿಸಿದಾಗ ಮಾತ್ರ ಸಾಧ್ಯವಲ್ಲವೇ? ಎಂದು ಪ್ರಶ್ನಿಸುತ್ತಾರೆ. ಇಲ್ಲಿ ಹಣ್ಣು ಸಾಕಾರ ರೂಪವಾದ ಇಷ್ಟಲಿಂಗವಾದರೆ ಅದರ ಸವಿ ನಿರಾಕಾರವಾದ ಒಳಗಿನ ಅರಿವು, ದೇವರನ್ನು ಅಂದರೆ ಲಿಂಗಭಾವವನ್ನನುಭವಿಸುವುದರ ಪ್ರತೀಕವಾಗಿದೆ. ಹೀಗೆ ಅಂಗದೊಳಗಿನ ಲಿಂಗತತ್ವ ಅರಿಯಲು ಇಷ್ಟಲಿಂಗವೆಂಬುದು ಹಣ್ಣು, ಒಳಗಿನ ಅರಿವು, ಜೀವಾತ್ಮ, ದೇವ, ಲಿಂಗತತ್ವವೆಲ್ಲ ಆ ಹಣ್ಣಿನ ಸವಿ ಇದ್ದಂತೆ. ಇಷ್ಟ ಲಿಂಗದ ಮಹತ್ವವನ್ನು ನಿರೂಪಿಸಿದವರು. ಇಷ್ಟಲಿಂಗ ಬೇಡ ಭಾವಲಿಂಗವೇ ಸಾಕು ಎಂಬುದು ನಿನ್ನ ಭ್ರಮೆಯಾಗಿದೆ, ನಿರಾಕಾರವಾದ ದೇವರನ್ನು ಅನುಭಾವಿಸಲು ಸಾಕಾರವಾದ ಇಷ್ಟಲಿಂಗವೆಂಬ ಕುರುಹು ಅವಶ್ಯವೆನ್ನುತ್ತಾರೆ. ಹೀಗೆ ಮಾಚಯ್ಯನವರು ಪ್ರತಿಪಾದಿಸಿದ ಇಷ್ಟಲಿಂಗದ ಅವಶ್ಯಕತೆಯ ಕುರಿತ ಈ ಪ್ರಸಂಗ ಬಹಳ ಮಹತ್ವವನ್ನು ಪಡೆದುಕೊಳ್ಳುತ್ತದೆ.

"ಮಧುರ ಗುಣವ ಇರುವೆ ಬಲ್ಲದು, ವಾಯುಗುಣವ ಸರ್ಪ ಬಲ್ಲದು, ಗೋತ್ರದ ಗುಣವ ಕಾಗೆ ಬಲ್ಲದು, ಇದು ಕಾರಣ ಮನುಷ್ಯ ಜನ್ಮದಲ್ಲಿ ಬಂದು

ಶಿವಜ್ಞಾನವನರಿಯದಿರ್ದಡೆ ಆ ಕಾಗೆ–ಗೂಳಿಗಳಿಗಿಂತ ಕರಕಷ್ಟ ಕಾಣಾ ಕಲಿದೇವರದೇವ" ಎಂಬ ಮತ್ತೊಂದು ವಚನದ ಮೂಲಕ ನಮ್ಮೊಳಗಿನ ಶಿವಜ್ಞಾನದ ಅರಿವನ್ನು ಪಡೆಯುವುದು ಇಷ್ಟಲಿಂಗ ಧರಿಸಿಕೊಂಡಿರುವವರ ಹೊಣೆಗಾರಿಕೆಯಾಗಿದೆ ಎನ್ನುತ್ತಾರೆ. ಹಾಗಾಗದಿದ್ದರೆ ಸಿಹಿ ಗುಣವನ್ನು ತಿಳಿದುಕೊಂಡ ಇರುವೆಗಿಂತ, ಗಾಳಿಯ ಗುಣವನ್ನರಿತ ಹಾವಿಗಿಂತ, ಗೋತ್ರದ ಗುಣದ ಅರಿವಿರುವ ಕಾಗೆ ಪಶು ಪಕ್ಷಿಗಳಿಗಿಂತ ಮನುಷ್ಯ ಕಡೆಯಾಗುತ್ತಾನೆ ಎಂದು ಛೇಡಿಸುತ್ತಾರೆ. ಏಕೆಂದರೆ ಜೀವ, ಜೀವಾತ್ಮ, ಪರಮಾತ್ಮ, ದೇವ, ದೇವರುಗಳೆಂಬ ಶಿವಜ್ಞಾನದ ಅರಿವಿರುವ ಮನುಷ್ಯನೇ ಈ ಅರಿವನ್ನು ಅರಿಯದಿದ್ದರೆ ಪಶು–ಪಕ್ಷಿಗಿಂತಲೂ ಆತ ಕೀಳು ಎಂಬುದು ಮಾಚಯ್ಯನವರ ಮನದಾತಂಕ.

"ಎತೆತ್ತ ನೋಡಿದಡೆ ಅತ್ತತ್ತ ಬಸವನೆಂಬ ಬಳ್ಳಿ, ಎತ್ತಿ ನೋಡಿದಡೆ ಲಿಂಗವೆಂಬ ಗೊಂಚಲು, ಒತ್ತಿ ಹಿಂಡಿದರೆ ಭಕ್ತಿಯೆಂಬ ರಸವಯ್ಯ..... ಬಸವಾ ಬಸವಾ ಎಂದು ಮಜ್ಜನಕ್ಕೆರೆಯದವನ ಭಕ್ತಿ ಶೂನ್ಯ ಕಾಣಾ ಕಲಿದೇವರದೇವ" ಎಂದು ಬಸವಣ್ಣನವರ ಕುರಿತಾಗಿಯೇ ರಚಿಸಿದ ಈ ವಚನದಲ್ಲಿ ಬಸವಣ್ಣನವರ ಶರಣ ಸಂಕುಲದ ಮಹತ್ವದ ಕುರಿತು ಬಿಂಬಿಸಿದ್ದಾರೆ. ಬಸವನೆಂಬುದೇ ಬಳ್ಳಿಯಾಗಿ ಆ ಬಳ್ಳಿಯನ್ನು ಎತ್ತಿ ನೋಡಿದರೆ ಅಲ್ಲೆಲ್ಲ ಲಿಂಗಗಳಿರುವ ಗೊಂಚಲು, ಅವನ್ನು ಒತ್ತಿ ಹಿಡಿದರೆ ಭಕ್ತಿಯೆಂಬ ರಸ...ಇಂಥ ಲಿಂಗಕ್ಕೆ ಬಸವಾ ಬಸವಾ ಎಂದು ಮಜ್ಜನಕ್ಕೆರೆಯದವರಲ್ಲಿ ಭಕ್ತಿಯೇ ಇರಲಾರದು ಎಂಬ ಸಂಕಟ ಒಂದೆಡೆಯಾದರೆ ಇಷ್ಟು ಸರಳವಾಗಿ ದೇವನನ್ನನುಭವಿಸುವುದನ್ನು ಪಾಲಿಸಬೇಕೆಂಬ ಹಂಬಲ ಮತ್ತು ಹಸಿವು ಇಲ್ಲಿ ಕಾಣಬಹುದು. ಇದೆಂಥ ಅದ್ಭುತವಾದ ಭಕ್ತಿಯ ಪರಿಕಲ್ಪನೆಯಲ್ಲವೇ? ಹೀಗೆ ಮಾಚಯ್ಯನವರು ಬಹಳ ಗಂಭೀರವಾದ ಮತ್ತು ಆಕ್ರೋಶಭರಿತವಾದ ವಚನಗಳ ಜೊತೆಗೆ ಈ ಬಗೆಯ ಬೆಡಗಿನ ವಚನಗಳ ಮೂಲಕ ಭಕ್ತಿಯಲ್ಲಿ ದೇವನ ಕಾಣುವ ಬಗೆಯನ್ನು ಬಿಂಬಿಸಿದ್ದು ಇಲ್ಲಿ ಕಾಣಬಹುದು.

"ಉಡಿಯ ಲಿಂಗವ ಬಿಟ್ಟು, ಗುಡಿಯ ಲಿಂಗಕ್ಕೆ ಶರಣೆಂಬ, ಮತಿಭ್ರಷ್ಟರೆನೆಂಬೆನಯ್ಯ ಕಲಿದೇವರದೇವ" ಎಂದು ವಚಿಸುವಲ್ಲಿ ಇಷ್ಟಲಿಂಗದ ಅರಿವಿಲ್ಲದವರು ಬೆಟ್ಟದ/ಗುಡಿಯ ಲಿಂಗಕ್ಕೆರಗುವುದು ಸಹಜ. ಆದರೆ ಇಷ್ಟಲಿಂಗಧಾರಿಯಾಗಿದ್ದು ಇಷ್ಟಲಿಂಗದ ಮಹತ್ವವನ್ನರಿತುಕೊಂಡವರೂ ಸಹ ಗುಡಿಯ ಲಿಂಗಕ್ಕೆ ಮತ್ತು ಬೆಟ್ಟದ ಲಿಂಗಕ್ಕೆ ಮತ್ತೇ ಮತ್ತೇ ಶರಣೆಂದು ನಮಿಸುವವರಿಗೆ ಮತಿಭ್ರಷ್ಟರೆಂದು ಕೋಪದಿಂದ ಜರಿಯುತ್ತಾರೆ. ತನ್ನ ಇಷ್ಟಲಿಂಗದೊಳಗೆ ಅವಿತಿರುವ ಮಹಾದೇವನನ್ನು ಸುಲಭವಾಗಿ ಅರಿಯುವ ಬದಲು ಮತ್ತೇಕೆ ಈ ಜನ ದೇವನನ್ನು ಹೊರಗಡೆ ಹುಡುಕುತ್ತಾರೆಂಬ ಆತಂಕ, ಸಂಕಟ ಇಲ್ಲಿ ಮಾಚಯ್ಯನನ್ನು ಕಾಡುತ್ತದೆ. ಶುದ್ಧವಾದ ಮಡಿಮಾಡಿದ ಬಟ್ಟೆಗಳು ಮತ್ತು ಶರೀರ ಭೌತಿಕವಾಗಿ ಶುದ್ಧಗೊಳಿಸಿದರೆ ಇಷ್ಟಲಿಂಗವೆಂಬುದು ಭೌತಿಕ ಅಂಗದ

ಜೊತೆ ಅಂಗದೊಳಗಿನ ಲಿಂಗವನ್ನು ಮಡಿ ಮಾಡುವ ಶಕ್ತಿ ಇದೆಯೆಂಬುದು ಮಾಚಯ್ಯನ ಭರವಸೆ. ಪ್ರತಿಯೊಬ್ಬರೂ ತಮ್ಮಂಗದೊಳಗೇ ದೇವನೆಂಬ ಇಷ್ಟಲಿಂಗದ ನಿರಾಕಾರ ಶಿವನನ್ನು ಕಾಣಬೇಕೆಂಬುದು ಅವರ ಒಡಲಾಶಯ.

ಇಂಥ ಮಾಚಯ್ಯನವರು ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಬಸವಣ್ಣನ ವ್ಯಕ್ತಿತ್ವದ ಕುರಿತು ಒಂದು ವಿಶಿಷ್ಟವಾದ ವಚನ ಅನುಭಾವಿಸಿದ್ದಾರೆ, ಅದು ಹೀಗಿದೆ.

ಉಟ್ಟ ಸೀರೆಯ ಹರಿದು ಹೋದಾತ ನೀನಲಾ ಬಸವಣ್ಣ,
ಮೆಟ್ಟಿದ ಕೆರಹ ಕಳೆದು ಹೋದಾತ ನೀನಲಾ ಬಸವಣ್ಣ,
ಕಟ್ಟಿದ ಮುಡಿ ಬಿಟ್ಟು ಹೋದಾತ ನೀನಲಾ ಬಸವಣ್ಣ,
ಸೀಮೆಯ ಸಂಬಂಧವ ತಪ್ಪಿಸಿ ಹೋದಾತ ನೀನಲಾ ಬಸವಣ್ಣ,
ಲಿಂಗಕ್ಕೆ ಮಾಡಿದೆಂದ ಸೊಂಕದೆ ಹೋದೆಯಲ್ಲ ಬಸವಣ್ಣ,
ಜಂಗಮಕ್ಕೆ ಮಾಡಿದ ಮಾಟವ ಕೈಯಲ್ಲಿ ಹಿಡಿದುಕೊಂಡು ಹೋದೆಯಲ್ಲ ಬಸವಣ್ಣ,
ಬೆಳಗನುಟ್ಟು ಬಯಲಾಗಿ ಹೋದೆಯಲ್ಲ ಬಸವಣ್ಣ,
ಆ ಬಸವಣ್ಣಂಗೆ ಶರಣೆಂಬ ಪಥವನೇ ತೋರು ಕಂಡಾ ಕಲಿದೇವರದೇವ.

ಶೀಲವಂತ ಮತ್ತು ಲಾವಣ್ಯರು ಲಿಂಗಧಾರಿಗಳಾಗಿ ಜಾತಿಯನ್ನು ಮೀರಿದ್ದರೂ ಅವರನ್ನು ಲಿಂಗವಂತ ಅಥವಾ ಲಿಂಗಾಯತರೆಂದು ಪರಿಗಣಿಸದೇ ಅದೊಂದು ಅಂತರ್‌ಜಾತಿ ಮದುವೆ ಎಂದು ಬಿಂಬಿಸಿ, ಈ ಕಾರಣಕ್ಕಾಗಿ ಕಲ್ಯಾಣ ಕ್ರಾಂತಿಯಾದಾಗ ಪ್ರಧಾನಿಯಾಗಿದ್ದ ಬಸವಣ್ಣ ಪ್ರಧಾನಿ ಪದವಿ ತ್ಯಾಗ ಮಾಡಿ ಪೋಷಾಕು ಹರಿದು, ಪಾದರಕ್ಷೆ ಕಳೆದು, ಕಿರೀಟ ಕಳಚಿಟ್ಟು ರಾಜಧಾನಿ ಬಿಟ್ಟು ಸರಳವಾಗಿ ನಿರ್ವಿಕಾರ ಭಾವದಲ್ಲಿ ಹೋದಾಗಿನ ಪ್ರಸಂಗವಿಲ್ಲಿ ಮಾಚಯ್ಯ ಬಹಳ ನೋವಿನಿಂದ ಬಿಂಬಿಸಿದ್ದಾರೆ. ಇಷ್ಟಲಿಂಗ, ಜಂಗಮತತ್ವ ಮತ್ತು ಸಾಮಾಜಿಕ ಕ್ರಾಂತಿಯನ್ನು ಹಿಡಿದುಕೊಂಡೇ ಹೋದ ಬಸವಣ್ಣನಿಗೆ ಯುದ್ಧವೆಂಬ ರಕ್ತಕ್ರಾಂತಿ ಬೇಕಾಗಿರಲಿಲ್ಲ. ಶರಣರು ಮರಣವೇ ಮಹಾನವಮಿ ಎಂದರಿತಿದ್ದರು. ಆದರೆ ವಚನಗಳನ್ನು ಉಳಿಸಿಕೊಳ್ಳಬೇಕು ಅವುಗಳನ್ನು ಮುಂದಿನ ಜನಾಂಗಕ್ಕೆ ಕೊಡಬೇಕೆಂಬ ತವಕ ಇತ್ತು. ಆ ಕಾರಣಕ್ಕಾಗಿ ಸ್ವತಃ ಬಸವಣ್ಣನವರೇ ಬೆಳಗನುಟ್ಟು ಬಯಲಾಗಿ ಹೋಗಿ ಕೂಡಲಸಂಗಮದಲ್ಲಿ ಬಯಲಾದರು. ಶರಣರೆಲ್ಲ ಅಳಿದರೂ ಸಮಸಮಾಜ ನಿರ್ಮಾಣವಾಗದುದ್ದಕ್ಕೆ ಚಿಂತಿತರಾಗದ ಬಸವಣ್ಣ ಮುಂದೊಂದು ದಿನ ತಮ್ಮೀ ಕನಸು ನನಸಾಗುತ್ತದೆ ಎಂದುಕೊಂಡರು. ಇಂಥ ಬಸವಣ್ಣನವರ ಸಮಸಮಾಜದೆಡೆ ಸಾಗುವಂಥ ದಾರಿಯನ್ನು ನನಗೆ ತೋರಿಸೆನ್ನುತ್ತಾರೆ. ಇದು ಮಾಚಯ್ಯ ತಮಗೆ ತಾವು ಹೇಳಿಕೊಂಡಂತೆನಿಸಿದರೂ ಬಸವ ತತ್ವದಲ್ಲಿ, ವಚನ ಸಂಸ್ಕೃತಿಯಲ್ಲಿ ನಂಬಿಕೆ ಇಟ್ಟುಕೊಂಡವರೆಲ್ಲರ ಹೊಣೆಯಾಗಿದೆ.

ವಿವಿಧ ಶರಣರು ತಮ್ಮದೇ ರೀತಿಯಲ್ಲಿ ಮಾಚಯ್ಯನ ಕುರಿತು ಅಭಿವ್ಯಕ್ತಿಸಿದ್ದಾರೆ. ಅಲ್ಲಮರು "ಗುಹೇಶ್ವರ ಲಿಂಗದಲ್ಲಿ ಬಸವಣ್ಣನ ಕೃಪೆಯಿಂದ ನಿನ್ನ ಕಂಡೆ ಮಡಿವಾಳ

ಮಾಚಯ್ಯ" ಎನ್ನುವಲ್ಲಿ ಅವರ ಅಂತರಂಗದ ದೈವವಾದ ಗುಹೇಶ್ವರ ಲಿಂಗದಲ್ಲಿ ಮಾಚಯ್ಯನವರನ್ನು ತಾವು ಕಂಡ ಬಗೆ ಮತ್ತು ಇದಕ್ಕೆ ಬಸವಣ್ಣನ ಕೃಪೆಯೇ ಕಾರಣ ಎಂಬ ವಿನೀತ ಭಾವದಲ್ಲಿ ನುಡಿದಿರುವುದನ್ನು ಗಮನಿಸಬೇಕು. ಜೊತೆಗೆ ಅಲ್ಲಮರು ಮಾಚಯ್ಯನನ್ನು ಅತ್ಯಂತ ಮಹತ್ವದ ಸ್ಥಾನದಲ್ಲಿ ಕಂಡುಕೊಂಡಿರುವುದಾಗಿ ತಿಳಿಯುತ್ತದೆ. ಅಕ್ಕಮಹಾದೇವಿಯಂತೂ "ಬಸವಣ್ಣನೇ ಗುರು, ಪ್ರಭುದೇವರೇ ಲಿಂಗ, ಸಿದ್ಧರಾಮನೇ ಜಂಗಮ, ಮಡಿವಾಳಯ್ಯ ಎನ್ನ ಎತ್ತ ತಂದೆ" ಎಂದು ಮಾಚಯ್ಯನ ಮಗಳು ತಾನೆಂದು ಹೇಳುತ್ತಾಳೆ. ಇಲ್ಲಿ ಮಾಚಯ್ಯನವರು ಅತ್ಯುನ್ನತ ಮಟ್ಟದಲ್ಲಿಯ ಅಕ್ಕನಿಗೇ ತಂದೆಯ ಸ್ಥಾನದಲ್ಲಿರುವುದನ್ನು ಗಮನಿಸಬಹುದು. ಚೆನ್ನಬಸವಣ್ಣ "ಎನ್ನಂತರಂಗವೇ ಬಸವಣ್ಣ, ಬಹಿರಂಗವೇ ಮಡಿವಾಳ, ಇವರಿಬ್ಬರ ಪ್ರಸಾದ ಸಾಹಿತ್ಯ ನಾನೇ ಕೂಡಲ ಚೆನ್ನಸಂಗಮದೇವ" ಎಂದು ಚೆನ್ನಬಸವಣ್ಣ ತನ್ನ ಅಂತರಂಗದಲ್ಲಿ ಬಸವಣ್ಣನನ್ನು ಬಹಿರಂಗದಲ್ಲಿ ಮಡಿವಾಳ ಮಾಚಯ್ಯನವರನ್ನು ಪ್ರತಿಷ್ಠಾಪಿಸಿಕೊಂಡು ಆ ಮೂಲಕ ತಾವು ಪಡೆದ ಅರಿವನ್ನು ಪ್ರಸಾದವಾಗಿಸಿಕೊಂಡು ತಾವು ಮತ್ತು ತಮ್ಮ ಅರಿವನ್ನು ಜಂಗಮವಾಗಿಸಿಕೊಳ್ಳುವ ಮೂಲಕ ತಾವು ಪ್ರಸಾದ ಸಾಹಿತ್ಯವಾಗಿರುವುದನ್ನು ಮಾರ್ಮಿಕವಾಗಿಲ್ಲಿ ಬಿಂಬಿಸುತ್ತಾರೆ.

ಮಡಿವಾಳ ಮಾಚಯ್ಯನವರು ಶರಣರ ಬಟ್ಟೆಗಳನ್ನು ಮಡಿ ಮಾಡುವುದರ ಜೊತೆಗೆ ಮಲೀನವಾದ ವ್ಯವಸ್ಥೆಯ ಕೊಳೆಯನ್ನು ತೊಳೆದು ಮಡಿ ಮಾಡುವ ಮನಸ್ಥಿತಿಯಿಂದ ರಚಿಸಿದ ವಚನಗಳು ಮತ್ತವರ ಧೋರಣೆಗಳು ಸರ್ವಕಾಲಿಕವಾಗಿ ಚಲನಶೀಲವಾಗಿರಬೇಕೆಂದು ಬಯಸಿದ್ದವರು. ಹಾಗಾಗಿ ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ವಚನಗಳ ರಕ್ಷಣೆಗಾಗಿ ಉಳವಿಯತ್ತ ಪ್ರಯಾಣಿಸುವ ಶರಣರಲ್ಲಿ ತಾವು ಸೇರಿಕೊಂಡು ಶರಣರನ್ನು ಮತ್ತವರ ವಚನಗಳನ್ನು ರಕ್ಷಿಸುವ ಪವಿತ್ರವಾದ ಹೊಣೆ ಹೊತ್ತುಕೊಳ್ಳುತ್ತಾರೆ. ಅಲ್ಲಿ ಪ್ರತಿ ಹಂತದಲ್ಲಿ ಸಾಹಸವನ್ನು ಮೆರೆದರು. ಅದೊಂದು ಬಗೆಯ ಪ್ರಗತಿಯ ಕ್ರಾಂತಿ, ಪರಿವರ್ತನೆ ಬಯಸಿ ಹೋರಾಡುವಾಗ ಶರಣರೆಲ್ಲರೂ ಮರಣವೇ ಮಹಾನವಮಿ ಎಂದು ಲಿಂಗೈಕ್ಯರಾದ ನಂತರ ಇವರು ಏಕಾಂಗಿಯಾಗಿಯೂ ಹೋರಾಡಿದರು. ಕ್ರಾಂತಿಯ ಮೂಲಕ ಪ್ರಗತಿಪರತೆಯನ್ನು ಕಾಣಬೇಕೆಂಬ ಹಸಿವನ್ನಿರಿಸಿಕೊಂಡ ಒಡಲುಗೊಂಡವರಳಲಿಗೆ ಇವರ ವಚನಗಳ ಧೋರಣೆಯಲ್ಲಿ ಉತ್ತಮ ತುತ್ತು ಸಿಗಬಲ್ಲದು. ಈ ಬಗೆಯ ಒಡಲುಗೊಂಡವರಳಲಿಗೆ ಸಾಂತ್ವನ ಸಿಗಬಹುದು. ಮಾಚಯ್ಯ ಶರಣರು ಕೊನೆಗೆ ಇಂದಿನ ಸಿಂಧಗಿ ತಾಲ್ಲೂಕಿನ ಕಲಿಪುರ ಅಥವಾ ಕಲಕೇರಿ ಎಂಬ ಊರಲ್ಲಿ ಹೊಸ್ತಿಲ ಹುಣ್ಣಿಮೆ ಮೂಲ ನಕ್ಷತ್ರದ ದಿವಸ ತಮ್ಮ ಗುರುವಿನೊಂದಿಗೆ ಜೀವಂತ ಸಮಾಧಿಯಾಗುತ್ತಾರೆಂದು ನಂಬಲಾಗಿದೆ. ಇನ್ನೊಂದು ಪ್ರತೀತಿಯ ಪ್ರಕಾರ ಅವರು ಬೆಳಗಾವಿ ಜಿಲ್ಲೆಯ ಗೊಡಚಿ ಹತ್ತಿರ ಲಿಂಗೈಕ್ಯರಾದ

ಕಾರಣ ಅಲ್ಲಿ ಇವರ ಸಮಾಧಿ ಇರುವುದಾಗಿಯೂ ಐತಿಹ್ಯವಿದೆ. ಈ ವಿವರಗಳನ್ನೆಲ್ಲ ಸಂಶೋಧಕರ ಶೋಧಕ್ಕೆ ಬಿಡೋಣ.

ಇಂದಿಗೂ ಬಸವಕಲ್ಯಾಣದ ತ್ರಿಪುರಾಂತಕ ಕೆರೆಯಿಂದ ಸ್ವಲ್ಪ ದೂರದಲ್ಲಿ ಪಶ್ಚಿಮ ದಿಕ್ಕಿನಲ್ಲಿ ಮಡಿವಾಳ ಮಾಚಯ್ಯನ ಹೊಂಡವಿದೆ. ಒಂದು ಗುಡಿಯಿದೆ ಅಲ್ಲಿ ಜೋಡಿ ಶಿವಲಿಂಗ ಕಾಣಸಿಗುತ್ತವೆ. ಭಕ್ತಿಯೆಂಬ ಮಡಿಯಿಂದ ದರ್ಶನ ಪಡೆಯುವ ಪದ್ಧತಿ ಇದೆ. ಮತ್ತೇ ಇಲ್ಲಿ ಮಾನಸಿಕ ಮಡಿತನವನ್ನು ಸಾಂಕೇತಿಕವಾಗಿ ಬಿಂಬಿಸುತ್ತದೆ. ಹಾಗೆಯೇ ಸಿಂಧಗಿ ತಾಲ್ಲೂಕಿನ ಡೋಣಿ ಕೊಂಡಗುಳಿಯಲ್ಲಿ ಮಡಿವಾಳ ಮಾಚಯ್ಯನ ಗುಡಿ ಇದೆ. ದೇವರ ಹಿಪ್ಪರಗಿಯಲ್ಲಿ ಗುಡಿಯೊಂದಿದೆ. ಇವರು ವಾಸಿಸಿದ್ದರೆಂದು ನಂಬಲಾದ ಮನೆಯೊಂದಿದೆ ಅಲ್ಲಿ ಕಲ್ಮೇಶ್ವರ (ಕಲ್ಲಿನಾಥ) ಗುಡಿಯ ಹತ್ತಿರವಿರುವ ಇವರ ಮನೆಯಲ್ಲಿ ಇವರು ಬಳಸುತ್ತಿದ್ದ ಖಡ್ಗವನ್ನೂ ನೋಡಬಹುದು. ಈಗ ಈ ಮನೆ ಮಠವಾಗಿದೆ. ಸಿಂಧಗಿ ತಾಲ್ಲೂಕಿನ ಕೊಕಟನೂರಲ್ಲಿಯೂ ಒಂದು ಗುಡಿ ಇದೆ. ಈ ಭಾಗದಲ್ಲೆಲ್ಲ ಮಾಚಯ್ಯನವರು ಆರಾಧ್ಯ ದೈವವಾಗಿದ್ದಾರೆ. ಹೀಗೆ ಭೌತಿಕವಾಗಿ ಅವರನ್ನು ನೆನಪಿಸುವಂಥ ಸ್ಮಾರಕಗಳ ಜೊತೆಗೆ, ಅಂಗವಳಿದಿದ್ದರೂ ಅವರ ಅಂಗದೊಳಗಿನ ಲಿಂಗ ವಿಚಾರಗಳು ಇಂದಿಗೂ ಪ್ರಸ್ತುತವಾಗಿವೆ. ಪ್ರಗತಿಪರ, ಆತ್ಮಶುದ್ಧತೆ, ಶುಚಿತ್ವ ಅಂತರಂಗ ಮತ್ತು ಬಹಿರಂಗ ಶುದ್ಧತೆ, ಅನ್ಯಾಯದ ಅಸಮಾನತೆ ವಿರುದ್ಧದ ಹೋರಾಟದ ಮೂಲಕ ಮನಸ್ಸಿನ ಶುದ್ಧತೆ ಮಾಡಿದವರು, ಹೀಗೆ ಮಾಡಬೇಕೆಂಬುದು ಅವರ ಒಡಲಾಳದ ಹಸಿವಾಗಿತ್ತು. ಇಂಥ ಅಪ್ರತಿಮ ಮಾಚಯ್ಯ. ಮತ್ತವರ ಆ ವಿಚಾರಗಳ ಧೋರಣೆಯಲ್ಲಿ ನಾವು ಬೆಳಕನ್ನು ಕಂಡುಕೊಂಡರೆ ಪರಮಾತ್ಮನಲ್ಲಿ ಲಿಂಗೈಕ್ಯವಾದ ಅವರ ಲಿಂಗದಲ್ಲಿದ್ದ ಜೀವಾತ್ಮ ಮೆಚ್ಚಿ ಹೌದೌದೆನ್ನಬಹುದೇನೋ? ಇಂದಿನ ಮಲೀನವಾದ ಅವ್ಯವಸ್ಥೆಗೆ, ಅವ್ಯವಸ್ಥೆಯೊಳಗಿನ ಮಲೀನ "ಮನಸ್ಸಿನ ಮಡಿತನಕ್ಕೆ ಬೇಕು ಮಾಚಯ್ಯನ ಮಡಿವಾಳತನ". ವಿವಿಧ ಬಗೆಯ ಹಸಿವಿನ ಒಡಲುಗೊಂಡವರಳಲಿಗೆ ಬೇಕು ಇಂಥ ಶರಣ ಸಾಧಕರ ಚಿಂತನೆ ಮತ್ತು ಧೋರಣೆಗಳೆಂಬ ಅನ್ನದ ತುತ್ತು.

□

# ವಾರ್ತಾವಿಹಾರ

**ಕುಮಾರಸ್ವಾಮಿ ವಿರಕ್ತಮಠ**

**ಭಾರತೀಯ ಸಂಸ್ಕೃತಿಯನ್ನು ಸಂರಕ್ಷಿಸಬೇಕಿದೆ**

ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗದಂತೆ ಭಾರತೀಯ ಸಂಸ್ಕೃತಿಯನ್ನು ಸಂರಕ್ಷಿಸಬೇಕಿದೆ ಎಂದು ಪರಮಪೂಜ್ಯ ಜಗದ್ಗುರುಗಳು ಡಿಸೆಂಬರ್ 26ರಂದು ಬೆಂಗಳೂರಿನ ಚನ್ನೇನಹಳ್ಳಿಯಲ್ಲಿರುವ ಜನಸೇವಾ ವಿಶ್ವಸ್ತ ಮಂಡಳಿ ಆಯೋಜಿಸಿದ್ದ ಪೂರ್ಣಮಂಡಲೋತ್ಸವ ಉದ್ಘಾಟನಾ ಸಮಾರಂಭದ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು.

ಯುವಜನರಲ್ಲಿ ಭಾರತೀಯ ಸಂಸ್ಕೃತಿಯ ಬಗ್ಗೆ ಆಸಕ್ತಿ ಹೆಚ್ಚಾಗಬೇಕಿದೆ. ದೇಶದ ಜನರಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಒಲವು ತಗ್ಗಬೇಕಿದೆ. ಆಗ ಭಾರತವು ಜಗತ್ತಿನ ಯಾವ ರಾಷ್ಟ್ರಕ್ಕೂ ಕಡಿಮೆ ಇಲ್ಲದಂತೆ ಬೆಳೆದು ನಿಲ್ಲುತ್ತದೆ. ದೇಶಕ್ಕಾಗಿ ಶ್ರಮಿಸುವ, ಸಂಸ್ಕೃತಿಯನ್ನು ರಕ್ಷಿಸುವ ವ್ಯಕ್ತಿಗಳನ್ನು ಜನಸೇವಾ ಸಂಸ್ಥೆ ಅಣಿ ಮಾಡುತ್ತಿರುವುದು ಸಂತಸದ ಸಂಗತಿ ಎಂದು ತಿಳಿಸಿದರು.

ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್‌ರವರು ಆಧುನಿಕ ಶಿಕ್ಷಣ ವ್ಯವಸ್ಥೆಯಿಂದ ಪ್ರಾಚೀನ ಶಿಕ್ಷಣ ಪದ್ಧತಿ ಕಣ್ಮರೆಯಾಗಿರುವ ಇಂದಿನ ಸನ್ನಿವೇಶದಲ್ಲಿ ವ್ಯಕ್ತಿಯ ಸರ್ವಾಂಗೀಣ ಅಭಿವೃದ್ಧಿಗಾಗಿ ಗುಣಾತ್ಮಕವಾದ ಶಿಕ್ಷಣ ನೀಡುವ ಅಗತ್ಯವಿದೆ. ಚಾರಿತ್ರ್ಯ ನಿರ್ಮಾಣ, ಆಧ್ಯಾತ್ಮಿಕ ಜ್ಞಾನ, ಮಾನವೀಯ ಮೌಲ್ಯವುಳ್ಳ ಭಾರತದ ಪ್ರಾಚೀನ ಶಿಕ್ಷಣ ಪದ್ಧತಿ ವಿಶ್ವದಾದ್ಯಂತ ಪ್ರಸಿದ್ಧವಾಗಿತ್ತು. ಇಂದು ಆಧುನಿಕ ಶಿಕ್ಷಣ ಪದ್ಧತಿಯಿಂದ ಅದು ಮರೆಯಾಗಿದೆ. ಪುನಃ ಮೊದಲಿನಂತೆ ವ್ಯಕ್ತಿತ್ವ ವಿಕಸನದ ಪರಿಪೂರ್ಣ ಶಿಕ್ಷಣ ನೀಡುವಲ್ಲಿ ಜನಸೇವಾ ಸಂಸ್ಥೆ ಸಕ್ರಿಯವಾಗಿದೆ ಎಂದು ಶ್ಲಾಘಿಸಿದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರಕಾರ್ಯವಾಹರಾದ ಶ್ರೀ ದತ್ತಾತ್ರೇಯ ಹೊಸಬಾಳೆಯವರು ಚಾರಿತ್ರ್ಯ ನಿರ್ಮಾಣ ಮತ್ತು ಸಾಮಾಜಿಕ ಕಳಕಳಿರಹಿತ ಜ್ಞಾನ ಸಮಾಜಕ್ಕೆ ಕಂಟಕಪ್ರಾಯ. ಗ್ರಾಮ, ಸಮಾಜ, ದೇಶ ಹಾಗೂ ವೈಯಕ್ತಿಕ ಏಳಿಗೆಯ ಉದ್ದೇಶದಿಂದ 50 ವರ್ಷಗಳಿಂದ ಸಂಸ್ಥೆಯಿಂದ ಸಮಗ್ರ ಶಿಕ್ಷಣ ನೀಡಲಾಗುತ್ತಿದೆ. ಜತೆಗೆ ಗ್ರಾಮವಿಕಾಸ ಮತ್ತಿತರ ಚಟುವಟಿಕೆಗೂ ಒತ್ತು ನೀಡಲಾಗುತ್ತಿದೆ ಎಂದು ತಿಳಿಸಿದರು.

ಕರ್ನಾಟಕ ಸಂಸ್ಕೃತ ವಿವಿ ಕುಲಪತಿಗಳಾದ ಪ್ರೊ. ಕ.ಈ. ದೇವನಾಥನ್ ಪ್ರದರ್ಶಿನಿಯನ್ನು ಉದ್ಘಾಟಿಸಿದರು. ಮೈಸೂರು ಶ್ರೀ ರಾಮಕೃಷ್ಣಾಶ್ರಮದ ಅಧ್ಯಕ್ಷರಾದ ಶ್ರೀ ಸ್ವಾಮಿ ಮುಕ್ತಿದಾನಂದಜಿ ಶುಭ ಸಂದೇಶ ನೀಡಿದರು. ರಾಜವಂಶಸ್ಥರಾದ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ, ಸಚಿವರುಗಳಾದ ಶ್ರೀ ಅರಗ ಜ್ಞಾನೇಂದ್ರ, ಶ್ರೀ ಆರ್. ಅಶೋಕ್, ಶ್ರೀ ವಿ. ಸೋಮಣ್ಣ, ಶ್ರೀ ಮುರುಗೇಶ್ ನಿರಾಣಿ, ಶ್ರೀ ಎಸ್.ಟಿ. ಸೋಮಶೇಖರ್, ಡಾ. ಕೆ. ಸುಧಾಕರ್, ಸಂಸ್ಥೆಯ ಅಧ್ಯಕ್ಷರಾದ ಶ್ರೀ ಬಿ.ಎ. ಶ್ರೀನಿವಾಸಗುಪ್ತ ಮೊದಲಾದವರು ಉಪಸ್ಥಿತರಿದ್ದರು. ಗುರುಕುಲದ ವಿದ್ಯಾರ್ಥಿಗಳು ವೇದಘೋಷ ಮಾಡಿದರು. ಶ್ರೀಮತಿ ಸಂದೇಶ ಪ್ರಾರ್ಥಿಸಿದರು. ಶ್ರೀ ನಾ. ತಿಪ್ಪೇಸ್ವಾಮಿ ಸ್ವಾಗತಿಸಿದರು. ಪ್ರೊ. ರಾಮಚಂದ್ರ ಜಿ. ಭಟ್ ಕೋಟೆಮನೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಜಯಪ್ರಕಾಶ್ ವಂದಿಸಿದರು. ಡಾ. ಮಹಾಬಲೇಶ್ವರ ಭಟ್ ಕಾರ್ಯಕ್ರಮವನ್ನು ನಿರ್ವಹಿಸಿದರು.

**ರೈತರು ಆತ್ಮವಿಶ್ವಾಸ ಕಳೆದುಕೊಳ್ಳದೆ ಸವಾಲುಗಳನ್ನು ಎದುರಿಸಬೇಕು**

ರೈತರು ಆತ್ಮವಿಶ್ವಾಸ ಕಳೆದುಕೊಳ್ಳದೆ ಸವಾಲುಗಳನ್ನು ಎದುರಿಸಬೇಕು ಎಂದು ಪರಮಪೂಜ್ಯ ಜಗದ್ಗುರುಗಳು ಮೈಸೂರಿನ ಕಲಾಮಂದಿರದಲ್ಲಿ ಡಿಸೆಂಬರ್ 26ರಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ಏರ್ಪಡಿಸಿದ್ದ ವಿಶ್ವ ರೈತ ದಿನಾಚರಣೆಯ ರಾಜ್ಯಮಟ್ಟದ ಸಮಾವೇಶ ಹಾಗೂ ಕುರುಬೂರು ಶಾಂತಕುಮಾರ್‌ರವರ ಅಭಿನಂದನಾ ಸಮಾರಂಭದ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು.

ರೈತರು ಆತ್ಮಹತ್ಯೆಯಂತಹ ಕೆಟ್ಟ ಆಲೋಚನೆ ಮಾಡಬಾರದು. ಬೆಳೆಗಳಿಗೆ ರಾಸಾಯನಿಕಗಳನ್ನು ಬಳಸಬಾರದು. ಇದರಿಂದ ಫಲವತ್ತತೆ ಹಾಳಾಗುತ್ತದೆ. ಸಾವಯವ ಕೃಷಿಯತ್ತ ಗಮನ ಹರಿಸಬೇಕು. ಇದರಿಂದ ಸಮೃದ್ಧವಾದ ಫಸಲು ದೊರೆಯುತ್ತದೆ. ಅನೇಕ ರೈತರು ಇದರಲ್ಲಿ ಯಶಸ್ವಿಯೂ ಆಗಿದ್ದಾರೆ. ಸಾವಯವ ಪದ್ಧತಿಯಿಂದ ಬೆಳೆಗಳನ್ನು ಬೆಳೆಯುವುದು ಪರಿಸರಕ್ಕೂ ಪೂರಕವಾದುದು ಎಂದು ಹೇಳಿದರು.

ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿಯವರು ರೈತರ ಸಮಸ್ಯೆಗಳಿಗೆ ಪರಿಹಾರ ನೀಡಲು ಪ್ರಾಮಾಣಿಕವಾದ ಪ್ರಯತ್ನ ಮಾಡಲಾಗುವುದು. ರೈತರ ಮಕ್ಕಳಿಗೆ ಅನುಕೂಲವಾಗಲೆಂದು ವಿದ್ಯಾನಿಧಿ ಯೋಜನೆ ಜಾರಿಗೆ ತರಲಾಗಿದೆ. ಈ ಯೋಜನೆಯನ್ನು ಗ್ರಾಮೀಣ ಭಾಗದ ಪ್ರೌಢಶಾಲಾ ಹೆಣ್ಣುಮಕ್ಕಳಿಗೂ ವಿಸ್ತರಿಸಲು ಚಿಂತನೆ ನಡೆಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷರಾದ ಶ್ರೀ ಕುರುಬೂರು ಶಾಂತಕುಮಾರ್ ದಂಪತಿಗಳನ್ನು ಅಭಿನಂದಿಸಲಾಯಿತು. ರೈತಧ್ವನಿ ವಿಶೇಷಾಂಕ ಹಾಗೂ ಹಸಿರು ಹೊನ್ನು ಸ್ಮರಣ ಸಂಚಿಕೆಗಳನ್ನು ಬಿಡುಗಡೆಗೊಳಿಸಲಾಯಿತು. ರೈತ ಆದಾಯ

ದ್ವಿಗುಣ ಸಮಿತಿಯ ಮುಖ್ಯಸ್ಥರಾದ ಶ್ರೀ ಅಶೋಕ ದಳವಾಯಿ, ಪಬ್ಲಿಕ್ ಟಿವಿಯ ಶ್ರೀ ಎಚ್.ಆರ್. ರಂಗನಾಥ್ ಮಾತನಾಡಿದರು. ಕನ್ನಡ ಪ್ರಭ ಪತ್ರಿಕೆ ಸಂಪಾದಕರಾದ ಶ್ರೀ ರವಿ ಹೆಗ್ಡೆ, ತಮಿಳುನಾಡು ರಾಷ್ಟ್ರೀಯ ಅರಿಷಿಣ ಬೆಳೆಗಾರರ ಸಂಘದ ಅಧ್ಯಕ್ಷರಾದ ಶ್ರೀ ದೈವ ಶಿಗಾಮಣಿ ಉಪಸ್ಥಿತರಿದ್ದರು. ಡಾ. ಎಸ್. ಶಿವರಾಜಪ್ಪ ಸ್ವಾಗತಿಸಿದರು. ಶ್ರೀ ರಮೇಶ್ ಹೂಗಾರ್ ವಂದಿಸಿದರು.

**ಆಯುರ್ವೇದ ಚಿಕಿತ್ಸೆ ಅತ್ಯಂತ ಪರಿಣಾಮಕಾರಿ**

ಆಯುರ್ವೇದವು ಕಾಲಕ್ಕೆ ತಕ್ಕಂತೆ ಆಯಾ ಕಾಲಘಟ್ಟದಲ್ಲಿ ಉದ್ಭವಿಸಿದ ಎಲ್ಲ ರೋಗಗಳ ಚಿಕಿತ್ಸೆಗೆ ಅತ್ಯಂತ ಪರಿಣಾಮಕಾರಿಯಾಗಿದೆ ಎಂದು ಬೆಂಗಳೂರಿನ ಸ್ಪರ್ಶ ಆಸ್ಪತ್ರೆ ಸಮೂಹಗಳ ಮುಖ್ಯಸ್ಥರು ಹಾಗೂ ಖ್ಯಾತ ಶಸ್ತ್ರಚಿಕಿತ್ಸಾ ತಜ್ಞರಾದ ಡಾ. ಶರಣ್ ಶಿವರಾಜ್ ಪಾಟೀಲ್‌ರವರು ಹೇಳಿದರು.

ಡಿಸೆಂಬರ್ 26ರಂದು ಮೈಸೂರು ಶ್ರೀ ಸೂತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನಿಧ್ಯದಲ್ಲಿ ಜರುಗಿದ ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ವಿಶಿಖಾನುಪ್ರವೇಶ ಪದವೀಧರರ ದಿನಾಚರಣೆಯಲ್ಲಿ ಮಾತನಾಡುತ್ತಾ ವೈದ್ಯರು ರೋಗಿಯ ಅಂತರಂಗವನ್ನು ಅರಿತು, ರೋಗದ ತಪಾಸಣೆ, ಆರೈಕೆ ಹಾಗೂ ಕಾಳಜಿಪೂರ್ವಕವಾದ ಕೈಂಕರ್ಯಗಳನ್ನು ಮಾಡಬೇಕು. ಆಗ ಮಾತ್ರ ವೈದ್ಯ ಪದವಿ ಪಡೆದಿರುವುದು ಸಾರ್ಥಕವಾಗುತ್ತದೆ. ನಾವು ಮಾಡುವ ಸೇವೆ ಜನಮಾನಸದಲ್ಲಿ ನೆಲೆಸಬೇಕು. ಇಂದಿನ ಸಮಾಜದಲ್ಲಿ ಪ್ರಲೋಭನೆಗಳನ್ನು ಬಿಟ್ಟು, ನೈತಿಕತೆಯಿಂದ, ಆಯಾ ವೈದ್ಯಪದ್ಧತಿಯ ನೈಪುಣ್ಯತೆಯನ್ನು ಕರಗತಮಾಡಿಕೊಂಡು, ವಿಶ್ಲೇಷಣಾತ್ಮಕವಾಗಿ ಚರ್ಚಿಸಿ ರೋಗದ ನಿರ್ಣಯ ಹಾಗೂ ಚಿಕಿತ್ಸೆಗಳನ್ನು ನೀಡಿದಾಗ ಮಾತ್ರ ಯಶಸ್ವಿ ವೈದ್ಯರಾಗಬಹುದು ಎಂದು ತಿಳಿಸಿದರು.

ಶ್ರೀಮತಿ ಮೀನಾ ಶರಣ್ ಪಾಟೀಲ್‌ರವರು ರ್‍ಯಾಂಕ್ ವಿಜೇತರುಗಳಿಗೆ ಪ್ರಶಸ್ತಿ ಹಾಗೂ ಫಲಕಗಳನ್ನು ವಿತರಿಸಿದರು.

ಜೆಎಸ್‌ಎಸ್ ಗವರ್ನಿಂಗ್ ಕೌನ್ಸಿಲ್ ಸದಸ್ಯರು ಹಾಗೂ ಸಿಸಿಐಎಮ್‌ನ ಮಾಜಿ ಉಪಾಧ್ಯಕ್ಷರಾದ ಡಾ. ಜಯಪ್ರಕಾಶ್ ನಾರಾಯಣ್‌ರವರು ಪ್ರತಿಜ್ಞಾವಿಧಿ ಬೋಧಿಸಿದರು. ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾನಿಲಯದಿಂದ ಸ್ನಾತಕೋತ್ತರ ಪದವಿ ರ್‍ಯಾಂಕ್ ವಿಜೇತರು ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳ ಪದವಿ ಪ್ರದಾನ ಕಾರ್ಯಕ್ರಮವನ್ನು ಸಂಯೋಜಕರಾದ ಡಾ. ಶ್ರೀಷಾನಂದ ಶರ್ಮರವರು, ಪದವೀಧರ ರ್‍ಯಾಂಕ್ ವಿಜೇತರ ಪಟ್ಟಿಯನ್ನು ಸಂಯೋಜಕರಾದ ಡಾ. ದೀಪಾ ಸಿ. ಪಾಟೀಲ್‌ರವರು ಹಾಗೂ ಕಿರಿಯ ಕಲಿಕಾ ವೈದ್ಯ ಸಂಯೋಜಕರಾದ ಡಾ. ಡಿ. ಸಂಧ್ಯಾರಾಣಿಯವರು

ಪದವಿ ಸ್ವೀಕರಿಸುವ ವಿದ್ಯಾರ್ಥಿಗಳ ಹೆಸರುಗಳನ್ನು ಪ್ರಕಟಿಸಿದರು. ಆಯುರ್ವೇದ ಹಿಮಾಲಯ ಔಷಧ ಕಂಪನಿಯವರು ನೀಡುವ 'ಜೀವಕ' ಹಾಗೂ 'ಆಯುರ್ವಿಶಾರದ' ನಗದು ಪ್ರಶಸ್ತಿಗಳನ್ನು ಕ್ರಮವಾಗಿ ಡಾ. ಆಫ್ರಾ ಇರಮ್ ಹಾಗೂ ಡಾ. ಎಂ. ನಮ್ರತಾರವರು ಪಡೆದರು. ಡಾ. ಸುಶ್ಮಿತಾರಾಣಿಯವರಿಗೆ 'ಅತ್ಯುತ್ತಮ ಕಿರಿಯ ಕಲಿಕಾ ವೈದ್ಯ' ಪ್ರಶಸ್ತಿ, ಡಾ. ಉಮ್ಮೆ ಹಬೀಬಾ, ಡಾ. ಕೌಮಿನಾ ಖಾನ್, ಡಾ. ಸಿ.ಆರ್. ದೀಪ್ತಿ ಹಾಗೂ ಡಾ. ಎಸ್. ಐಶ್ವರ್ಯರವರುಗಳಿಗೆ ಅತ್ಯುತ್ತಮ ನಿರ್ಗಮಿತ ವೈದ್ಯ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ವಿದ್ಯಾರ್ಥಿಗಳಾದ ಡಾ. ಎ.ಎಮ್. ಚೈತ್ರ ಹಾಗೂ ಡಾ. ಎಂ.ಎಸ್. ಆಶಿತಾ ತಮ್ಮ ಅನುಭವಗಳನ್ನು ಹಂಚಿಕೊಂಡರು.

ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಆರ್. ಮಹೇಶ್ ಉಪಸ್ಥಿತರಿದ್ದರು. ಕು. ಸುಮೇಧಾ ಭಟ್ ಹಾಗೂ ವೃಂದದವರು ಪ್ರಾರ್ಥಿಸಿದರು. ಪ್ರಾಂಶುಪಾಲರಾದ ಡಾ. ಸರ್ಬೇಶ್ವರ್‌ಕರ್‌ರವರು ಸ್ವಾಗತಿಸಿ, ವಾರ್ಷಿಕ ವರದಿಯನ್ನು ಮಂಡಿಸಿದರು. ಪ್ರಾಧ್ಯಾಪಕರಾದ ಡಾ. ಶಿವಪ್ರಸಾದ್ ಹುಡೇದ್‌ರವರು ವಂದಿಸಿದರು. ಕು. ಅಶ್ಮಿತಾ ಹಾಗೂ ವೃಂದದವರು ರಾಷ್ಟ್ರಗೀತೆ ಹಾಡಿದರು. ಡಾ. ಬಿ.ಜಿ. ಮಧುಸೂದನ್ ಕಾರ್ಯಕ್ರಮ ನಿರೂಪಿಸಿದರು.

**ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ 1062ನೆಯ ಜಯಂತಿ**

ಸುತ್ತೂರು ಶ್ರೀಕ್ಷೇತ್ರದಲ್ಲಿ ಜನವರಿ 1ರಂದು ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ 1062ನೆಯ ಜಯಂತಿ ಮಹೋತ್ಸವವು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರದ್ಧೆ, ಭಕ್ತಿ ಹಾಗೂ ಗೌರವಗಳಿಂದ ನೆರವೇರಿತು.

ಪ್ರಾತಃಕಾಲ ಕರ್ತೃಗದ್ದುಗೆಯಲ್ಲಿ ರುದ್ರಾಭಿಷೇಕ, ಸಹಸ್ರನಾಮಾವಳಿ, ಅಷ್ಟೋತ್ತರ ಮೊದಲಾದ ವಿಶೇಷ ಪೂಜೆಗಳು ಹಾಗೂ ಆದಿಜಗದ್ಗುರುಗಳವರ ರಜತ ಉತ್ಸವ ಮೂರ್ತಿಗೆ ಷೋಡಶೋಪಚಾರ ಪೂಜೆಗಳು ನೆರವೇರಿದವು. ಆದಿಜಗದ್ಗುರುಗಳ ಉತ್ಸವಮೂರ್ತಿಯ ಮೆರವಣಿಗೆಯು ಶ್ರೀಮಠದ ಬಿರುದುಬಾವಲಿಗಳು, ಮಂಗಳವಾದ್ಯ, ಎನ್‌ಸಿಸಿ ಹಾಗೂ ಜನಪದ ಕಲಾತಂಡಗಳೊಂದಿಗೆ ಸುತ್ತೂರಿನ ಪ್ರಮುಖ ಬೀದಿಗಳಲ್ಲಿ ನೆರವೇರಿತು. ಜೆಎಸ್‌ಎಸ್ ಲಲಿತಾ ಕಲಾ ವೃಂದ ಹಾಗೂ ಮೈಸೂರಿನ ನಿನಾದ ತಂಡದವರು ಭಕ್ತಿಗೀತೆ, ಸುಗಮಸಂಗೀತ ಮತ್ತು ಮಾಜಿ ಶಾಸಕರಾದ ಶ್ರೀ ಬಾಲರಾಜ್ ಹಾಗೂ ಚಾಮರಾಜನಗರದ ಕದಳಿ ವೇದಿಕೆ ಸದಸ್ಯರು ವಚನಗಾಯನ ಕಾರ್ಯಕ್ರಮ ನಡೆಸಿಕೊಟ್ಟರು.

ಇದೇ ಸಂದರ್ಭದಲ್ಲಿ ಸಿದ್ಧಾಂತಿ ಡಾ. ಕೆ.ಜಿ. ಪುಟ್ಟಹೊನ್ನಯ್ಯನವರು ಸಿದ್ಧಪಡಿಸಿ, ಭಾರತೀಯ ಜ್ಯೋತಿರ್ವಿಜ್ಞಾನ ಸಂಶೋಧನಾ ಕೇಂದ್ರದಿಂದ ಪ್ರಕಟಿಸಿರುವ ಶ್ರೀ

ಶಾಲಿವಾಹನ ಶಕೆ 1944ನೆಯ ಶ್ರೀ ಶುಭಕೃತು ನಾಮ ಸಂವತ್ಸರದ 'ಶ್ರೀ ಸುತ್ತೂರು ಶಿವರಾತ್ರೀಶ್ವರ ಪಂಚಾಂಗ'ವನ್ನು ಹಾಗೂ 2022ನೆಯ ವರ್ಷದ ಜೆಎಸ್‌ಎಸ್ ಮಹಾವಿದ್ಯಾಪೀಠದ ಕನ್ನಡ ಹಾಗೂ ಇಂಗ್ಲಿಷ್ ಟೇಬಲ್ ಕ್ಯಾಲೆಂಡರ್‌ಗಳನ್ನು ಬಿಡುಗಡೆಗೊಳಿಸಲಾಯಿತು.

ಸಮಾರಂಭದಲ್ಲಿ ವಾಟಾಳು, ಹೊಸಮಠ, ಕುದೇರು, ಮಾದಹಳ್ಳಿ, ಚಿಕ್ಕತುಪ್ಪೂರು, ಕುಂದೂರು, ಆಲಮಟ್ಟಿ, ಬರಡನಪುರ, ಗೌಡಹಳ್ಳಿ, ಮುಡುಕನಪುರ, ಮಾದಳ್ಳಿ, ಹರವೆ, ದಂಡಿಕೆರೆ, ಹುಲ್ಲಹಳ್ಳಿ, ಮುಡಿಗುಂಡ, ಕುಂದೂರು, ನೀಲಕಂಠಸ್ವಾಮಿಮಠ, ಚುಂಚನಹಳ್ಳಿ ಹಾಗೂ ನವಿಲೂರು ಮಠಗಳ ಶ್ರೀಗಳು ಸೇರಿದಂತೆ ನೂರಕ್ಕೂ ಹೆಚ್ಚು ಮಠಾಧೀಶರು ಹಾಗೂ ಹರಗುರು ಚರಮೂರ್ತಿಗಳು, ಶಾಸಕರಾದ ಶ್ರೀ ಸಿ.ಎಸ್. ನಿರಂಜನಕುಮಾರ್, ಶ್ರೀ ಎನ್. ಮಹೇಶ್, ಶ್ರೀ ಮರಿತಿಬ್ಬೇಗೌಡ, ಮಾಜಿ ಸಂಸದರಾದ ಶ್ರೀ ಆರ್. ಧ್ರುವನಾರಾಯಣ್, ಮಾಜಿ ಶಾಸಕರುಗಳಾದ ಶ್ರೀ ಜಿ.ಎನ್. ನಂಜುಂಡಸ್ವಾಮಿ, ಶ್ರೀ ಎಂ.ಕೆ. ಸೋಮಶೇಖರ್, ಶ್ರೀ ಎ.ಆರ್. ಕೃಷ್ಣಮೂರ್ತಿ, ಶ್ರೀಮತಿ ಪರಿಮಳ ನಾಗಪ್ಪ, ಶ್ರೀ ಎಸ್. ಬಾಲರಾಜ್, ಶ್ರೀ ಕಳಲೆ ಕೇಶವಮೂರ್ತಿ ಮೊದಲಾದವರು ಭಾಗವಹಿಸಿದ್ದರು. ಮೈಸೂರು, ಬೆಂಗಳೂರು, ಚಾಮರಾಜನಗರ, ಮಂಡ್ಯ, ಹಾಸನ, ರಾಮನಗರ, ಕೊಡಗು, ಶಿವಮೊಗ್ಗ ಮೊದಲಾದ ಜಿಲ್ಲೆಗಳಿಂದ ಆಗಮಿಸಿದ್ದ ಭಕ್ತಾದಿಗಳು ಹಾಗೂ ಸಾರ್ವಜನಿಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

**ಮನಸ್ಸು ಸ್ಥಿಮಿತದಲ್ಲಿದ್ದರೆ ಕುಡಿತವನ್ನು ತ್ಯಜಿಸಬಹುದು**

ಮನಸ್ಸು ಸ್ಥಿಮಿತದಲ್ಲಿದ್ದರೆ ಕುಡಿತವನ್ನು ತ್ಯಜಿಸಬಹುದು ಎಂದು ಪರಮಪೂಜ್ಯ ಜಗದ್ಗುರುಗಳು ಜನವರಿ 3ರಂದು ಗುಂಡ್ಲುಪೇಟೆಯಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ವತಿಯಿಂದ ಹಾಲಹಳ್ಳಿ ಸಂಗಮ ಪ್ರತಿಷ್ಠಾನ ಮತ್ತು ಗುಂಡ್ಲುಪೇಟೆ ತಾಲ್ಲೂಕು ವಿವಿಧ ಸಂಘಸಂಸ್ಥೆಗಳ ಸಹಯೋಗದಲ್ಲಿ ನಡೆದ ಕುಡಿತ ಬಿಡಿಸುವ ಹನ್ನೊಂದನೆಯ ಉಚಿತ ಶಿಬಿರದ ಸಮಾರೋಪದ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು.

ಶಿಬಿರದಲ್ಲಿ ಭಾಗವಹಿಸಿದವರು ಕುಡಿತ ಬಿಡಲು ಮಾಡಿರುವ ಶಪಥ ಪಾಲಿಸಿದರೆ ಅವರಿಗೆ ಸಮಾಜದಲ್ಲಿ ಉತ್ತಮ ಗೌರವ ದೊರೆಯುತ್ತದೆ ಹಾಗೂ ಕುಟುಂಬಸ್ಥರು ಸಹ ನೆಮ್ಮದಿಯಾಗಿ ಜೀವಿಸಬಹುದು. ಶ್ರೀಮಠ ಹಾಗೂ ಸಂಸ್ಥೆಯಿಂದ ಇಂತಹ ಅನೇಕ ಕಾರ್ಯಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಮದ್ಯ ಸೇವಿಸುವ ಅಭ್ಯಾಸವನ್ನು ಬಿಟ್ಟು ಒಳ್ಳೆಯ ಕಾರ್ಯಗಳನ್ನು ಮಾಡುವತ್ತ ಸಾಗಬೇಕು ಎಂದು ಹೇಳಿದರು.

ಶಾಸಕರಾದ ಶ್ರೀ ಸಿ.ಎಸ್. ನಿರಂಜನಕುಮಾರ್ ಸಮಾರೋಪ ಭಾಷಣ ಮಾಡಿದರು. ಸಂಗಮ ಪ್ರತಿಷ್ಠಾನ ಅಧ್ಯಕ್ಷರಾದ ಶ್ರೀ ಹೆಚ್.ಎಂ. ಗಣೇಶ್ ಪ್ರಸಾದ್ ಅಧ್ಯಕ್ಷತೆ ವಹಿಸಿದ್ದರು.

ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಕಾರ್ಯದರ್ಶಿಗಳಾದ ಶ್ರೀ ಎ. ಹನುಮನರಸಯ್ಯ, ಶ್ರೀ ಹೆಚ್.ಎಸ್. ನಂಜಪ್ಪ, ಶ್ರೀ ಹೆಚ್.ಎಂ. ಮಹದೇವಪ್ಪ, ಶ್ರೀ ಕೆ.ಎಸ್. ಮಹೇಶ್, ಸಂಗಮ ಪ್ರತಿಷ್ಠಾನದ ಶ್ರೀ ಮಂಜುನಾಥ್ ಹಾಗೂ ವಿವಿಧ ಸಂಘಸಂಸ್ಥೆಗಳ ಪದಾಧಿಕಾರಿಗಳು ಮೊದಲಾದವರು ಉಪಸ್ಥಿತರಿದ್ದರು. ಪರಂಪರೆ ಸಂಸ್ಥೆ ಮುಖ್ಯಸ್ಥರಾದ ಶ್ರೀ ಕೃಷ್ಣಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಬಂಗಾರ ನಾಯ್ಕ ಪ್ರಾರ್ಥಿಸಿದರು. ಶ್ರೀ ಹೆಚ್.ಪಿ. ಬಸವರಾಜಪ್ಪ ಸ್ವಾಗತಿಸಿದರು. ಶ್ರೀ ಎಸ್. ಬಸವರಾಜು ವರದಿ ಮಂಡಿಸಿದರು. ಡಾ. ನಾಗೇಂದ್ರ ವಂದಿಸಿದರು. ಡಾ. ಎಂ.ಪಿ. ಸೋಮಶೇಖರ್ ಕಾರ್ಯಕ್ರಮ ನಿರೂಪಿಸಿದರು.

**ಶಿಕ್ಷಣ ವ್ಯವಸ್ಥೆಯ ಪರಾಮರ್ಶೆ ಅಗತ್ಯ**

ವಿದ್ಯಾರ್ಥಿಗಳಲ್ಲಿ ಜ್ಞಾನ, ವೈಚಾರಿಕತೆ, ಮಾನವೀಯ ಮೌಲ್ಯವನ್ನು ಬಿತ್ತುವಲ್ಲಿ ವಿಫಲವಾಗಿರುವ ಶಿಕ್ಷಣ ವ್ಯವಸ್ಥೆಯ ಕುರಿತು ಪರಾಮರ್ಶೆ ಮಾಡುವ ಅಗತ್ಯವಿದೆ ಎಂದು ವಿಧಾನಸಭೆ ವಿರೋಧಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರು ಜನವರಿ 3ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಭವನದಲ್ಲಿ ಗುಲ್ಬರ್ಗಾ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳು ಹಾಗೂ ಮೈಸೂರು ವಿವಿಯ ಜೈವಿಕ ತಂತ್ರಜ್ಞಾನ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಎಸ್.ಆರ್. ನಿರಂಜನರವರ ಅಭಿನಂದನಾ ಸಮಾರಂಭದಲ್ಲಿ ಮಾತನಾಡುತ್ತ ಹೇಳಿದರು.

ಪ್ರತಿಯೊಬ್ಬ ವ್ಯಕ್ತಿಯು ತನ್ನ ಬದುಕನ್ನು ಸಾರ್ಥಕಮಾಡಿಕೊಳ್ಳಬೇಕು. ಸಮಾಜಮುಖಿ ಶಿಕ್ಷಣ ಪಡೆಯಬೇಕು. ಇದರಿಂದ ಸಮಾಜದಲ್ಲಿ ಬದಲಾವಣೆ ಸಾಧ್ಯ. ನಿತ್ಯವೂ ದೇಶದಲ್ಲಿ ಶಿಕ್ಷಿತರ ಸಂಖ್ಯೆ ಹೆಚ್ಚಾದರೂ ವೈಚಾರಿಕತೆ ಮಾತ್ರ ಕಡಿಮೆಯಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ನಿರಂಜನ ಉವಾಚ ಮತ್ತು ಜ್ಞಾನಗಂಗೆ ಒಡಲು ಕೃತಿಗಳನ್ನು ಬಿಡುಗಡೆಗೊಳಿಸಲಾಯಿತು. ಪ್ರೊ. ಎಸ್.ಆರ್. ನಿರಂಜನ ಮತ್ತು ಶ್ರೀಮತಿ ವಾಣಿ ನಿರಂಜನ ದಂಪತಿಗಳನ್ನು ಹಾಗೂ ಅವರ ತಾಯಿ ಶ್ರೀಮತಿ ರತ್ನಮ್ಮ ರಾಮಚಂದ್ರರವರನ್ನು ಸನ್ಮಾನಿಸಲಾಯಿತು.

ಹೈದರಾಬಾದ್ ಒಸ್ಮಾನಿಯ ವಿವಿಯ ವಿಶ್ರಾಂತ ಕುಲಪತಿಗಳಾದ ಪ್ರೊ. ಸಿ. ಮನೋಹರಾಚಾರಿ ಅಭಿನಂದನ ಭಾಷಣ ಮಾಡಿದರು. ಪ್ರೊ. ಎಚ್.ಎಸ್. ಪ್ರಕಾಶ್, ಡಾ. ಕೃಷ್ಣಮೂರ್ತಿ ಚಮರಂ ಮಾತನಾಡಿದರು. ವಿಶ್ರಾಂತ ಕುಲಪತಿಗಳಾದ ಪ್ರೊ. ಕೆ.ಎಸ್. ರಂಗಪ್ಪನವರು ಸ್ವಾಗತಿಸಿದರು. ಲಲಿತಕಲಾ ಕಾಲೇಜು ವಿದ್ಯಾರ್ಥಿಗಳು ನಾಡಗೀತೆ ಹಾಡಿದರು. ಪ್ರೊ. ಕೆ.ಎಸ್. ಅಮೃತೇಶ್ ವಂದಿಸಿದರು. ಪ್ರೊ. ಸಿ. ನಾಗಣ್ಣ ಕಾರ್ಯಕ್ರಮ ನಿರೂಪಿಸಿದರು.

**ಸಾಮಾನ್ಯರೇ ಸಮಾಜದಲ್ಲಿ ದೊಡ್ಡವರಾಗಲು ಸಾಧ್ಯ**

ಸಾಮಾನ್ಯರಾದವರೇ ಯಾವತ್ತೂ ಸಮಾಜದಲ್ಲಿ ದೊಡ್ಡವರಾಗಲು ಸಾಧ್ಯ ಎಂಬುದಕ್ಕೆ ಬಾಬಾಗೌಡ ಪಾಟೀಲ ಉದಾಹರಣೆಯಾಗಿದ್ದಾರೆ ಎಂದು ಪರಮಪೂಜ್ಯ ಜಗದ್ಗುರುಗಳು ಜನವರಿ 6ರಂದು ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಚಿಕ್ಕಬಾಗೇವಾಡಿಯಲ್ಲಿ ರೈತ ಹೋರಾಟಗಾರ ಹಾಗೂ ಕೇಂದ್ರದ ಮಾಜಿ ಸಚಿವರಾದ ಶ್ರೀ ಬಾಬಾಗೌಡ ಪಾಟೀಲರವರ ಪುತ್ಥಳಿ ಅನಾವರಣ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು.

ವಿಧಾನಸಭಾ ಸದಸ್ಯರೂ, ಕೇಂದ್ರದಲ್ಲಿ ಸಚಿವರೂ ಆಗಿದ್ದ ಬಾಬಾಗೌಡ ಪಾಟೀಲರು ಹೇಗೆ ಸರಳ–ಸಜ್ಜನಿಕೆ ಜೀವನ ನಡೆಸಬಹುದು ಎಂಬುದನ್ನು ತೋರಿಸಿಕೊಟ್ಟವರು. ಬಹಳ ಜನರಿಗೆ ಇಂತಹ ವ್ಯಕ್ತಿಗಳು ಆದರ್ಶವಾಗುವುದಿಲ್ಲ. ಯಾಕೆಂದರೆ ಬಾಬಾಗೌಡ ಅಂತಹವರನ್ನು ಆದರ್ಶವಾಗಿ ಇಟ್ಟುಕೊಂಡರೆ ಜೀವನ ನಡೆಸುವುದು ಕಷ್ಟ ಎಂಬ ಭಾವನೆ ಇಟ್ಟುಕೊಂಡಿರುತ್ತಾರೆ. ಆದರೆ ಸಾಮಾನ್ಯರಾಗಿದ್ದೂ ಸಮಾಜದಲ್ಲಿ ಹೇಗೆ ದೊಡ್ಡವರಾಗಬಹುದು ಎಂಬುದನ್ನು ಪಾಟೀಲರು ಸಾಬೀತು ಪಡಿಸಿದರು ಎಂದು ಹೇಳಿದರು.

ಗದಗ ಶ್ರೀ ತೋಂಟದಾರ್ಯ ಸಂಸ್ಥಾನ ಮಠದ ಜಗದ್ಗುರು ಡಾ. ಶ್ರೀ ತೋಂಟದ ಸಿದ್ದರಾಮ ಮಹಾಸ್ವಾಮಿಗಳು ಬಾಬಾಗೌಡ ಪಾಟೀಲರಿಗೆ ರೈತರ ಕಲ್ಯಾಣವೇ ಮುಖ್ಯ ಧ್ಯೇಯವಾಗಿತ್ತು. ರೈತರಿಗೆ ಶಕ್ತಿ ತುಂಬುವ ಕೆಲಸವನ್ನು ಬಾಬಾಗೌಡರು ಬದುಕಿನುದ್ದಕ್ಕೂ ಮಾಡಿಕೊಂಡು ಬಂದಿದ್ದರು. ರೈತರನ್ನು ಸಂಘಟಿಸಿ, ರೈತರ ಪ್ರತಿನಿಧಿಯಾಗಿ ವಿಧಾನಸಭೆಯಲ್ಲಿ ರೈತರ ಧ್ವನಿಯಾಗಿದ್ದರು. ಕೇಂದ್ರ ಸಚಿವರಾಗಿ ಪ್ರಧಾನಮಂತ್ರಿ ಸಡಕ್ ಯೋಜನೆಯನ್ನು ತಂದು ರೈತರ ಹೊಲಗಳಿಗೆ ಹೋಗಲು ರಸ್ತೆ ನಿರ್ಮಿಸಿಕೊಟ್ಟರು. ಬಾಬಾಗೌಡರನ್ನು ಸ್ಮರಿಸಿದರೆ ರೈತರಿಗೆ ಚೈತನ್ಯ ಬರುತ್ತದೆ ಎಂದರು.

ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠದ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮಿಗಳು ಸಂದೇಶ ನೀಡಿದರು. ಮುಂಡರಗಿ ಶ್ರೀ ತೋಂಟದಾರ್ಯ ಶಾಖಾಮಠದ ಶ್ರೀ ನಿಜಗುಣ ಪ್ರಭು ತೋಂಟದಾರ್ಯ ಸ್ವಾಮಿಗಳು ಸ್ವಾಗತಿಸಿ ಪ್ರಾಸ್ತಾವಿಕ ಭಾಷಣ ಮಾಡಿದರು.

ಅಥಣಿ ವಿಮೋಚನಾ ಸಂಸ್ಥೆಯ ಶ್ರೀ ಬಿ.ಎಲ್. ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷರಾದ ಶ್ರೀ ಹನುಮಗೌಡ್ರು ಬೆಳಕುರ್ಕಿ, ರಾಜ್ಯ ಕಬ್ಬು ಬೆಳಗಾರ ಸಂಘದ ಅಧ್ಯಕ್ಷರಾದ ಶ್ರೀ ಕುರುಬೂರು ಶಾಂತಕುಮಾರ್, ಸಂಯುಕ್ತ ಜನತಾದಳದ ಅಧ್ಯಕ್ಷರಾದ ಶ್ರೀ ಮಹಿಮಾ ಪಟೇಲ್, ಶ್ರೀ ಮಲ್ಲಿಕಾರ್ಜುನ ವಾಲಿ, ಶ್ರೀ ಕೆ.ಟಿ. ಗಂಗಾಧರ, ಶ್ರೀ ಪಚ್ಚೆ ನಂಜುಂಡಸ್ವಾಮಿಯವರುಗಳು ಮಾತನಾಡಿದರು.

ಶ್ರೀಮತಿ ಸುಮಿತ್ರಾ ಬಾಬಾಗೌಡ ಪಾಟೀಲ ಮತ್ತು ಮಕ್ಕಳು, ಮಾಜಿ ಸಚಿವರಾದ ಶ್ರೀ ಶಶಿಕಾಂತ ನಾಯಕ ಮೊದಲಾದವರು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಶ್ರೀ ಬಾಬಾಗೌಡ ಪಾಟೀಲ್‌ರವರ ಕುಟುಂಬಸ್ಥರನ್ನು ಹಾಗೂ ರೈತಮುಖಂಡರನ್ನು ಸನ್ಮಾನಿಸಲಾಯಿತು. ಡಾ. ಗಜಾನಂದ ಸೊಗಲನ್ನವರ ಸ್ವಾಗತಿಸಿ, ವಂದಿಸಿದರು. ಶ್ರೀ ವಿವೇಕ ಕುರುಗುಂದ ಕಾರ್ಯಕ್ರಮ ನಿರೂಪಿಸಿದರು.

**ಸಂಘಟನೆ ಮತ್ತು ಸಾಮರಸ್ಯದ ಹಾದಿ ಮುಖ್ಯ**

ವೀರಶೈವ ಲಿಂಗಾಯತ ಸಮಾಜಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಹೀಗಾಗಿ ಸಂಘಟನೆ ಮತ್ತು ಸಾಮರಸ್ಯದ ಹಾದಿಯಲ್ಲಿ ಸಮಾಜ ಪರಿಣಾಮಕಾರಿಯಾದ ಹೆಜ್ಜೆಯನ್ನಿಡಬೇಕು ಎಂದು ಪರಮಪೂಜ್ಯ ಜಗದ್ಗುರುಗಳು ಜನವರಿ 7ರಂದು ಕಲಬುರಗಿ ಜಿಲ್ಲೆ ಆಳಂದದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ವತಿಯಿಂದ ನಿರ್ಮಿಸಿರುವ ವೀರಶೈವ–ಲಿಂಗಾಯತ ಭವನವನ್ನು ಉದ್ಘಾಟಿಸಿ ತಿಳಿಸಿದರು.

ಜಗತ್ತಿನಲ್ಲಿ ಇರುವುದೆಲ್ಲವೂ ನನಗಾಗಿಯೇ ಎಂಬುದಕ್ಕಿಂತ, ನನ್ನಲ್ಲಿ ಇರುವುದೆಲ್ಲವೂ ಜಗತ್ತಿಗಾಗಿ ಎಂಬ ತತ್ತ್ವವನ್ನು ನಂಬಿಕೊಂಡ ಬಂದ ಸಮಾಜವಿದು. ಈ ರೀತಿಯ ಸಾಮರಸ್ಯ ಎಲ್ಲರಲ್ಲೂ ಮೂಡಿದಾಗ ಮಾತ್ರ ವಿಶ್ವದಲ್ಲಿ ನೆಮ್ಮದಿ ಮೂಡಲು ಸಾಧ್ಯ ಎಂದರು.

ಕೇಂದ್ರ ಸಚಿವರಾದ ಶ್ರೀ ಭಗವಂತ ಖೂಬಾರವರು ಶೈಕ್ಷಣಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ವೀರಶೈವ ಲಿಂಗಾಯತ ಸಮಾಜ ಬಹು ದೊಡ್ಡ ಕೊಡುಗೆ ನೀಡಿದೆ. ಸಮಾಜದ ಒಗ್ಗಟ್ಟಿನ ಕಾರಣದಿಂದಲೇ ಇಂತಹ ಅಭಿವೃದ್ಧಿ ಕಾರ್ಯಗಳು ನಡೆಯುತ್ತವೆ ಎಂದು ತಿಳಿಸಿದರು.

ಮಾಜಿ ಶಾಸಕರಾದ ಶ್ರೀ ಬಿ.ಆರ್. ಪಾಟೀಲ್ 35 ವರ್ಷಗಳ ಹೋರಾಟದ ಪ್ರತಿಫಲದಿಂದ ಈ ವೀರಶೈವ–ಲಿಂಗಾಯತ ಭವನವನ್ನು ನಿರ್ಮಿಸಲಾಗಿದೆ. ಎಲ್ಲ ಸಮುದಾಯದ ಜನ ಇದರ ಸದುಪಯೋಗ ಮಾಡಿಕೊಂಡರೆ ನಮ್ಮ ಶ್ರಮ ಸಾರ್ಥಕವಾಗಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಾದನ ಹಿಪ್ಪರಗಿಯ ಶ್ರೀ ಶಿವಲಿಂಗೇಶ್ವರ ವಿರಕ್ತಮಠದ ಶ್ರೀ ಅಭಿನವ ಶಿವಲಿಂಗ ಸ್ವಾಮಿಗಳು ಮೊದಲಾದ ಮಠಾಧೀಶರು, ಶ್ರೀ ಹವಾ ಮಲ್ಲಿನಾಥ ಮಹಾರಾಜ್, ಮಾಜಿ ಸಚಿವರಾದ ಶ್ರೀ ಈಶ್ವರ ಬಿ. ಖಂಡ್ರೆ, ಡಾ. ಶರಣಪ್ರಕಾಶ ಪಾಟೀಲ, ಶಾಸಕರುಗಳಾದ ಶ್ರೀ ಎಂ.ವೈ. ಪಾಟೀಲ, ಶ್ರೀ ಬಿ.ಜಿ. ಪಾಟೀಲ, ಮಾಜಿ ಶಾಸಕರಾದ ಶ್ರೀ ಅಲ್ಲಮಪ್ರಭು ಪಾಟೀಲ, ಮಹಾಸಭಾದ ಜಿಲ್ಲಾಧ್ಯಕ್ಷರಾದ ಶ್ರೀ ಶರಣಕುಮಾರ ಮೋದಿ, ಶ್ರೀ ಶರಣಬಸಪ್ಪಾ ಪಾಟೀಲ, ಶ್ರೀ ಕೆ.ಆರ್. ಲಿಂಗಪ್ಪ ಮೊದಲಾದವರು ಉಪಸ್ಥಿತರಿದ್ದರು.

**ಭಗವಂತನಲ್ಲಿ ಶರಣಾದರೆ ಏನಾದರೂ ಸಾಧಿಸಬಹುದು**

ಭಗವಂತನಲ್ಲಿ ಶರಣಾದರೆ ಏನಾದರೂ ಸಾಧಿಸಬಹುದು ಎಂದು ಪರಮಪೂಜ್ಯ ಜಗದ್ಗುರುಗಳು ಜನವರಿ 7ರಂದು ಕಲಬುರಗಿಯ ಜಿಡಗಾ ಶ್ರೀ ನವಕಲ್ಯಾಣ ಮಠದಲ್ಲಿ ಏರ್ಪಡಿಸಿದ್ದ ಸತ್ಸಂಗ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ತಿಳಿಸಿದರು.

ಸಮಯ ಮನುಷ್ಯನನ್ನು ಬದಲಾಯಿಸುತ್ತದೆ. ಭಾರತೀಯರ ಮನಸ್ಸುಗಳು ಎಲ್ಲರ ಏಳಿಗೆಯನ್ನು ಬಯಸುತ್ತವೆ. ಸದ್ಭಾವನೆಯಿಂದ ಕೆಲಸ ಮಾಡಿದರೆ ಶ್ರಮಕ್ಕೆ ಫಲ ಸಿಗುತ್ತದೆ. ಜಗತ್ತಿನಲ್ಲಿ ಎಲ್ಲಿಯ ತನಕ ಸಂತರ–ಮಹಾತ್ಮರ ತತ್ತ್ವ–ಸಂದೇಶಗಳ ಅನುಷ್ಠಾನಗಳು ನಡೆಯುತ್ತವೆಯೋ ಅಂತಹ ದೇಶಗಳಲ್ಲಿ ಸಮೃದ್ಧಿ, ಶಾಂತಿ ನೆಲೆಸಿರುತ್ತದೆ. ಯಾವಾಗ ಆಚಾರ ವಿಚಾರಗಳು ನಶಿಸುತ್ತವೆಯೋ ಅಲ್ಲಿ ಶಾಂತಿ ನೆಮ್ಮದಿಗೆ ಅವಕಾಶವಿಲ್ಲ. ಜಿಡಗಾ ಮಠದ ಲಿಂಗೈಕ್ಯ ಶ್ರೀ ಷಡಕ್ಷರಿ ಸಿದ್ಧರಾಮೇಶ್ವರ ಶ್ರೀಗಳಿಗೂ ಶ್ರೀ ಸುತ್ತೂರು ಮಠಕ್ಕೂ ಅನ್ಯೋನ್ಯ ಸಂಬಂಧವಿದೆ. ಈಗಿನ ಡಾ. ಮುರುಘರಾಜೇಂದ್ರ ಮಹಾಸ್ವಾಮಿಗಳು ಸಮಾಜದ ಒಳಿತಿಗಾಗಿ ಶ್ರೀಮಠದಲ್ಲಿ ಒಂದು ಸಾವಿರ ವಿದ್ಯಾರ್ಥಿಗಳಿಗೆ ಉಚಿತವಾಗಿ ವಸತಿ ಮತ್ತು ಶಿಕ್ಷಣ ನೀಡಲು ಸಿದ್ಧತೆ ಮಾಡುತ್ತಿರುವುದು ಅವರಲ್ಲಿರುವ ಸಮಾಜದ ಬಗೆಗಿನ ಕಳಕಳಿಯನ್ನು ತೋರಿಸುತ್ತದೆ ಹಾಗೂ ಶ್ರೀಮಠದಲ್ಲಿ ಗೋಶಾಲೆ, ಕಾಮಧೇನು ಪೂಜೆ ನಿರಂತರ ನಡೆಸುತ್ತಿರುವುದು ಸಂತಸದ ವಿಷಯ ಎಂದರು.

ಡಾ. ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳು ಒಂದು ಸರ್ಕಾರ ಮಾಡುವ ಕೆಲಸಗಳನ್ನು ಸುತ್ತೂರು ಶ್ರೀಮಠ ಮಾಡುತ್ತಿದೆ. ಸುತ್ತೂರು ಶ್ರೀಗಳು ಮಾತೃ ಹೃದಯವುಳ್ಳವರು. ಸಿದ್ಧರಾಮೇಶ್ವರ ಶಿವಯೋಗಿಗಳಲ್ಲಿನ ಪ್ರೀತಿ ನನಗೆ ಈಗ ಸುತ್ತೂರು ಶ್ರೀಗಳಿಂದ ಸಿಕ್ಕಿದೆ. ಶ್ರೀಮಠದಿಂದ ಒಂದು ಸಾವಿರ ಬಡ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಉಚಿತ ವಸತಿ ಮತ್ತು ಶಿಕ್ಷಣ ನೀಡಲು ಆಯೋಜಿಸಿದ್ದು, ಈ ಕಾರ್ಯಕ್ರಮದ ಉದ್ಘಾಟನೆಯನ್ನು ಸುತ್ತೂರು ಶ್ರೀಗಳಿಂದಲೇ ಪ್ರಾರಂಭ ಮಾಡಿಸಲಾಗುವುದು ಎಂದು ತಿಳಿಸಿದರು.

ಮಾದನ ಹಿಪ್ಪರಗಿಯ ಶ್ರೀ ಶಿವಲಿಂಗೇಶ್ವರ ವಿರಕ್ತಮಠದ ಶ್ರೀ ಅಭಿನವ ಶಿವಲಿಂಗ ಸ್ವಾಮಿಗಳು, ಸುತ್ತೂರು ಶ್ರೀಗಳು ನಮ್ಮ ತಾಲ್ಲೂಕಿಗೆ ಬಂದು ನಮ್ಮನ್ನೆಲ್ಲಾ ಪಾವನ ಮಾಡಿದ್ದಾರೆ, ಶ್ರೀಗಳು ಶಿಕ್ಷಣದ ಬಗ್ಗೆ ಅಪಾರ ಕಾಳಜಿ ಹೊಂದಿದ್ದು, ಸಮಾಜಕ್ಕೆ ಅವರ ಕೊಡುಗೆ ಅಪಾರವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಚಿನ್ಮಯಗಿರಿ, ಮಾಶಾಳದ ಶ್ರೀಗಳು ಇತರೆ ಮಠದ ಮಠಾಧೀಶರು ಉಪಸ್ಥಿತರಿದ್ದರು. ಕು. ಅಮೂಲ್ಯ ಬಸವರಾಜ ಹಿರೇಮಠ ಕಾರ್ಯಕ್ರಮ ನಿರೂಪಿಸಿದರು.

**ಸೈಯದ್ ಇಸಾಕ್‌ರ ಭಾಷಾಭಿಮಾನ ಮತ್ತು ದೇಶಾಭಿಮಾನ ದೊಡ್ಡದು**

ಸೈಯದ್ ಇಸಾಕ್‌ರ ಭಾಷಾಭಿಮಾನ ಮತ್ತು ದೇಶಾಭಿಮಾನ ದೊಡ್ಡದು ಎಂದು ಪರಮಪೂಜ್ಯ ಜಗದ್ಗುರುಗಳು ಜನವರಿ 26ರಂದು ಗಣರಾಜ್ಯೋತ್ಸವದ ಪ್ರಯುಕ್ತ

ಮೈಸೂರಿನ ರಾಜೀವ್‌ನಗರದಲ್ಲಿ ಕನ್ನಡಪ್ರೇಮಿ ಶ್ರೀ ಸೈಯದ್ ಇಸಾಕ್‌ರವರ ಮರುನಿರ್ಮಿತ ಸಾರ್ವಜನಿಕ ಗ್ರಂಥಾಲಯ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು.

ಕಳೆದ ವರ್ಷ ಕಾರಣಾಂತರಗಳಿಂದ ಸ್ಥಗಿತಗೊಂಡಿದ್ದ ಇಸಾಕ್‌ರವರ ಗ್ರಂಥಾಲಯ ಮತ್ತೆ ಕೆಲವು ತಿಂಗಳಲ್ಲೆ ಸಾರ್ವಜನಿಕರ ಬೆಂಬಲದಿಂದ ಪುನಃ ಆರಂಭವಾಗಿರುವುದು ಸಂತಸದ ಸಂಗತಿ. ಸೈಯದ್ ಇಸಾಕ್‌ರವರು ಯಾವುದೇ ನಿರೀಕ್ಷೆಯಿಲ್ಲದೆ ಈ ಸೇವಾಕಾರ್ಯವನ್ನು ಹಲವಾರು ವರ್ಷಗಳಿಂದ ಮಾಡಿಕೊಂಡು ಬರುತ್ತಿದ್ದಾರೆ. ಪ್ರಕೃತಿ, ಭಾಷೆ ಮತ್ತು ದೇಶಗಳ ಮೇಲಿನ ಅಭಿಮಾನದ ಕಾರಣದಿಂದಲೇ ಅವರಿಗೆ ಈ ಕಾರ್ಯ ಸಾಧ್ಯವಾಗಿದೆ ಎಂದು ಹೇಳಿದರು.

ಸಂಸದರಾದ ಶ್ರೀ ಪ್ರತಾಪ ಸಿಂಹರವರು ಸೈಯದ್ ಇಸಾಕ್ ಅವರು ಕೇವಲ ಕನ್ನಡಪ್ರೇಮಿ ಮಾತ್ರವಲ್ಲ, ಅಪ್ಪಟ ದೇಶಪ್ರೇಮಿಯೂ ಹೌದು. ಅವರು ಕಂಡಿರುವ ಸುಸಜ್ಜಿತವಾದ ಗ್ರಂಥಾಲಯ ನಿರ್ಮಾಣದ ಕನಸನ್ನು ಸಾಕಾರಗೊಳಿಸುವುದು ಎಲ್ಲರ ಜವಾಬ್ದಾರಿ ಎಂದರು.

ಮಾಜಿ ಮೇಯರ್ ಶ್ರೀ ಅಯೂಬ್ ಖಾನ್ ಮೊದಲಾದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

**ಸರಳ ಮತ್ತು ಸಾಂಪ್ರದಾಯಿಕವಾಗಿ ಜರುಗಿದ ಸುತ್ತೂರು ಜಾತ್ರೆ**

ಪ್ರತಿ ವರ್ಷ ಅತ್ಯಂತ ವಿಜೃಂಭಣೆಯಿಂದ ಜರುಗುತ್ತಿದ್ದ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಧಾರ್ಮಿಕ ಆಚರಣೆಗಳು ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಕಳೆದ ವರ್ಷದಂತೆ ಈ ವರ್ಷವೂ ಸರಳ ಮತ್ತು ಸಾಂಪ್ರದಾಯಿಕವಾಗಿ ನೆರವೇರಿದವು.

ಜನವರಿ 29ರಂದು ಸಂಜೆ ಶ್ರೀಮಠದಲ್ಲಿ ಉತ್ಸವಮೂರ್ತಿಗೆ ವಿಶೇಷ ಪೂಜೆಯನ್ನು ಸಲ್ಲಿಸಿ ಕರ್ತೃಗದ್ದುಗೆಗೆ ಬಿಜಯಂಗೈಸುವುದರ ಮೂಲಕ ಜಾತ್ರಾ ಮಹೋತ್ಸವದ ಧಾರ್ಮಿಕ ಆಚರಣೆಗಳಿಗೆ ಚಾಲನೆ ನೀಡಲಾಯಿತು. 30ರಂದು ಪ್ರಾತಃಕಾಲ ಕರ್ತೃಗದ್ದುಗೆ, ಮಂತ್ರಮಹರ್ಷಿಗಳು ಮತ್ತು ರಾಜೇಂದ್ರ ಶ್ರೀಗಳ ಗದ್ದುಗೆ, ನಂಜುಂಡೇಶ್ವರ ದೇವಸ್ಥಾನ, ಮಹದೇಶ್ವರ ಸನ್ನಿಧಿ, ಸೋಮೇಶ್ವರ ಮತ್ತು ವೀರಭದ್ರೇಶ್ವರ ದೇವಸ್ಥಾನಗಳಲ್ಲಿ ಮಹಾರುದ್ರಾಭಿಷೇಕ ಹಾಗೂ ಸಹಸ್ರನಾಮಾವಳಿ, ಅಷ್ಟೋತ್ತರ ಮೊದಲಾದ ವಿಶೇಷ ಪೂಜೆಗಳು ನೆರವೇರಿದವು. ಬೆಳಗ್ಗೆ ಸುತ್ತೂರು ಗ್ರಾಮದ ಎಲ್ಲ ದೇವಸ್ಥಾನಗಳಲ್ಲಿ ವಿಶೇಷ ಪೂಜೆಯನ್ನು ಸಲ್ಲಿಸಲಾಯಿತು. ಅನಂತರ ಮೈಸೂರು ಶ್ರೀ ನೀಲಕಂಠಸ್ವಾಮಿ ಮಠದ ಶ್ರೀ ಸಿದ್ಧಮಲ್ಲ ಸ್ವಾಮಿಗಳು ಷಟ್‌ಸ್ಥಲ ಧ್ವಜಾರೋಹಣ ನೆರವೇರಿಸಿದರು.

ಆದಿಜಗದ್ಗುರುಗಳವರ ಮೂರ್ತಿಗೆ ರಾಜೋಪಚಾರ ಹಾಗೂ ವಿಶೇಷ ಪೂಜೆ ಸಲ್ಲಿಸಿದ ಅನಂತರ ಸಾಂಕೇತಿಕವಾಗಿ ಬೆಳ್ಳಿ ರಥೋತ್ಸವ ಜರುಗಿತು. ಮಧ್ಯಾಹ್ನ ಕಪಿಲಾ ನದಿಯ ತೆಪ್ಪದ ಕಡುವಿನಲ್ಲಿ ಉತ್ಸವಮೂರ್ತಿಗೆ ಅಭಿಷೇಕ ಮಾಡಲಾಯಿತು. ಸಂಜೆ ಧ್ವಜಾವರೋಹಣದ ನಂತರ ಉತ್ಸವಮೂರ್ತಿಯನ್ನು ಶ್ರೀಮಠಕ್ಕೆ ಬಿಜಯಂಗೈಸುವುದರ ಮೂಲಕ ಜಾತ್ರಾ ಮಹೋತ್ಸವ ಸಂಪನ್ನಗೊಂಡಿತು.

ವಾಟಾಳು, ಹುಲಿಯೂರುದುರ್ಗ, ಚಿಕ್ಕತುಪ್ಪೂರು, ಚುಂಚನಹಳ್ಳಿ, ರಾಮಾಪುರ, ಆಲಮಟ್ಟಿ, ರಾಗಿಬೊಮ್ಮನಹಳ್ಳಿ, ಶಿರಮಳ್ಳಿ, ನಂಜನಗೂಡು, ಕುರುಬೂರು ಮಠಗಳ ಶ್ರೀಗಳು ಸೇರಿದಂತೆ ಮಠಾಧೀಶರುಗಳು ಮತ್ತು ಹರಗುರು ಚರಮೂರ್ತಿಗಳು ಮೊದಲಾದವರು ಪಾಲ್ಗೊಂಡಿದ್ದರು.

**ಜೆಎಸ್‌ಎಸ್ ಕೆವಿಕೆ ಸೇವೆ ಬಗ್ಗೆ ಮೆಚ್ಚುಗೆ**

ಐಸಿಎಆರ್ ಜೆಎಸ್‌ಎಸ್ ಕೆವಿಕೆ ವಿಜ್ಞಾನಿಗಳು ಸಮಯಕ್ಕೆ ಸರಿಯಾಗಿ ತಾಕಿಗೆ ಭೇಟಿ ನೀಡಿ ಉತ್ತಮ ಮಾರ್ಗದರ್ಶನ ನೀಡುತ್ತಾ ಯಾವ ಸಮಯದಲ್ಲಿ ಕರೆ ಮಾಡಿದರೂ ಅದಕ್ಕೆ ಸ್ಪಂದಿಸಿ, ಉತ್ತಮ ಇಳುವರಿ ಪಡೆಯಲು ರೈತರನ್ನು ಪ್ರೋತ್ಸಾಹಿಸುತ್ತಿದ್ದಾರೆ ಎಂದು ಜೆಎಸ್‌ಎಸ್ ಕೆವಿಕೆಯ ಸೇವೆ ಬಗ್ಗೆ ಪ್ರಶಸ್ತಿ ವಿಜೇತ ರೈತರಲ್ಲೊಬ್ಬರಾದ ಶ್ರೀ ಕೆ.ಎಸ್. ಮಹದೇವಪ್ರಭುರವರು ಮೆಚ್ಚುಗೆ ವ್ಯಕ್ತಪಡಿಸಿದರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಅಂಗವಾಗಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನೆರವೇರಿದ ಧಾರ್ಮಿಕ ಆಚರಣೆಗಳ ಶುಭ ಸಂದರ್ಭದಲ್ಲಿ ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ ಹಾಗು ಯಳಂದೂರು ತಾಲ್ಲೂಕು ದುಗ್ಗಹಟ್ಟಿ ಗ್ರಾಮದ ಶ್ರೀಮತಿ ಸುಂದರಮ್ಮ ವೀರಭದ್ರಪ್ಪ ಪ್ರತಿಷ್ಠಾನದ ಸಹಯೋಗದಲ್ಲಿ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳಲ್ಲಿ ಅತ್ಯುತ್ತಮವಾಗಿ ಬೆಳೆ ಬೆಳೆದ ರೈತರಿಗೆ ಪ್ರಶಸ್ತಿ ನೀಡಿದ ಸಂದರ್ಭದಲ್ಲಿ ಮಾತನಾಡುತ್ತ ತಿಳಿಸಿದರು.

ವಾಟಾಳು ಮಠದ ಶ್ರೀ ಸಿದ್ಧಲಿಂಗ ಶಿವಾಚಾರ್ಯ ಸ್ವಾಮಿಗಳು ಪ್ರಶಸ್ತಿ ಪಡೆದವರು ಇತರ ರೈತರಿಗೆ ಮಾದರಿಯಾಗಿ ಮಾರ್ಗದರ್ಶನ ಮಾಡಬೇಕು. ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಮಾರ್ಗದರ್ಶನದಿಂದ, ಸ್ವತಃ ನಮ್ಮ ಜಮೀನಿನಲ್ಲೂ 25 ಮೂಟೆ ಬೆಳೆಯುತ್ತಿದ್ದ ಗದ್ದೆಯಲ್ಲಿ 40 ಮೂಟೆ ಭತ್ತವನ್ನು ಬೆಳೆದು, ಕ್ಷೇತ್ರೋತ್ಸವವನ್ನು ಮಾಡಿ ತಳಿ ಪ್ರಚಾರ ಮಾಡಲಾಯಿತು. ಶ್ರೀ ಸುತ್ತೂರು ಜಗದ್ಗುರುಗಳವರು ಇಂತಹ ಉತ್ತಮ ಕೆಲಸ ಮಾಡಲು ಮೂಲ ಕಾರಣರಾಗಿದ್ದಾರೆ ಎಂದು ನುಡಿದರು.

ಬಾಳೆ ಬೆಳೆಗೆ ಯಳಂದೂರು ತಾಲ್ಲೂಕು ಮದ್ದೂರಿನ ಶ್ರೀ ಆರ್. ರವೀಶ್‌ಕುಮಾರ್

ರವರಿಗೆ ಪ್ರಥಮ, ಗುಂಬಳ್ಳಿಯ ಶ್ರೀಮತಿ ಶಾಂತಮ್ಮನವರಿಗೆ ದ್ವಿತೀಯ; ಕಬ್ಬು ಬೆಳೆಗೆ ಕೊಳ್ಳೇಗಾಲ ತಾಲ್ಲೂಕು ಟಗರಪುರದ ಶ್ರೀ ನಂಜುಂಡಸ್ವಾಮಿಯವರಿಗೆ ಪ್ರಥಮ, ಕಜ್ಜಿಹುಂಡಿಯ ಶ್ರೀ ಕೆ.ಎಸ್. ಮಹದೇವಪ್ರಭುರವರಿಗೆ ದ್ವಿತೀಯ; ಟೊಮ್ಯಾಟೋ ಬೆಳೆಗೆ ಚಾಮರಾಜನಗರ ತಾಲ್ಲೂಕು ಬದನಗುಪ್ಪೆಯ ಶ್ರೀ ಶಿವಮಲ್ಲಪ್ಪನವರಿಗೆ ಪ್ರಥಮ, ಮೇಲಾಜಿಪುರದ ಶ್ರೀ ನಂಜುಂಡಸ್ವಾಮಿಯವರಿಗೆ ದ್ವಿತೀಯ; ಮುಸುಕಿನ ಜೋಳದ ಬೆಳೆಗೆ ಹನೂರು ತಾಲ್ಲೂಕು ಧನಗೆರೆಯ ಶ್ರೀ ಮಹದೇವಶೆಟ್ಟಿಯವರಿಗೆ ಪ್ರಥಮ, ಬಟ್ಟಗುಪ್ಪೆಯ ಶ್ರೀ ವಿ. ವೆಂಕಟೇಶ್‌ರವರಿಗೆ ದ್ವಿತೀಯ; ಪೋಲ್ ಬೀನ್ಸ್ ಬೆಳೆಗೆ ಗುಂಡ್ಲುಪೇಟೆ ತಾಲ್ಲೂಕು ಬರಗಿಯ ಶ್ರೀ ಇ. ನಿಂಗಪ್ಪನವರಿಗೆ ಪ್ರಥಮ, ಆಲತ್ತೂರಿನ ಶ್ರೀ ಎ.ಎಂ. ನಿಖಿಲ್ ಅವರಿಗೆ ದ್ವಿತೀಯ ಬಹುಮಾನ ನೀಡಲಾಯಿತು. ವಿಜೇತರಿಗೆ ಪ್ರಶಸ್ತಿ ಫಲಕ ಹಾಗೂ ನಗದು ಬಹುಮಾನ ನೀಡಿ ಪ್ರೋತ್ಸಾಹಿಸಲಾಯಿತು.

ಪ್ರತಿಷ್ಠಾನದ ಅಧ್ಯಕ್ಷರಾದ ದುಗ್ಗಹಟ್ಟಿ ಶ್ರೀ ಪಿ. ವೀರಭದ್ರಪ್ಪನವರು ರೈತರನ್ನು ಸನ್ಮಾನಿಸಿ ಮಾತನಾಡಿದರು. ಐಸಿಎಆರ್ ಜೆಎಸ್‌ಎಸ್ ಕೆವಿಕೆಯ ಪ್ರಭಾರ ಹಿರಿಯ ವಿಜ್ಞಾನಿ ಹಾಗು ಮುಖ್ಯಸ್ಥರಾದ ಶ್ರೀಮತಿ ಹೆಚ್.ವಿ. ದಿವ್ಯಾರವರು ಸ್ವಾಗತಿಸಿ ಪ್ರಶಸ್ತಿ ಪುರಸ್ಕೃತ ರೈತರನ್ನು ಪರಿಚಯಿಸಿದರು. ಹಿರಿಯ ವಿಜ್ಞಾನಿಗಳಾದ ಶ್ರೀ ಮಂಜುನಾಥ ಅಂಗಡಿ ವಂದಿಸಿದರು. ಕಾರ್ಯಕ್ರಮ ಸಹಾಯಕರಾದ ಶ್ರೀ ಜೆ.ಜಿ. ರಾಜಣ್ಣ ನಿರೂಪಿಸಿದರು.

**ಚಾಮರಾಜನಗರ ಜಿಲ್ಲೆ ಜಾನಪದ ಸಾಹಿತ್ಯದ ತವರು**

ಚಾಮರಾಜನಗರ ಜಿಲ್ಲೆ ಜಾನಪದ ಸಾಹಿತ್ಯದ ತವರು ಎಂದು ಪರಮಪೂಜ್ಯ ಜಗದ್ಗುರುಗಳವರು ಫೆಬ್ರವರಿ 5ರಂದು ಶ್ರೀ ಮಲೆ ಮಹದೇಶ್ವರ ಬೆಟ್ಟದಲ್ಲಿ ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಹಾಗೂ ಶ್ರೀ ಸಾಲೂರು ಮಠದ ಮಲೆ ಮಹದೇಶ್ವರ ಕೃಪಾ ಎಜುಕೇಷನ್ ಸೊಸೈಟಿ ಸಂಯುಕ್ತಾಶ್ರಯದಲ್ಲಿ ಜರುಗಿದ ಶ್ರೀ ಮಹದೇಶ್ವರರು ಮತ್ತು ಜಾನಪದ ಸಂಸ್ಕೃತಿ ವಿಚಾರಸಂಕಿರಣ ಹಾಗೂ ಗಡಿನಾಡು ಸಾಂಸ್ಕೃತಿಕ ಉತ್ಸವದ ಉದ್ಘಾಟನೆಯ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು. ರಾಚಪ್ಪಾಜಿ, ಸಿದ್ಧಪ್ಪಾಜಿ, ಮಂಟೇಸ್ವಾಮಿ ಹಾಗೂ ಮಹದೇಶ್ವರರ ನೆಲೆವೀಡು ಚಾಮರಾಜನಗರ ಜಿಲ್ಲೆ. ಇಲ್ಲಿನ ಜಾನಪದ ಸಾಹಿತ್ಯ, ಕಲೆ, ಸಂಸ್ಕೃತಿಯನ್ನು ಉಳಿಸಿ ಬೆಳೆಸಬೇಕಿದೆ ಎಂದು ತಿಳಿಸಿದರು.

ಸಾಲೂರು ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ಪ್ರಾಸ್ತಾವಿಕವಾಗಿ ಮಾತನಾಡಿದರು. ಶಾಸಕರಾದ ಶ್ರೀ ಆರ್. ನರೇಂದ್ರ, ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್, ಅಪರ ಜಿಲ್ಲಾಧಿಕಾರಿಗಳಾದ ಶ್ರೀಮತಿ ಕಾತ್ಯಾಯಿನಿದೇವಿ ಹಾಗೂ ಶ್ರೀ ಮಲೆ ಮಹದೇಶ್ವರ ಬೆಟ್ಟದ ಪ್ರಾಧಿಕಾರ ಕಾರ್ಯದರ್ಶಿಗಳಾದ ಶ್ರೀ ಜಯವಿಭವಸ್ವಾಮಿಯವರುಗಳು ಮಾತನಾಡಿದರು.

ಗುಂಡೇಗಾಲದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಸ್ವಾಗತಿಸಿದರು. ಶ್ರೀ ಹೆಚ್.ಎನ್.

ಶಿವಕುಮಾರಸ್ವಾಮಿ ವಂದಿಸಿದರು. ಶ್ರೀ ಆರ್. ಸೋಮಶೇಖರ್ ಪ್ರಾರ್ಥಿಸಿದರು. ಶ್ರೀ ಮಹದೇವಪ್ರಭುಸ್ವಾಮಿ ಕಾರ್ಯಕ್ರಮ ನಿರೂಪಿಸಿದರು. ಕುಂದೂರು, ಮುಡಿಗುಂಡಂ, ನೀಲಕಂಠಸ್ವಾಮಿ ಮಠ ಮೊದಲಾದ ಶ್ರೀಗಳು, ಪ್ರೊ. ಮಲೆಯೂರು ಗುರುಸ್ವಾಮಿ, ಪ್ರೊ. ಎಸ್. ಶಿವರಾಜಪ್ಪ, ಶ್ರೀ ಬೇಳೂರು ಸುದರ್ಶನ ಮೊದಲಾದವರು ಉಪಸ್ಥಿತರಿದ್ದರು.

ಕಾರ್ಯಕ್ರಮಕ್ಕೂ ಮೊದಲು ವೀರಗಾಸೆ, ಕಂಸಾಳೆ, ಡೊಳ್ಳುಕುಣಿತ, ಮಕ್ಕಳ ವೇಷಭೂಷಣ ಕಲಾ ಪ್ರದರ್ಶನಗಳು ನಡೆದವು. ನಂತರ ಕವಿಗೋಷ್ಠಿ ಮತ್ತು ವಿಚಾರಗೋಷ್ಠಿಗಳು ಜರುಗಿದವು.

**ಚಿಮ್ಮನಹಳ್ಳಿ ಶ್ರೀ ಮುನೀಶ್ವರಸ್ವಾಮಿ ಶಿಲಾ ದೇವಾಲಯದ ಲೋಕಾರ್ಪಣೆ**

ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕು ಚಿಮ್ಮನಹಳ್ಳಿಯ ಮಹಾಮಹಿಮ ಶ್ರೀ ಮುನೀಶ್ವರಸ್ವಾಮಿ ಮಹಾಸಂಸ್ಥಾನ ದಾಸೋಹ ಮಠದ ಶ್ರೀ ಮುನೀಶ್ವರಸ್ವಾಮಿ ನೂತನ ಶಿಲಾ ದೇವಾಲಯದ ಲೋಕಾರ್ಪಣೆಯ ಕಾರ್ಯಕ್ರಮಗಳಿಗೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಚಾಲನೆ ನೀಡಲಾಯಿತು.

ತಮ್ಮಡಿಹಳ್ಳಿ ವಿರಕ್ತಮಠದ ಡಾ. ಶ್ರೀ ಅಭಿನವ ದೇಶಿಕೇಂದ್ರ ಮಲ್ಲಿಕಾರ್ಜುನ ಸ್ವಾಮಿಗಳು, ಹೊಸದುರ್ಗ ಕನಕಧಾಮದ ಶ್ರೀ ಈಶ್ವರಾನಂದಪುರಿ ಸ್ವಾಮಿಗಳು, ಚಿತ್ರದುರ್ಗ ಶಿವಶರಣ ಮಾದಾರ ಚೆನ್ನಯ್ಯ ಗುರುಪೀಠದ ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮಿಗಳು ಸಮ್ಮುಖ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕರುಗಳಾದ ಶ್ರೀ ಎಂ.ಟಿ. ಕೃಷ್ಣಪ್ಪ, ಶ್ರೀ ಬೆಮೆಲ್ ಕಾಂತರಾಜು, ತುಮಕೂರು ಹಾಲು ಒಕ್ಕೂಟದ ಅಧ್ಯಕ್ಷರಾದ ಶ್ರೀ ಸಿ.ವಿ. ಮಹಾಲಿಂಗಯ್ಯ, ತುಮಕೂರು ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಗಳಾದ ಶ್ರೀ ಕೆ.ಸಿ. ನರಸಿಂಹಮೂರ್ತಿ, ತಾಲ್ಲೂಕು ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಬಸವರಾಜು ಹೊನ್ನೇಬಾಗಿ, ಮುನೀಶ್ವರಸ್ವಾಮಿ ಮಠದ ಕ್ಷೇತ್ರ ಸಂಸ್ಥಾಪಕರಾದ ಶ್ರೀ ಸಿ.ಎ. ಶಿವಪ್ಪ, ಶ್ರೀ ಸಿ.ಎ. ರಂಗಯ್ಯ, ಶ್ರೀ ಎಸ್.ಡಿ. ಪ್ರಜ್ವಲ್ ಮೊದಲಾದವರು ಉಪಸ್ಥಿತರಿದ್ದರು.

**ಮನಸ್ಸಿನ ತೊಳಲಾಟಗಳಿಗೆ ಪಾರಮಾರ್ಥದಿಂದ ಮುಕ್ತಿ**

ಮಾನವನು ಮಾನಸಿಕ ತೊಳಲಾಟಗಳಿಂದ ಬಿಡುಗಡೆಗೊಂಡು ನೆಮ್ಮದಿಯಿಂದಿರಲು ಇರುವ ಮಾರ್ಗವೇ ಪಾರಮಾರ್ಥ ಎಂದು ಪರಮಪೂಜ್ಯ ಜಗದ್ಗುರುಗಳು ಫೆಬ್ರವರಿ 11ರಂದು ಟಿ. ನರಸೀಪುರ ತಾಲ್ಲೂಕು ಚಿದರವಳ್ಳಿ–ಬೊಮ್ಮನಹಳ್ಳಿಯ ಶ್ರೀ ಸಿದ್ಧರಹಳ್ಳಿ ಪಾರಮಾರ್ಥ ಗವಿಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳ ನಿರಂಜನ ನಿರಾಭಾರಿ ಪಟ್ಟಾಧಿಕಾರ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಧಾರ್ಮಿಕ ಸಭೆಯ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು.

ಶ್ರೀಮಠವು ಪಾರಮಾರ್ಥ ಮಠವೆಂಬ ಹೆಸರಿನಿಂದ ಕೂಡಿದೆ. ನಿಜಗುಣ ಶಿವಯೋಗಿಗಳ ಷಟ್‌ದರ್ಶನದಲ್ಲಿ ಪರಮಾರ್ಥ ಒಂದಾಗಿದೆ. ಮಠಾಧಿಪತಿಗಳಾದವರು ಧಾರ್ಮಿಕ, ಆಧ್ಯಾತ್ಮಿಕ ಸಾಧನೆಯೊಂದಿಗೆ ಸಮಾಜಮುಖಿ ಕಾಯಕದಲ್ಲಿಯೂ ತೊಡಗಿಸಿಕೊಳ್ಳಬೇಕು. ಧರ್ಮದ ಹಾದಿಯಲ್ಲಿ ನಡೆಯಬೇಕು. ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಬಾಲ್ಯದಿಂದಲೂ ಸಂಸ್ಕಾರವಂತರು. ಚಿತ್ರದುರ್ಗ ಬೃಹನ್ಮಠದ ಜಗದ್ಗುರು ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳವರ ಸೇವೆಯನ್ನು ಮಾಡಿದವರು. ಅವರು ಈ ಮಠದ ಅಧ್ಯಕ್ಷರಾಗಿರುವುದು ಸಂತಸದ ಸಂಗತಿ. ಮಠವನ್ನು ಉತ್ತಮವಾಗಿ ಅಭಿವೃದ್ಧಿಪಡಿಸಿಕೊಂಡು ಮುನ್ನಡೆಯಲಿ ಎಂದು ಹಾರೈಸಿದರು.

ಶ್ರೀ ಆದಿಚುಂಚನಗಿರಿ ಮಠದ ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳು ಕರ್ನಾಟಕದ ಪ್ರತಿ ಗ್ರಾಮಗಳಲ್ಲೂ ಮಠಗಳು ಇರುವುದು ಕಂಡು ಬರುತ್ತದೆ. ಇದನ್ನು ಗಮನಿಸಿದಾಗ ನಮ್ಮ ಸಂಸ್ಕೃತಿ ಮತ್ತು ಸಂಪ್ರದಾಯ ಆಳವಾಗಿ ಬೇರೂರಿರುವುದಲ್ಲದೇ ಅತ್ಯಂತ ವೈಭವೋಪೇತವಾದುದು ಎಂದು ತಿಳಿದುಬರುತ್ತದೆ. ನಮ್ಮ ಸಂಸ್ಕೃತಿಯನ್ನು ವಿದೇಶಿಯರೂ ಕಂಡು ಗೌರವಿಸುತ್ತಾರೆ. ಇದೆಲ್ಲ ಬೆಳೆದು ಬರಲು ಕಾರಣ ಗುರು. ಗುರುವಿಲ್ಲದೇ ಸಾಧನೆ ಅಸಾಧ್ಯ ಎಂದು ತಿಳಿಸಿದರು.

ಬಿಜೆಪಿ ರಾಜ್ಯ ಉಪಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರರವರು ಮಠ ಪರಂಪರೆ ನಮ್ಮ ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗ. ಜನರಲ್ಲಿ ಸಂಸ್ಕೃತಿ ಮತ್ತು ಸಂಸ್ಕಾರ ಬೆಳೆಸುವಲ್ಲಿ ಮಠಗಳ ಕೊಡುಗೆ ಅಪಾರವಾದುದು. ಗುರುವಿನ ಮಹತ್ವವನ್ನು ಬಾಲ್ಯದಿಂದಲೇ ನಮಗೆ ತಿಳಿಸಲಾಗಿದೆ. ಯಾವಾಗಲೂ ಗುರುಗಳನ್ನು ಗೌರವಿಸುತ್ತಿರಬೇಕು. ನಾವು ಬೆಳೆದ ವಾತಾವರಣ ಮತ್ತು ಸಂಸ್ಕೃತಿ ನಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಹಾಯ ಮಾಡುತ್ತವೆ ಎಂದು ಹೇಳಿದರು.

ಮರಳೇಗವಿಮಠ, ಹೊಸಮಠ, ಹಲವಾರ ಮಠ, ದ್ಯಾವಾಪಟ್ಟಣ ಮೊದಲಾದ ಮಠಗಳ ಶ್ರೀಗಳು, ಕೆಐಆರ್‌ಡಿಎಲ್ ಅಧ್ಯಕ್ಷರಾದ ಶ್ರೀ ಎಂ. ರುದ್ರೇಶ್, ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ. ಅಪ್ಪಣ್ಣ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಎಂ.ಎನ್. ನಂದೀಶ್ ಹಂಚೆ, ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಶ್ರೀ ಕಾ.ಪು. ಸಿದ್ಧಲಿಂಗಸ್ವಾಮಿ, ಮೇಯರ್ ಶ್ರೀಮತಿ ಸುನಂದ ಪಾಲನೇತ್ರ, ಮುಡಾ ಆಯುಕ್ತರಾದ ಶ್ರೀ ಡಿ.ಬಿ. ನಟೇಶ್ ಮೊದಲಾದವರು ಉಪಸ್ಥಿತರಿದ್ದರು.

ಶ್ರೀ ನಿಶ್ಚಯ್ ಜೈನ್ ಪ್ರಾರ್ಥನೆ ಮಾಡಿದರು. ಶ್ರೀ ಮಹದೇವಪ್ಪ ಸ್ವಾಗತಿಸಿದರು. ಶ್ರೀ ಎಂ. ಜಗದೀಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀಮತಿ ಟಿ. ವಿದ್ಯಾಲಕ್ಷ್ಮಿ ಕಾರ್ಯಕ್ರಮ ನಿರೂಪಿಸಿದರು.

**ಭಾರತ ದೇಶ ಭವ್ಯ ಆಧ್ಯಾತ್ಮಿಕ ಪರಂಪರೆಯನ್ನು ಹೊಂದಿದೆ**

ಭಾರತ ದೇಶ ಭವ್ಯ ಆಧ್ಯಾತ್ಮಿಕ ಪರಂಪರೆಯನ್ನು ಹೊಂದಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಫೆಬ್ರವರಿ 15ರಂದು ಬೆಂಗಳೂರು ಗವಿಪುರಂನ ಶ್ರೀ ಗೋಸಾಯಿ ಮಹಾಸಂಸ್ಥಾನ ಮಠದಲ್ಲಿ ನಡೆದ ಸತ್ಸಂಗ ಕಾರ್ಯಕ್ರಮದಲ್ಲಿ ಇತ್ತೀಚೆಗೆ ಪಟ್ಟಾಭಿಷಿಕ್ತರಾದ ಶ್ರೀ ಮಂಜುನಾಥ ಭಾರತೀ ಸ್ವಾಮಿಗಳಿಗೆ ಶುಭ ಹಾರೈಸಿ ತಿಳಿಸಿದರು.

ಋಷಿಮುನಿಗಳು, ತಪಸ್ವಿಗಳು, ಸಾಧುಸಂತರು, ಶರಣರು, ದಾಸರು ಈ ದೇಶವನ್ನು ಆಧ್ಯಾತ್ಮಿಕ ಸಿಂಚನದಿಂದ ಸಮೃದ್ಧಗೊಳಿಸಿದ್ದಾರೆ. ಮನುಷ್ಯರು ಭೌತಿಕ–ಪಾರಮಾರ್ಥಿಕ ಎರಡನ್ನೂ ಸಮನ್ವಯಗೊಳಿಸಿಕೊಂಡು ಉತ್ತಮವಾದ ಬದುಕು ನಡೆಸುವುದು ಅಗತ್ಯ. ಗೋಸಾಯಿಮಠದ ನೂತನ ಶ್ರೀಗಳಾದ ಮಂಜುನಾಥ ಭಾರತೀ ಸ್ವಾಮಿಗಳು ವಿದ್ವಾಂಸರೂ, ಸರಳರೂ ಆಗಿದ್ದು, ಸಂಗೀತ ಕ್ಷೇತ್ರದಲ್ಲಿ ಉತ್ತಮ ರೀತಿಯ ಸಾಧನೆ ಮಾಡಿದ್ದಾರೆ. ಭಗವದ್ಗೀತೆಯನ್ನು ಶ್ರೋತೃಗಳಿಗೆ ಪ್ರಿಯವಾಗುವಂತೆ ಹಲವು ರಾಗಗಳಲ್ಲಿ ಪ್ರಸ್ತುತಪಡಿಸಿದ್ದಾರೆ. ನೂತನ ಶ್ರೀಗಳು ಭಕ್ತಾದಿಗಳು ಹಾಗೂ ಸಾರ್ವಜನಿಕರ ಸಹಾಯ–ಸಹಕಾರದೊಂದಿಗೆ ಶ್ರೀಮಠವನ್ನು ಸಮರ್ಥವಾಗಿ ಮುನ್ನಡೆಸಿಕೊಂಡು ಹೋಗಲೆಂದು ಶುಭ ಹಾರೈಸಿದರು.

ಗೋಸಾಯಿಮಠದ ಶ್ರೀ ಮಂಜುನಾಥ ಭಾರತೀ ಸ್ವಾಮಿಗಳು ಸಂತರು, ಸದಾ ಶಾಂತ ಸ್ವಭಾವದವರು. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಹೇಳುವಂತೆ, 'ಸತ್ಪುರುಷರಿಗೆ ಭಗವಂತನ ಕೃಪೆ ಸದಾ ಇರುತ್ತದೆ'. ಮನುಷ್ಯನು ಸುಖ ಬಂದಾಗ ಹಿಗ್ಗದೆ, ಕಷ್ಟ ಬಂದಾಗ ಕುಗ್ಗದೆ ಜೀವನವನ್ನು ಸರಿದೂಗಿಸಿಕೊಂಡು ಹೋಗಬೇಕು. ಶ್ರೀ ಸುತ್ತೂರು ಜಗದ್ಗುರುಗಳವರು ಆಗಮಿಸಿ, ಹರಸಿ, ಆಶೀರ್ವದಿಸಿದ್ದು ಅತೀವ ಸಂತೋಷವನ್ನು ಉಂಟುಮಾಡಿದೆ. ಶ್ರೀಗಳು ಸದಾ ಮಾರ್ಗದರ್ಶನ ಮಾಡುತ್ತಿರಬೇಕೆಂದು ಕೋರಿದರು.

ಮಾಜಿ ಸಚಿವರು ಹಾಗು ಶ್ರೀಮಠದ ಅಭಿವೃದ್ಧಿ ಸಮಿತಿಯ ಅಧ್ಯಕ್ಷರು ಆದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಗೋಸಾಯಿಮಠದ ಇತಿಹಾಸವನ್ನು ಸಂಕ್ಷಿಪ್ತವಾಗಿ ತಿಳಿಸಿ, ಮರಾಠ ಸಮಾಜ ಅಲ್ಪಸಂಖ್ಯೆಯ ಸಮುದಾಯವಾಗಿದ್ದು, ಎಲ್ಲರ ಸಹಕಾರ, ಪ್ರೋತ್ಸಾಹ ಅಗತ್ಯವಿದೆ. ಶ್ರೀ ಸುತ್ತೂರು ಮಠ ಧಾರ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ–ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಆದರ್ಶ ರೀತಿಯಲ್ಲಿ ಸೇವೆ ಸಲ್ಲಿಸುತ್ತಿದೆ. ಪರಮಪೂಜ್ಯ ಜಗದ್ಗುರುಗಳವರು ಇಂದು ಆಗಮಿಸಿ ನೂತನ ಶ್ರೀಗಳಿಗೆ ಶುಭ ಹಾರೈಸಿದುದು ನಮಗೆಲ್ಲ ಹೆಚ್ಚಿನ ಶಕ್ತಿ ತಂದಿದೆ ಎಂದು ತಿಳಿಸಿದರು.

ನೂತನ ಶ್ರೀಗಳನ್ನು ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಅಭಿನಂದಿಸಿದರು. ಕಾರ್ಯಕ್ರಮದಲ್ಲಿ ಕಾಶಿಯ ಶ್ರೀಗಳು, ದೀಕ್ಷಿತರು, ಮರಾಠ ಸಮಾಜದ ಸಂಘ–ಸಂಸ್ಥೆಗಳ ವಿವಿಧ ಪದಾಧಿಕಾರಿಗಳು ಹಾಗೂ ಗಣ್ಯರು ಪಾಲ್ಗೊಂಡಿದ್ದರು.

**ಇಡೀ ವಿಶ್ವವೇ ಭಾರತದತ್ತ ತಿರುಗಿ ನೋಡುತ್ತಿದೆ**

ಇಡಿ ವಿಶ್ವವೇ ಭಾರತದತ್ತ ತಿರುಗಿ ನೋಡುತ್ತಿದೆ ಎಂದು ಪರಮಪೂಜ್ಯ ಜಗದ್ಗುರುಗಳವರು ಹುಣಸೂರು ತಾಲ್ಲೂಕು ಕೊಳುವಿಗೆ ಗ್ರಾಮದಲ್ಲಿ ಫೆಬ್ರವರಿ 21ರಂದು ಜೀರ್ಣೋದ್ಧಾರಗೊಂಡ ಶ್ರೀ ರಾಮಲಿಂಗೇಶ್ವರಸ್ವಾಮಿ ದೇವಾಲಯ ಉದ್ಘಾಟನೆಯ ದಿವ್ಯ ಸಾನ್ನಿಧ್ಯವನ್ನು ವಹಿಸಿ ತಿಳಿಸಿದರು.

ಭಾರತ ದೇಶ ಆಧ್ಯಾತ್ಮಿಕವಾಗಿ ಸಂಪದ್ಭರಿತವಾಗಿದೆ. ಜಗತ್ತಿಗೆ ನಮ್ಮ ದೇಶ ಖಗೋಳ, ವಿಜ್ಞಾನ, ಗಣಿತ ಸೇರಿದಂತೆ ಇತರೆ ಎಲ್ಲ ಕ್ಷೇತ್ರಗಳಿಗೂ ವಿಶೇಷವಾದ ಕೊಡುಗೆಯನ್ನು ನೀಡಿದೆ. ಆಧ್ಯಾತ್ಮಿಕ ಸಂಪತ್ತು ಈ ದೇಶದ ಬಹು ದೊಡ್ಡ ಆಸ್ತಿಯಾಗಿದೆ. ಭಾರತದ ಪವಿತ್ರ ಗ್ರಂಥಗಳ ಸಂದೇಶಗಳಿಂದ ಪ್ರಭಾವಿತರಾಗಿ ವಿದೇಶಿಯರು ಇಲ್ಲಿನ ಸಂಸ್ಕೃತಿಯನ್ನು ಇಷ್ಟಪಡುತ್ತಾರೆ. ಭಾರತವು ದೇವಾಲಯಗಳ ಬೀಡು. ಜನರಲ್ಲಿ ಇಂದಿಗೂ ಭಕ್ತಿಭಾವನೆಗಳು ಉಳಿದಿರುವುದರಿಂದ ದೇವಾಲಯ ಜೀರ್ಣೋದ್ಧಾರದಂತಹ ಕಾರ್ಯಗಳು ನಡೆಯುತ್ತಿವೆ ಎಂದು ಹೇಳಿದರು.

ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಶ್ರೀ ಜಿ.ಡಿ. ಹರೀಶಗೌಡರವರು ಸಾವಿರಾರು ವರ್ಷಗಳ ಇತಿಹಾಸವಿರುವ ದೇವಾಲಯ ಜೀರ್ಣೋದ್ಧಾರಗೊಂಡಿರುವುದು ಸಂತಸದ ಸಂಗತಿ. ಇದು ಭಕ್ತರ ಬೀಡಾಗಲಿ. ದೇವಾಲಯಗಳಿಂದ ಮನುಕುಲದ ಏಳಿಗೆ ಸಾಧ್ಯ ಎಂದರು.

ಗಾವಡಗೆರೆ, ಮಾದಹಳ್ಳಿ ಮಠಗಳ ಶ್ರೀಗಳು, ಮಾಜಿ ಸಂಸದರಾದ ಶ್ರೀ ಸಿ.ಎಚ್. ವಿಜಯ್‌ಶಂಕರ್, ಶ್ರೀಮತಿ ಅರ್ಪಿತ ಸಿಂಹ, ಶ್ರೀ ಎಚ್.ಎನ್. ಪ್ರೇಮಕುಮಾರ್, ಶ್ರೀಮತಿ ರತ್ನಮ್ಮ ಪ್ರೇಮಕುಮಾರ್, ಶ್ರೀ ಎಚ್.ಪಿ. ಅಮರನಾಥ್, ಶ್ರೀ ಕಾನ್ಯ ಶಿವಮೂರ್ತಿ, ಶ್ರೀ ರಮೇಶ್‌ಕುಮಾರ್ ಮೊದಲಾದವರುಗಳು ಉಪಸ್ಥಿತರಿದ್ದರು. ಕೊಳುವಿಗೆ ಶಾಲಾ ಮಕ್ಕಳು ಪ್ರಾರ್ಥಿಸಿದರು. ಶ್ರೀ ಕೆ.ಪಿ. ದೇವರಾಜ್ ಸ್ವಾಗತಿಸಿದರು. ಶ್ರೀ ಮೇದೂರು ಮಹೇಶ್ ಕಾರ್ಯಕ್ರಮ ನಿರೂಪಿಸಿದರು.

**ಯುವಜನರ ಪರಿಣತಿಯ ವಿಕಾಸಕ್ಕಾಗಿ ಸ್ಟೆಪ್ ಸಂಸ್ಥೆಯ ಸ್ಥಾಪನೆ**

ಯುವಜನರ ಪರಿಣತಿಯ ವಿಕಾಸಕ್ಕಾಗಿ ಸ್ಟೆಪ್ ಸಂಸ್ಥೆಯನ್ನು ಸ್ಥಾಪನೆ ಮಾಡಲಾಯಿತು ಎಂದು ಪರಮಪೂಜ್ಯ ಜಗದ್ಗುರುಗಳು ಫೆಬ್ರವರಿ 19ರಂದು ಮೈಸೂರು ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಎಸ್‌ಜೆಸಿಇ–ಸ್ಟೆಪ್ ಸಂಸ್ಥೆ ಹಾಗೂ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಸಂಯುಕ್ತಾಶ್ರಯದಲ್ಲಿ ನಡೆದ ಮೈಸೂರಿನ ಪ್ರಥಮ ಚಿಪ್ ಡಿಸೈನ್ ಸೆಂಟರ್ ಪ್ರೊಕ್ಸೆಲರ್ ಕಂಪನಿಯ ವಿಎಲ್‌ಎಸ್‌ಐ ವಿನ್ಯಾಸ ಕೇಂದ್ರದ ಉದ್ಘಾಟನೆಯ ದಿವ್ಯ ಸಾನ್ನಿಧ್ಯವನ್ನು ವಹಿಸಿ ತಿಳಿಸಿದರು.

ನಮ್ಮ ದೇಶದಲ್ಲಿ ಅಸಂಖ್ಯಾತ ಪ್ರತಿಭಾವಂತರಿದ್ದಾರೆ. ಅವರಿಗೆ ಬೇಕಾದ ಅವಕಾಶಗಳನ್ನು ಕಲ್ಪಿಸಿಕೊಡಬೇಕಾದುದು ಅಷ್ಟೇ ಮುಖ್ಯವಾದುದು. ಯುವಪದವೀಧರರಿಗೆ ಅವರ ಬೌದ್ಧಿಕ ಅಂತಃಶಕ್ತಿಯನ್ನು ವಿಕಾಸಗೊಳಿಸಿಕೊಳ್ಳುವ ಹಂಬಲಕ್ಕೆ ಸ್ಟೆಪ್ ಬೆಂಬಲವಾಗಿ ನಿಂತಿದೆ. ಇದಕ್ಕೆ ಮೂಲಭೂತ ಸಹಕಾರವನ್ನು ಒದಗಿಸಬೇಕಾಗಿದ್ದು ಸರ್ಕಾರ ಮತ್ತು ಸಂಘಸಂಸ್ಥೆಗಳ ಜವಾಬ್ದಾರಿಯಾಗಿರುತ್ತದೆ. ಅದಕ್ಕೆ ಪೂರಕವಾಗಿ ಇಂತಹ ಕಾರ್ಯಗಳು ಪ್ರಾರಂಭವಾಗುತ್ತಿವೆ ಎಂದು ಹೇಳಿದರು.

ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಾದ ಡಾ. ಇ.ವಿ. ರಮಣ ರೆಡ್ಡಿಯವರು ಮೈಸೂರು ದೇಶದ ಪ್ರಮುಖ ನವ್ಯೋದ್ಯಮ ತಾಣವಾಗಿ ಹೊರಹೊಮ್ಮುತ್ತಿದೆ ಎಂದು ತಿಳಿಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಕೆಡಿಇಎಂ–ಲಹರಿ ಸಂಸ್ಥೆಯ ಸಿಇಓ ಶ್ರೀ ಸಂಜೀವ್ ಗುಪ್ತ, ಪ್ರೊಕ್ಸೆಲೆರಾ ಸಂಸ್ಥೆಯ ಸಿಇಓ ಶ್ರೀ ರವಿಶಂಕರ್‌ರಾವ್, ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕರಾದ ಡಾ. ಬಿ. ಸುರೇಶ್, ಶ್ರೀ ಅಜಿತ್ ಪೈ ಮಾತನಾಡಿದರು. ಕು. ಕೃತಿ ಶಿವಕುಮಾರ್ ಪ್ರಾರ್ಥಿಸಿದರು. ಎಸ್‌ಜೆಸಿಇ–ಸ್ಟೆಪ್‌ನ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಶಿವಶಂಕರ್ ಸ್ವಾಗತಿಸಿ, ವಂದಿಸಿದರು.

### ಸೈನ್ಸ್ ಆನ್ ವೀಲ್ಸ್ ಕಾರ್ಯಕ್ರಮಕ್ಕೆ ಚಾಲನೆ

ಮೈಸೂರು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯು ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಹಯೋಗದಲ್ಲಿ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ವಿಜ್ಞಾನದ ಬಗ್ಗೆ ಆಸಕ್ತಿ ಮೂಡಿಸಲು ರಾಷ್ಟ್ರೀಯ ವಿಜ್ಞಾನ ಸಪ್ತಾಹದ ಪ್ರಯುಕ್ತ ಏರ್ಪಡಿಸಿರುವ ಸೈನ್ಸ್ ಆನ್ ವೀಲ್ಸ್ ಕಾರ್ಯಕ್ರಮಕ್ಕೆ ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಫೆಬ್ರವರಿ 21ರಂದು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಚಾಲನೆ ನೀಡಲಾಯಿತು.

ಶಾಸಕರಾದ ಶ್ರೀಮತಿ ರೂಪಾಲಿ ನಾಯ್ಕ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿಗಳಾದ ಶ್ರೀ ಎಸ್.ಪಿ. ಮಂಜುನಾಥ್, ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ, ಜೆಎಸ್‌ಎಸ್ ಎಹೆಚ್‌ಇಆರ್‌ನ ಸಮಕುಲಾಧಿಪತಿಗಳಾದ ಡಾ. ಬಿ. ಸುರೇಶ್, ಕುಲಪತಿಗಳಾದ ಡಾ. ಸುರೀಂದರ್ ಸಿಂಗ್, ಕುಲಸಚಿವರಾದ ಡಾ. ಬಿ. ಮಂಜುನಾಥ್, ಸಂಶೋಧನಾ ವಿಭಾಗದ ನಿರ್ದೇಶಕರಾದ ಡಾ. ಪ್ರಶಾಂತ್ ವಿಶ್ವನಾಥ್ ಮೊದಲಾದವರು ಉಪಸ್ಥಿತರಿದ್ದರು.

**ಸನ್ಯಾಸ ಸ್ವೀಕಾರ ಪೂರ್ವಜನ್ಮದ ಪುಣ್ಯ**

ಸನ್ಯಾಸ ಸ್ವೀಕಾರ ಪೂರ್ವಜನ್ಮದ ಪುಣ್ಯವೆಂದು ಭಾವಿಸಬೇಕೆಂದು ಪರಮಪೂಜ್ಯ ಜಗದ್ಗುರುಗಳವರು ಸುತ್ತೂರು ಶ್ರೀಕ್ಷೇತ್ರದಲ್ಲಿ ಫೆಬ್ರವರಿ 26ರಂದು ಶ್ರೀ ಸುತ್ತೂರು ಶಾಖಾಮಠವಾದ ಕಬ್ಬಹಳ್ಳಿ ಶ್ರೀ ಪಟ್ಟದಮಠದ ನೂತನ ಶ್ರೀಗಳ ಪಟ್ಟಾಧಿಕಾರ ಮಹೋತ್ಸವದ ಧಾರ್ಮಿಕ ಸಭೆಯ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು.

ಸ್ವಾಮಿಗಳ ಬದುಕು ಗರಗಸದಂತೆ. ಅವರ ನಡೆ ಅಲಗಿನ ಮೇಲಿನ ನಡೆಯಂತೆ ಅತ್ಯಂತ ಕಠಿಣವಾದುದು. ಸಮಾಜಕ್ಕೆ ಸಮರ್ಪಣಾಭಾವದಿಂದ ಸಮರ್ಪಿಸಿಕೊಳ್ಳಬೇಕು. ಲೌಕಿಕ ಬದುಕನ್ನು ತ್ಯಾಗ ಮಾಡಬೇಕು. ಧಾರ್ಮಿಕತೆಗೆ ಹೊಂದಿಕೊಂಡು ಜವಾಬ್ದಾರಿಯುತವಾಗಿರಬೇಕು. ಆತ್ಮಸಾಕ್ಷಾತ್ಕಾರಕ್ಕಾಗಿ ಮನಸ್ಸು ತುಡಿಯುತ್ತಿರಬೇಕು. ಪ್ರತಿಯೊಂದು ಧರ್ಮದಲ್ಲಿಯೂ ಆಚರಣೆಯ ರೀತಿನೀತಿಗಳು ಬೇರೆಯಾದರೂ ಅಂತಿಮ ಸತ್ಯ ಒಂದೇ ಆಗಿರುತ್ತದೆ. ಆಚಾರಸಂಪನ್ನರ ಬದುಕು ಸದೃಢವಾಗಿರುತ್ತದೆ. ಶ್ರದ್ಧೆ ಹಾಗೂ ಭಕ್ತಿಗಳಿಂದ ಶಾಂತಿ, ನೆಮ್ಮದಿ ಲಭಿಸುತ್ತದೆ. ಧಾರ್ಮಿಕ ಮತ್ತು ಆಧ್ಯಾತ್ಮಿಕ ಮಾರ್ಗದಲ್ಲಿ ಮುನ್ನಡೆಯಲು ಮಠಮಾನ್ಯಗಳು ಮಾರ್ಗದರ್ಶನ ನೀಡುತ್ತಿರುತ್ತವೆ ಎಂದು ನುಡಿದರು.

ಕಬ್ಬಹಳ್ಳಿ ಶ್ರೀ ಪಟ್ಟದ ಮಠದ ಶ್ರೀ ಚನ್ನಬಸವ ಸ್ವಾಮಿಗಳು 1940ರ ದಶಕದಲ್ಲಿ ಅವರ 8ನೇ ವಯಸ್ಸಿನಲ್ಲಿ ಪಟ್ಟಾಧಿಕಾರ ವಹಿಸಿಕೊಂಡುದು ಮತ್ತು ಅವರಿಗೆ ಸುತ್ತೂರು ಶ್ರೀಮಠದ ಮಂತ್ರಮಹರ್ಷಿಗಳು ಮತ್ತು ರಾಜೇಂದ್ರ ಶ್ರೀಗಳವರು ನೀಡಿದ ಮಾರ್ಗದರ್ಶನ ಹಾಗೂ ಸಹಕಾರವನ್ನು ಸ್ಮರಿಸಿಕೊಂಡರು.

ಪ್ರಾತಃಕಾಲದಲ್ಲಿ ಗುಂಡ್ಲುಪೇಟೆ ತಾಲ್ಲೂಕು ಕಬ್ಬಹಳ್ಳಿಯ ಶ್ರೀ ಕೆ.ವಿ. ಮಹದೇವಸ್ವಾಮಿ ಮತ್ತು ಶ್ರೀಮತಿ ಸುಶೀಲಮ್ಮನವರ ಸುಪುತ್ರರಾದ ಶ್ರೀ ಕೆ.ಎಂ. ಮಹೇಶ್ ಎಂಬ ವಟುವಿಗೆ ವಿಧ್ಯುಕ್ತವಾಗಿ ಷಟ್‌ಸ್ಥಲ ಬ್ರಹ್ಮೋಪದೇಶಪೂರ್ವಕವಾಗಿ ಷ.ಬ್ರ. ಶ್ರೀ ಗುರುಸಿದ್ಧಸ್ವಾಮಿಗಳು ಎಂದು ಅಭಿದಾನವನ್ನಿತ್ತು ಪಟ್ಟಾಧಿಕಾರವನ್ನು ನೆರವೇರಿಸಲಾಯಿತು. ಪಟ್ಟಾಧಿಕಾರ ಸ್ವೀಕರಿಸಿದ ಶ್ರೀ ಗುರುಸಿದ್ಧ ಸ್ವಾಮಿಗಳು ಮಾತನಾಡಿ, ಸುತ್ತೂರು ಶ್ರೀಗಳ ಕಾಯಕದ ಮಹತ್ವವನ್ನು ಅರಿತುಕೊಂಡಿರುವುದಾಗಿ ತಿಳಿಸಿದರು.

ಮಾದಹಳ್ಳಿ ಉಕ್ಕಿನಕಂತೆ ಮಠದ ಶ್ರೀ ಸಾಂಬಸದಾಶಿವಸ್ವಾಮಿಗಳವರು ಪಟ್ಟಾಧಿಕಾರದ ಸಂಪುಟ ವಾಚಿಸಿದರು. ಕಬ್ಬಹಳ್ಳಿ, ಹರವೆ, ಪಡುವಲ ಮಠದ ಶ್ರೀಗಳು ಮಾತನಾಡಿದರು.

ಶಾಸಕರಾದ ಶ್ರೀ ಸಿ.ಎಸ್. ನಿರಂಜನ್‌ಕುಮಾರ್, ಕಬ್ಬಹಳ್ಳಿಯ ಶ್ರೀಗಳು ಸುತ್ತಮುತ್ತಲ ಗ್ರಾಮಗಳ ಏಳಿಗೆಗಾಗಿ ಶ್ರಮಿಸಿದ್ದಾರೆ. ಅಂಕಪ್ರತಿಷ್ಠಾಪನೆ ಮಾಡಿಸುವಲ್ಲಿ ಪೂಜ್ಯರು

ಸಿದ್ಧಹಸ್ತರು ಎಂದರು. ಶ್ರೀ ಹೆಚ್.ಎಂ ಗಣೇಶ್‌ಪ್ರಸಾದ್‌ರವರು, ಗೃಹಪ್ರವೇಶ, ವಿವಾಹ ಮೊದಲಾದ ಶುಭ ಕಾರ್ಯಗಳನ್ನು ನಡೆಸಿಕೊಡುವ ಮೂಲಕ ಕಬ್ಬಳ್ಳಿಯ ಶ್ರೀಗಳು ಜನಮಾನಸಕ್ಕೆ ತೀರ ಹತ್ತಿರವಾಗಿದ್ದಾರೆ ಎಂದರು. ಶ್ರೀ ಕೆ.ಎಸ್. ಮಹೇಶ್‌ರವರು ಗ್ರಾಮದಲ್ಲಿ ನಡೆಯಬೇಕಾಗಿದ್ದ ಕಾರ್ಯಕ್ರಮವನ್ನು ಸುತ್ತೂರು ಶ್ರೀಮಠದಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಸಿಕೊಟ್ಟಿದ್ದಕ್ಕಾಗಿ ಪೂಜ್ಯರಿಗೆ ಗ್ರಾಮಸ್ಥರ ಪರವಾಗಿ ಕೃತಜ್ಞತೆ ಸಲ್ಲಿಸಿದರು.

ಕಬ್ಬಹಳ್ಳಿಯ ಶ್ರೀ ಬಸವರಾಜಸ್ವಾಮಿಯವರು ಸಮಾಜದ ಲೋಪದೋಷಗಳನ್ನು ತಿದ್ದುವಲ್ಲಿ, ಶೈಕ್ಷಣಿಕ ಅರಿವು ಮೂಡಿಸುವಲ್ಲಿ ಮಠಗಳ ಪಾತ್ರ ಮಹತ್ತರವಾದುದೆಂದರು. ತುಮಕೂರಿನ ಉದ್ಯಮಿಗಳಾದ ಶ್ರೀ ಶೇಖರ್‌ರವರು, ಕಬ್ಬಹಳ್ಳಿ ಶ್ರೀ ವೃಷಭೇಂದ್ರ ಮೊದಲಾದವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಹೊಸಮಠ, ಪಡುಗೂರು, ಮೂಡುಗೂರು, ಕುದೇರುಮಠ, ದಂಡಿಕೆರೆ, ಆಲಹಳ್ಳಿ, ನೀಲಕಂಠಸ್ವಾಮಿಮಠ, ಗೋಪಾಲಪುರ, ಚನ್ನಪಟ್ಟಣ, ಶಿರಮಳ್ಳಿ, ಮೊದಲಾದ ಮಠಗಳ ಶ್ರೀಗಳು ಹಾಗೂ ಹರಗುರುಚರಮೂರ್ತಿಗಳು ಉಪಸ್ಥಿತರಿದ್ದರು. ಕಬ್ಬಹಳ್ಳಿ ಹಾಗೂ ಅಕ್ಕಪಕ್ಕದ ಗ್ರಾಮಗಳ ಮುಖಂಡರು ಹಾಗೂ ಭಕ್ತಾದಿಗಳು ಭಾಗವಹಿಸಿದ್ದರು.

**ಸಾಮಾನ್ಯ ನಾಗರಿಕರಿಗೂ ವಿಜ್ಞಾನದ ಅರಿವು ಅವಶ್ಯಕ**

ಸಾಮಾನ್ಯ ನಾಗರಿಕರಿಗೂ ವಿಜ್ಞಾನದ ಅರಿವು ಅವಶ್ಯಕವೆಂದು ಪರಮಪೂಜ್ಯ ಜಗದ್ಗುರುಗಳವರು ಮೈಸೂರು ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದಲ್ಲಿ ಫೆಬ್ರವರಿ 25ರಂದು ರಾಷ್ಟ್ರೀಯ ಮಟ್ಟದ ಸೈನ್ಸ್–ಟೆಕ್ ಫೆಸ್ಟ್ 2.0 ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ತಿಳಿಸಿದರು.

ವಿಜ್ಞಾನ ಕೇವಲ ವಿಜ್ಞಾನಿಗಳಿಗೆ ಸೀಮಿತವಾಗಬಾರದು. ಎಲ್ಲರಿಗೂ ಅದರ ಅರಿವು ಇರಬೇಕು. ಸಂಶೋಧನೆಗಳು ನಿರಂತರವಾಗಿ ನಡೆಯುತ್ತಿರಬೇಕು. ಹಿಂದೆ ರೈತರು ಸೂರ್ಯ–ಚಂದ್ರರ ಚಲನೆ ನೋಡಿ ಸಮಯ ತಿಳಿಯುತ್ತಿದ್ದರು. ಇದು ಸಹ ವೈಜ್ಞಾನಿಕ ಚಿಂತನೆಯೇ ಆಗಿದೆ. ವಿಜ್ಞಾನ ಮತ್ತು ಧರ್ಮ ಎರಡು ಬೆಸೆದುಕೊಂಡಾಗ ಸಮನ್ವಯತೆ ಕಂಡುಬರುತ್ತದೆ. ಎರಡರಲ್ಲೂ ಸಮನ್ವಯತೆ ಇಲ್ಲದಿದ್ದಾಗ ಸಂಘರ್ಷ ಉಂಟಾಗುತ್ತದೆ ಎಂದರು.

ಇಂಫಾಲ್‌ನ ಕೇಂದ್ರೀಯ ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಎಸ್. ಅಯ್ಯಪ್ಪನ್‌ರವರು ಜ್ಞಾನ ಮತ್ತು ವಿಜ್ಞಾನ ಇಂದು ಅಗಾಧವಾಗಿ ಬೆಳೆದಿದೆ. ಇದರ ಬಗ್ಗೆ ಉಪನ್ಯಾಸಕರು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಬೇಕು. ವೈಜ್ಞಾನಿಕ ಮನೋಭಾವದ ಸಮಾಜ ನಿರ್ಮಾಣವಾಗಬೇಕು. ಇದಕ್ಕಾಗಿ ಎಲ್ಲರೂ

ಕಾರ್ಯಪ್ರವೃತ್ತರಾಗಬೇಕು. ಪ್ರತಿಯೊಬ್ಬರು ವೈಚಾರಿಕ ಮತ್ತು ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಡಾ. ಸಿ.ಜಿ. ಬೆಟಸೂರಮಠ, ಡಾ. ಎಸ್.ಎ. ಧನರಾಜ್ ಮಾತನಾಡಿದರು. ವಿಟಿಯುನ ಪ್ರೊ. ರಂಗಸ್ವಾಮಿ ಉಪಸ್ಥಿತರಿದ್ದರು. ಡಾ. ಪಿ. ಮಲ್ಲು ಸ್ವಾಗತಿಸಿದರು. ಡಾ. ಹೆಚ್. ಹೊನ್ನೇಗೌಡ ಅತಿಥಿಗಳನ್ನು ಪರಿಚಯಿಸಿದರು. ಡಾ. ಮನೋಜ್‌ಕುಮಾರ್ ವಂದಿಸಿದರು.

**ಯಕ್ಷಗಾನ ಒಂದು ಅದ್ಭುತವಾದ ಕಾವ್ಯ**

ಯಕ್ಷಗಾನ ಒಂದು ಅದ್ಭುತವಾದ ಕಾವ್ಯ ಎಂದು ರಂಗಾಯಣದ ನಿರ್ದೇಶಕರಾದ ಡಾ. ಅಡ್ಡಂಡ ಕಾರ್ಯಪ್ಪನವರು ಫೆಬ್ರವರಿ 26ರಂದು ಮೈಸೂರಿನ ಕಲಾಮಂದಿರದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಕರ್ನಾಟಕ ಯಕ್ಷಗಾನ ಅಕಾಡೆಮಿ ಮತ್ತು ಕನ್ನಡ ಸಾಹಿತ್ಯ ಕಲಾಕೂಟಗಳ ಸಹಯೋಗದಲ್ಲಿ ನಡೆದ ಯಕ್ಷ ಸಂಭ್ರಮ 2022 ಕಾರ್ಯಕ್ರಮದಲ್ಲಿ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್‌ರವರ ಯಕ್ಷಗಾನ ಕವಿಗಳ ಚಿತ್ರಕಾವ್ಯ ಮತ್ತು ಶ್ರೀ ಚಿಕ್ಕಚೌಡಯ್ಯ ನಾಯ್ಕ್‌ರವರ ಮೂಡಲಪಾಯ ಯಕ್ಷಗಾನ ಪ್ರಸಂಗ ಕೃತಿಗಳನ್ನು ಬಿಡುಗಡೆಗೊಳಿಸಿ ತಿಳಿಸಿದರು.

ಯಕ್ಷಗಾನ ಅಕಾಡೆಮಿ ಅಧ್ಯಕ್ಷರಾದ ಡಾ. ಜಿ.ಎಲ್. ಹೆಗಡೆ ಕನ್ನಡ ಸಂಸ್ಕೃತಿ ಉಳಿಯುವಲ್ಲಿ ಯಕ್ಷಗಾನದ ಪಾತ್ರ ಬಹಳ ಮಹತ್ವದ್ದು. ಯಕ್ಷಗಾನದ ಪ್ರಕಾರಗಳಾದ ಮೂಡಲಪಾಯ ಮತ್ತು ಪಡುವಲಪಾಯ ಬೇರೆ ಅಲ್ಲ. ಇದರ ಕುರಿತು ವಿಶ್ವಕೋಶವನ್ನು ರಚಿಸಲಾಗುತ್ತಿದೆ ಎಂದು ಹೇಳಿದರು.

ಡಾ. ಜಿ.ಎಸ್. ಭಟ್ಟ ಮಾತನಾಡಿದರು. ಶ್ರೀ ದಿವಾಕರ ಹೆಗಡೆ ಕೃತಿ ಪರಿಚಯಿಸಿದರು. ಶ್ರೀ ಹೆಚ್. ಚನ್ನಪ್ಪ, ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, ಶ್ರೀ ಚಿಕ್ಕಚೌಡಯ್ಯ ನಾಯ್ಕ, ಶ್ರೀಮತಿ ಕೆ. ಗೌರಿ, ಶ್ರೀ ಶ್ರೀನಿವಾಸ ಸಾಸ್ತಾನ, ಶ್ರೀ ಎಂ. ಚಂದ್ರಶೇಖರ್ ಮೊದಲಾದವರು ಉಪಸ್ಥಿತರಿದ್ದರು. ಶ್ರೀ ಜಗದೀಶ್ ಹೆಬ್ಬಾರ್ ಕಾರಿಜ ಕಾರ್ಯಕ್ರಮ ನಿರೂಪಿಸಿದರು.

□

# ಪ್ರಸಾದ



## ಕೃತಿ-ಸ್ವೀಕೃತಿ

**ಬಾಬಾ ಸಹೇಬ ಮತ್ತು....**
**(ಮಕ್ಕಳ ಕತೆಗಳು)**
ನಾಡೋಜ ಡಾ. ಕಮಲಾಹಂಪನಾ
ಪ್ರ.: ಸಪ್ನಬುಕ್ ಹೌಸ್ ಪ್ರೈ.ಲಿ.
ಗಾಂಧಿನಗರ, ಬೆಂಗಳೂರು
ಪು. 96, ಬೆಲೆ: 100/-

**ಹೀಗೆ ನಮ್ಮ ಹಂಪನಾ**
ಎಸ್.ಪಿ. ಪದ್ಮಪ್ರಸಾದ್
(ಕಾವ್ಯಜೀವಿ)
ಪ್ರ.: ಸಪ್ನಬುಕ್ ಹೌಸ್ ಪ್ರೈ.ಲಿ.
ಗಾಂಧಿನಗರ, ಬೆಂಗಳೂರು
ಪು. 131, ಬೆಲೆ: 110/-

**ಚೆನ್ನಬಸವಣ್ಣನವರ ವಚನಸುಧೆ**
ಡಾ. ಸಂಗಮೇಶ ಸವದತ್ತಿ ಮಠ
ಪ್ರ.: ಶ್ರೀ ಉಳವಿ ಬಸವೇಶ್ವರ
ಧರ್ಮಪಂಡ ಸಂಸ್ಥೆ, ಧಾರವಾಡ
ಪು. 78, ಬೆಲೆ: 25/-

**ವಚನ ಸಮೃದ್ಧಿ (ಆಧುನಿಕ ವಚನಗಳ ಸಂಕಲನ)**
ಎಂ.ಬಿ. ಸಂತೋಷ್
ಪ್ರ.: ಡಿ.ವಿ. ಪಬ್ಲಿಕೇಷನ್ಸ್
ರಾಮಕೃಷ್ಣನಗರ, ಮೈಸೂರು
ಪು. 252, ಬೆಲೆ: 300/-

**ಸಾವಿತ್ರಿಬಾಯಿ ಬಾಪುಲೆ (ಕಾದಂಬರಿ)**
ಡಾ. ಸರಜೂ ಕಾಟ್ಕರ್
ಪ್ರ.: ಯಾಜಿ ಪ್ರಕಾಶನ, ಪ್ರಕಾಶ ನಗರ
ಹೊಸಪಟೆ, ಬಳ್ಳಾರಿ ಜಿಲ್ಲೆ
ಪು. 152. ಬೆಲೆ: 150/-

**ದಲಿತ ಸಾಹಿತ್ಯದ ಸೌಂದರ್ಯಪ್ರಜ್ಞೆ**
ಡಾ. ಶರಣಕುಮಾರ್ ಲಿಂಬಾಳೆ
ಪ್ರ.: ಯಾಜಿ ಪ್ರಕಾಶನ, ಪ್ರಕಾಶ ನಗರ
ಹೊಸಪಟೆ, ಬಳ್ಳಾರಿ ಜಿಲ್ಲೆ
ಪು. 176. ಬೆಲೆ: 160/-

**ಜಗದ್ವಂದ್ಯ ಭಾರತಂ (ಕಾದಂಬರಿ)**
ಡಾ. ರಾಜಶೇಖರ್ ಮಠಪರಿ (ರಾಗಂ)
ಪ್ರ.: ಯಾಜಿ ಪ್ರಕಾಶನ, ಪ್ರಕಾಶ ನಗರ
ಹೊಸಪಟೆ, ಬಳ್ಳಾರಿ ಜಿಲ್ಲೆ
ಪು. 164. ಬೆಲೆ: 180/-

**ಇನ್ನಷ್ಟು ಹೇಳದೆ ಉಳಿದದ್ದು**
**(ಕವನಗಳು–ಹವನಗಳು)**
ಡಾ. ಬನ್ನಂಜೆ ಗೋವಿಂದಾಚಾರ್ಯ
ಪ್ರ.: ಯಾಜಿ ಪ್ರಕಾಶನ, ಪ್ರಕಾಶ ನಗರ
ಹೊಸಪೇಟೆ, ಬಳ್ಳಾರಿ ಜಿಲ್ಲೆ
ಪು. 136. ಬೆಲೆ: 120/-

**ಬುದ್ಧನ ರಾಟಿ**
**(ಮರಾಠಿ: ಉತ್ತಮ ಕಾಂಬಳೆ)**
ಮರಾಠಿ: ಉತ್ತಮ ಕಾಂಬಳೆ
ಕನ್ನಡಕ್ಕೆ: ಚಂದ್ರಕಾಂತ ಪೋಕಳೆ
ಪ್ರ.: ಯಾಜಿ ಪ್ರಕಾಶನ, ಪ್ರಕಾಶ ನಗರ
ಹೊಸಪೇಟೆ, ಬಳ್ಳಾರಿ ಜಿಲ್ಲೆ
ಪು. 90. ಬೆಲೆ: 90/-

**ವಂದೇಗುರು ಪರಂಪರಾಮ್**
**ಪೂರ್ಣತೆಯ ಪಥದರ್ಶಿ**
ಡಾ. ಗುರುರಾಜ ಪೋಶೆಟ್ಟಿ
ಪ್ರ.: ಪ್ರಣವ ಮೀಡಿಯಾ ಹೌಸ್
ಅವಲಹಳ್ಳಿ, ಬೆಂಗಳೂರು
ಪು. 188. ಬೆಲೆ: 180/-

**ಅಭಿಜಾತ**
ಪ್ರೊ. ಡಿ.ವಿ. ಪರಮಶಿವಮೂರ್ತಿ
ಪ್ರ.: ಪ್ರಿಯದರ್ಶಿನಿ
ಹಂಪಿನಗರ, ಬೆಂಗಳೂರು
ಪು. 336, ಬೆಲೆ: 300/-

**ಸಂತ ರವಿದಾಸ**
ಡಾ. ತಿಪ್ಪೇಸ್ವಾಮಿ
ಪ್ರ.: ಶ್ರೀಮತಿ ಗಂಗಮ್ಮ ಸುರೇಶ್ ಬಂಢಾರಿ, ರವಿದಾಸ ಪ್ರಕಾಶನ
ಚೈತನ್ಯನಗರ, ಧಾರವಾಡ
ಪು. 88, ಬೆಲೆ: 100/-

**ದಕ್ಷಿಣೆ (ಲಲಿತ ಪ್ರಬಂಧಗಳ ವಿಡಂಬನೆಗಳ ಮತ್ತು ಚಿಂತನಗಳ ಸಂಗ್ರಹ)**
ಸಾಹಿತ್ಯ ವಾಚಸ್ಪತಿ ದ್ವಿವಾಗೀಶ
ಡಾ. ತಿಪ್ಪೇಸ್ವಾಮಿ
ಪ್ರ.: ದಕ್ಷಿಣಮೂರ್ತಿ ಪ್ರಕಾಶನ
ಕುವೆಂಪುನಗರ, ಮೈಸೂರು
ಪು. 164, ಬೆಲೆ: 165/-

**ಸುವರ್ಣಮುಖಿ**
**(ಸಿದ್ಧರ ಬೆಟ್ಟದ ಆಸುಪಾಸಿನ ಅಧ್ಯಯನ)**
ಡಾ. ಸಿದ್ಧಗಂಗಯ್ಯ ಹೊಲತಾಳು
ಪ್ರ.: ಸ್ಟೂಡೆಂಟ್ ಬುಕ್ ಕಂಪೆನಿ
ತುಮಕೂರು
ಪು. 464, ಬೆಲೆ: 400/-

**ಸಂಸ್ಕೃತಿ ಸಾಹಿತ್ಯ ಭಾಷಣ**
ಜಿ.ಎಸ್. ಪರಶಿವಮೂರ್ತಿ
ಪ್ರ.: ಸಂವಹನ ಪ್ರಕಾಶನ
ಶಿವರಾಂಪೇಟೆ, ಮೈಸೂರು
ಪು. 192, ಬೆಲೆ: 180/-

**ಶ್ರೀ ಲಲ್ಲಾ ತ್ರಿಪುರ ಸುಂದರಿ ವಿಲಾಸ**
ಕನ್ನಡಕ್ಕೆ : ಪ್ರೊ. ಎ.ಕೆ. ಕಮತೆ
ಪ್ರ.: ಗುರು ಓಂ ಕ್ರಿಯೇಷನ್ಸ್
ನ್ಯೂ ದೆಹಲಿ
ಪು. 280, ಬೆಲೆ: 250/-

**ಕನ್ನಡ ಚಾರುದತ್ತಮ್**
ಡಾ. ಕೆ. ಲೀಲಾ ಪ್ರಕಾಶ್
ಪ್ರ.: ಕೃಷ್ಣಮೂರ್ತಿ ರಿಸರ್ಚ್ ಫೌಂಡೇಷನ್, ಕೃಷ್ಣಮೂರ್ತಿಪುರಂ
ಮೈಸೂರು
ಪು. 150, ಬೆಲೆ: 130/-

**ತತ್ವಾನುಸಂಧಾನಸಾರ**
ಪ್ರೊ. ಎ.ಕೆ. ಕಮತೆ
ಪ್ರ.: ವರದಾ ಪ್ರಕಾಶನ
ಶ್ರೀನಗರ, ಬೆಳಗಾವಿ
ಪು. 172, ಬೆಲೆ: 160/-

---

## ಲೇಖಕರ ವಿಳಾಸ

**ಡಾ. ಗೊ.ರು. ಚನ್ನಬಸಪ್ಪ**
# 406, 'ಪ್ರಣಾಮ'
3ನೇ ಕ್ರಾಸ್, 'ಎಫ್' ರಸ್ತೆ
ಐಡಿಯಲ್ ಹೋಮ್ಸ್ ಟೌನ್‌ಷಿಪ್
2ನೆಯ ಹಂತ, ರಾಜರಾಜೇಶ್ವರಿನಗರ
ಬೆಂಗಳೂರು 560098

**ಡಾ. ಎಂ.ಎನ್. ಗಿರಿಜಾಪತಿ**
ಸಹಾಯಕ ಪ್ರಾಧ್ಯಾಪಕರು
ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು
ಗುಂಡ್ಲುಪೇಟೆ
ಚಾಮರಾಜನಗರ ಜಿಲ್ಲೆ
ಮೊ: 9844582238

**ಡಾ. ಸೀ.ಚ. ಯತೀಶ್ವರ**
ಕನ್ನಡ ಪ್ರಾಧ್ಯಾಪಕರು
ಎ.ವಿ.ಕೆ. ಮಹಿಳಾ ಕಾಲೇಜು
ಹಾಸನ
ಮೊ: 9448867043

**ವೆಂಕಟೇಶ ಕೆ. ಜನಾದ್ರಿ, ಕನಕಗಿರಿ**
ಸಹಾಯಕ ಲೆಕ್ಕಾಧಿಕಾರಿ
ಈ.ಕ.ರ.ಸಾ.ಸಂಸ್ಥೆ
ಕೇಂದ್ರ ಕಛೇರಿ
ಕಲಬುರ್ಗಿ 585102
ಮೊ: 9945330492



ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜಿನ ವಿಶಿಖಾನುಪ್ರವೇಶ ಪದವೀಧರರ ದಿನಾಚರಣೆ. ಡಾ. ಜಯಪ್ರಕಾಶ ನಾರಾಯಣ್, ಶ್ರೀಮತಿ ಮೀನಾ ಪಾಟೀಲ್, ಡಾ. ಶರಣ್ ಎಸ್. ಪಾಟೀಲ್, ಡಾ. ಸಿ.ಜಿ. ಬೆಟಸೂರಮಠ, ಶ್ರೀ ಆರ್. ಮಹೇಶ್, ಡಾ. ಸರ್ಬೇಶ್ವರಕರ್‌ರವರುಗಳೊಂದಿಗೆ ನೂತನ ಪದವೀಧರರು (26 ಡಿಸೆಂಬರ್ 2021)



ಸುತ್ತೂರು ಶ್ರೀಕ್ಷೇತ್ರದಲ್ಲಿ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ 1062ನೆಯ ಜಯಂತಿ ಮಹೋತ್ಸವದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಸಿದ್ಧಾಂತಿ ಡಾ. ಕೆ. ಜಿ. ಪುಟ್ಟಹೊನ್ನಯ್ಯನವರು ಸಿದ್ಧಪಡಿಸಿ ಭಾರತೀಯ ಜ್ಯೋತಿರ್ವಿಜ್ಞಾನ ಸಂಶೋಧನಾ ಕೇಂದ್ರದಿಂದ ಪ್ರಕಟಿಸಿರುವ ಶ್ರೀ ಶುಭಕೃತು ಸಂವತ್ಸರದ 'ಶ್ರೀ ಸುತ್ತೂರು ಶಿವರಾತ್ರೀಶ್ವರ ಪಂಚಾಂಗ'ವನ್ನು ಬಿಡುಗಡೆಗೊಳಿಸಲಾಯಿತು. ಚಿತ್ರದಲ್ಲಿ ಶ್ರೀ ಟಿ.ಎಸ್. ಲೋಕೇಶ್, ಶ್ರೀ ನಂ. ಸಿದ್ದಪ್ಪ, ಶ್ರೀ ಎಸ್. ಶಿವಕುಮಾರಸ್ವಾಮಿ, ಶ್ರೀ ಎಸ್.ಪಿ. ಮಂಜುನಾಥ್, ಶ್ರೀ ಜಿ.ಎನ್. ನಂಜುಂಡಸ್ವಾಮಿ, ವಾಟಾಳು ಶ್ರೀಗಳು, ಚುಂಚನಹಳ್ಳಿ ಶ್ರೀಗಳು, ಪಂಚಾಂಗ ಕರ್ತೃಗಳು ಹಾಗೂ ಪ್ರಕಾಶಕರಾದ ಡಾ. ಕೆ.ಜಿ. ಪುಟ್ಟಹೊನ್ನಯ್ಯ, ಶ್ರೀಮತಿ ಪರಿಮಳ ನಾಗಪ್ಪ, ಶ್ರೀ ಎ.ಆರ್. ಕೃಷ್ಣಮೂರ್ತಿ, ಶ್ರೀ ಎಸ್. ಮಹದೇವಯ್ಯ, ಹಾಗೂ ಶ್ರೀ ಕಾನ್ಯ ಶಿವಮೂರ್ತಿಯವರುಗಳಿದ್ದಾರೆ (1 ಜನವರಿ 2022)




ಸುತ್ತೂರು ಶ್ರೀಕ್ಷೇತ್ರದಲ್ಲಿ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ 1062ನೆಯ ಜಯಂತಿ ಮಹೋತ್ಸವದ ಮೆರವಣಿಗೆಗೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಚಾಲನೆ ನೀಡಲಾಯಿತು. ಹಲವಾರ, ವಾಟಾಳು, ಹೊಸಮಠ, ಕುದೇರು, ಗೌಡಹಳ್ಳಿ, ಮಾದಹಳ್ಳಿ, ಬರಡನಪುರ ಮಠಗಳ ಶ್ರೀಗಳು, ಜನಪ್ರತಿನಿಧಿಗಳು ಹಾಗೂ ಇತರರಿದ್ದಾರೆ (1 ಜನವರಿ 2022)



ಗುಂಡ್ಲುಪೇಟೆಯಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ಹಾಲಹಳ್ಳಿ ಸಂಗಮ ಪ್ರತಿಷ್ಠಾನ ಮತ್ತು ಗುಂಡ್ಲುಪೇಟೆ ತಾಲ್ಲೂಕು ವಿವಿಧ ಸಂಘಸಂಸ್ಥೆಗಳ ಸಹಯೋಗದಲ್ಲಿ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ನಡೆದ ಕುಡಿತ ಬಿಡಿಸುವ ಹನ್ನೊಂದನೆಯ ಉಚಿತ ಶಿಬಿರದ ಸಮಾರೋಪದಲ್ಲಿ ಶಿಬಿರಾರ್ಥಿಗಳು, ಸ್ವಯಂಸೇವಕರು ಮತ್ತು ಸಂಚಾಲಕರುಗಳಿದ್ದಾರೆ (3 ಜನವರಿ 2022)



ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಭವನದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ವಿಶ್ರಾಂತ ಕುಲಪತಿಗಳಾದ ಪ್ರೊ. ಎಸ್.ಆರ್. ನಿರಂಜನ ಮತ್ತು ಶ್ರೀಮತಿ ವಾಣಿ ನಿರಂಜನ ದಂಪತಿಗಳನ್ನು ಸನ್ಮಾನಿಸಲಾಯಿತು. ಶ್ರೀ ಶ್ರೀಕಂಠಸ್ವಾಮಿ, ಪ್ರೊ. ಸಿ. ಮನೋಹರಾಚಾರಿ, ಪ್ರೊ. ಎನ್.ಎಸ್. ರಾಜು, ವಿಧಾನಸಭೆ ವಿರೋಧಪಕ್ಷದ ನಾಯಕರಾದ ಶ್ರೀ ಸಿದ್ಧರಾಮಯ್ಯನವರು, ಶ್ರೀ ಮಂಜು, ಪ್ರೊ. ಕೆ.ಎಸ್. ರಂಗಪ್ಪ, ಡಾ. ಪಿ. ಸದಾಶಿವ, ಪ್ರೊ. ಅಮೃತೇಶ್, ಶ್ರೀ ಎಸ್. ಲೋಕೇಶ್, ಕುಲಪತಿಗಳಾದ ಪ್ರೊ. ಜಿ. ಹೇಮಂತಕುಮಾರ್, ಡಾ. ಎಸ್. ಸತೀಶ್ ಹಾಗೂ ಡಾ. ಎಸ್. ಉಮೇಶ್ ಮೊದಲಾದವರುಗಳಿದ್ದಾರೆ (3 ಜನವರಿ 2022)



ಕಲಬುರಗಿಯ ಜಿಡಗಾ ಶ್ರೀ ನವಕಲ್ಯಾಣ ಮಠದಲ್ಲಿ ಸತ್ಸಂಗ ಕಾರ್ಯಕ್ರಮದಲ್ಲಿ ಪರಮಪೂಜ್ಯ ಜಗದ್ಗುರುಗಳು ಹಾಗೂ ಡಾ. ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳ ಸಮ್ಮುಖದಲ್ಲಿ ಶ್ರೀಮಠದ ಕ್ಯಾಲೆಂಡರ್‌ನ್ನು ಬಿಡುಗಡೆಗೊಳಿಸಲಾಯಿತು. ಮಾಶಾಳ, ಚಿನ್ಮಯಗಿರಿ ಹಾಗೂ ಮಾದನಹಿಪ್ಪರಗಿ ಶ್ರೀಗಳಿದ್ದಾರೆ (7 ಜನವರಿ 2022)



ಕಲಬುರಗಿಯ ಶ್ರೀ ಶರಣಬಸವೇಶ್ವರ ದೇವಸ್ಥಾನಕ್ಕೆ ಪರಮಪೂಜ್ಯ ಜಗದ್ಗುರುಗಳು ದಯಮಾಡಿಸಿದ ಸಂದರ್ಭದಲ್ಲಿ ಪೀಠಾಧಿಪತಿಗಳಾದ ಡಾ. ಶ್ರೀ ಶರಣಬಸವಪ್ಪ ಅಪ್ಪ ಹಾಗೂ ಡಾ. ಶ್ರೀಮತಿ ದಾಕ್ಷಾಯಿಣಿ ಅಪ್ಪ, ಚಿ. ದೊಡ್ಡಪ್ಪ ಅಪ್ಪ, ಕು. ಶಿವಾನಿ, ಕು. ಭವಾನಿರವರುಗಳನ್ನು ಸನ್ಮಾನಿಸಿ ಆಶೀರ್ವದಿಸಿದರು. ಶ್ರೀ ಸುಲಫಲಮಠದ ಶ್ರೀ ಸಾರಂಗಧರ ದೇಶಿಕೇಂದ್ರ ಸ್ವಾಮಿಗಳು ಹಾಗೂ ಸೂಗೂರು ಶ್ರೀಗಳವರಿದ್ದಾರೆ (7 ಜನವರಿ 2022)



ಕಲಬುರಗಿ ಜಿಲ್ಲೆ ಆಳಂದದಲ್ಲಿ ಜೈ ಭಾರತ ಮಾತಾ ಸೇವಾ ಸಮಿತಿ ರಾಷ್ಟ್ರೀಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಹವಾ ಮಲ್ಲಿನಾಥ ಮಹಾರಾಜ್‌ರವರನ್ನು ಪರಮಪೂಜ್ಯ ಜಗದ್ಗುರುಗಳು ಅಭಿನಂದಿಸಿದರು. ಚುಂಚನಹಳ್ಳಿ, ಮಾದನಹಿಪ್ಪರಗಿ, ಚಿನ್ಮಯಗಿರಿ ಶ್ರೀಗಳು ಮೊದಲಾದವರಿದ್ದಾರೆ (7 ಜನವರಿ 2022)



ಮೈಸೂರು ಶ್ರೀ ಸುತ್ತೂರು ಮಠಕ್ಕೆ ವಸತಿ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿ ಸಚಿವರಾದ ಶ್ರೀ ವಿ. ಸೋಮಣ್ಣನವರು ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಆಶೀರ್ವದಿಸಿ ಸನ್ಮಾನಿಸಿದರು. ಮಾಜಿ ಶಾಸಕರಾದ ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ, ಸಂಸದರಾದ ಶ್ರೀ ಪ್ರತಾಪ ಸಿಂಹ ಮೊದಲಾದವರುಗಳಿದ್ದಾರೆ (24 ಜನವರಿ 2022)



ಮೈಸೂರಿನ ರಾಜೀವ್‌ನಗರದಲ್ಲಿ ಗಣರಾಜ್ಯೋತ್ಸವದ ಪ್ರಯುಕ್ತ ಕನ್ನಡ ಪ್ರೇಮಿ ಶ್ರೀ ಸೈಯದ್ ಇಸಾಕ್‌ರವರ ಮರುನಿರ್ಮಿತ ಸಾರ್ವಜನಿಕ ಗ್ರಂಥಾಲಯವನ್ನು ಶಾಲಾಮಕ್ಕಳಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಸೈಯದ್ ಇಸಾಕ್, ಸಂಸದರಾದ ಶ್ರೀ ಪ್ರತಾಪ ಸಿಂಹ ಹಾಗೂ ಮಾಜಿ ಮೇಯರ್ ಅಯೂಬ್ ಖಾನ್ ಮೊದಲಾದವರಿದ್ದಾರೆ (26 ಜನವರಿ 2022)



ಮೈಸೂರು ಶ್ರೀ ಸುತ್ತೂರು ಮಠಕ್ಕೆ 2021ರ ಕರ್ನಾಟಕ ಜಾನಪದ ಆಕಾಡೆಮಿ ಗೌರವ ಪ್ರಶಸ್ತಿಗೆ ಭಾಜನರಾಗಿರುವ ಹಿರಿಯ ಜಾನಪದ ಕಲಾವಿದರುಗಳಾದ ಶ್ರೀ ಕಂಸಾಳೆ ಮಹಾದೇವು ಹಾಗೂ ಶ್ರೀ ಮಳವಳ್ಳಿ ಮಹಾದೇವಸ್ವಾಮಿಯವರುಗಳು ಭೇಟಿ ನೀಡಿದ್ದಾಗ ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಆಶೀರ್ವದಿಸಿದರು (26 ಜನವರಿ 2022)



ಸುತ್ತೂರು ಶ್ರೀಕ್ಷೇತ್ರದಲ್ಲಿ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಅಂಗವಾಗಿ ನೆರವೇರಿದ ಧಾರ್ಮಿಕ ಆಚರಣೆಗಳ ಸಂದರ್ಭದಲ್ಲಿ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ ಮತ್ತು ಶ್ರೀಮತಿ ದುಗ್ಗಹಟ್ಟಿ ಸುಂದರಮ್ಮ ವೀರಭದ್ರಪ್ಪ ಪ್ರತಿಷ್ಠಾನದ ಸಹಯೋಗದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಸಾಧಕ ರೈತರನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಪ್ರಶಸ್ತಿ ಹಾಗೂ ನಗದು ಬಹುಮಾನಗಳನ್ನು ನೀಡಿ ಸನ್ಮಾನಿಸಲಾಯಿತು. ಚಿತ್ರದಲ್ಲಿ ವಾಟಾಳು ಶ್ರೀಗಳು, ದುಗ್ಗಹಟ್ಟಿ ಶ್ರೀ ವೀರಭದ್ರಪ್ಪ ಮತ್ತು ಕುಟುಂಬ ವರ್ಗದವರು ಹಾಗೂ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಸಿಬ್ಬಂದಿವರ್ಗದವರಿದ್ದಾರೆ (30 ಜನವರಿ 2022)



ಶ್ರೀ ಮಲೆ ಮಹದೇಶ್ವರ ಬೆಟ್ಟದಲ್ಲಿ ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಹಾಗೂ ಶ್ರೀ ಸಾಲೂರು ಮಠದ ಮಲೆ ಮಹದೇಶ್ವರ ಕೃಪಾ ಎಜುಕೇಷನ್ ಸೊಸೈಟಿಗಳ ಸಂಯಕ್ತಾಶ್ರಯದಲ್ಲಿ ಜರುಗಿದ ಶ್ರೀ ಮಹದೇಶ್ವರರು ಮತ್ತು ಜಾನಪದ ಸಂಸ್ಕೃತಿ ವಿಚಾರ ಸಂಕಿರಣ ಹಾಗೂ ಗಡಿನಾಡು ಸಾಂಸ್ಕೃತಿಕ ಉತ್ಸವವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಸಾಲೂರು ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು, ಡಾ. ಸಿ. ಸೋಮಶೇಖರ್, ಶ್ರೀ ಕಾತ್ಯಾಯಿನಿದೇವಿ, ಶಾಸಕರಾದ ಶ್ರೀ ಆರ್. ನರೇಂದ್ರ ಹಾಗೂ ಶ್ರೀ ಜಯವಿಭವಸ್ವಾಮಿರವರುಗಳಿದ್ದಾರೆ (5 ಫೆಬ್ರವರಿ 2022)



ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕು ಚಿಮ್ಮನಹಳ್ಳಿಯ ಮಹಾಮಹಿಮ ಶ್ರೀ ಮುನೀಶ್ವರಸ್ವಾಮಿ ಮಹಾಸಂಸ್ಥಾನ ದಾಸೋಹ ಮಠದ ಶ್ರೀ ಮುನೀಶ್ವರಸ್ವಾಮಿ ನೂತನ ಶಿಲಾ ದೇವಾಲಯದ ಲೋಕಾರ್ಪಣಾ ಕಾರ್ಯಕ್ರಮಗಳಿಗೆ ಪರಪಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಚಾಲನೆ ನೀಡಲಾಯಿತು. ಹೊಸದುರ್ಗದ ಶ್ರೀ ಈಶ್ವರಾನಂದಪುರಿ ಸ್ವಾಮಿಗಳು, ಚಿತ್ರದುರ್ಗದ ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮಿಗಳು, ಡಾ. ಶ್ರೀ ಅಭಿನವ ದೇಶಿಕೇಂದ್ರ ಮಲ್ಲಿಕಾರ್ಜುನ ಸ್ವಾಮಿಗಳು, ಶ್ರಿ ಸಿ.ಎ. ಶಿವಪ್ಪ ಹಾಗೂ ಶ್ರೀ ಸಿ.ಎ. ರಂಗಯ್ಯ ಮೊದಲಾದವರುಗಳಿದ್ದಾರೆ (10 ಫೆಬ್ರವರಿ 2022)



ಟಿ. ನರಸೀಪುರ ತಾಲ್ಲೂಕು ಚಿದರವಳ್ಳಿ–ಬೊಮ್ಮನಹಳ್ಳಿಯ ಶ್ರೀ ಸಿದ್ಧರಹಳ್ಳಿ ಪಾರಮಾರ್ಥ ಗವಿಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳ ನಿರಂಜನ ನಿರಾಭಾರಿ ಪಟ್ಟಾಧಿಕಾರ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಧಾರ್ಮಿಕ ಸಭೆಯನ್ನು ಪರಮಪೂಜ್ಯ ಜಗದ್ಗುರುಗಳು ಹಾಗೂ ಶ್ರೀ ಆದಿಚುಂಚನಗಿರಿ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ಜ್ಯೋತಿ ಬೆಳಗಿಸಿ ಉದ್ಘಾಟಿಸಲಾಯಿತು. ಶ್ರೀಮತಿ ಸುನಂದ ಪಾಲನೇತ್ರ, ಶ್ರೀ ಎಂ. ರುದ್ರೇಶ್, ಮರಳೇಗವಿಮಠ ಶ್ರೀಗಳು, ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು, ಶ್ರೀ ಬಿ.ವೈ. ವಿಜಯೇಂದ್ರ, ಶ್ರೀ ಎಸ್. ಲಿಂಗಮೂರ್ತಿ, ಶ್ರೀ ಎಂ. ಅಪ್ಪಣ್ಣ, ಶ್ರೀ ಕಾ.ಪು. ಸಿದ್ಧಲಿಂಗಸ್ವಾಮಿ ಮೊದಲಾದವರಿದ್ದಾರೆ (11 ಫೆಬ್ರವರಿ 2022)



ದೆಹಲಿಯಲ್ಲಿ ನಡೆದ 73ನೇ ಗಣರಾಜ್ಯೋತ್ಸವದಲ್ಲಿ ಭಾಗವಹಿಸಿದ್ದ ಮೈಸೂರು ವಿಭಾಗದ ಎನ್‌ಸಿಸಿ ಕೆಡೆಟ್‌ಗಳು ಸುತ್ತೂರು ಶ್ರೀಕ್ಷೇತ್ರಕ್ಕೆ ಆಗಮಿಸಿದ್ದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಆಶೀರ್ವದಿಸಿ ಸನ್ಮಾನಿಸಿದರು. ಪ್ರೊ. ಬಿ.ವಿ. ಸಾಂಬಶಿವಯ್ಯ, ಎನ್‌ಸಿಸಿ ಅಧಿಕಾರಿಗಳು ಹಾಗೂ ವಿದ್ಯಾರ್ಥಿಗಳ ಪೋಷಕರುಗಳಿದ್ದಾರೆ (12 ಫೆಬ್ರವರಿ 2022)



ಬೆಂಗಳೂರು ಗವಿಪುರಂನಲ್ಲಿರುವ ಗೋಸಾಯಿ ಮಹಾಸಂಸ್ಥಾನಮಠದ ನೂತನ ಶ್ರೀಗಳಾದ ಶ್ರೀ ಮಂಜುನಾಥ ಭಾರತೀ ಸ್ವಾಮಿಗಳನ್ನು ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಶುಭ ಹಾರೈಸಿದರು. ಶ್ರೀ ಸಿಂಗ್, ಮರಾಠ ಸಮಾಜದ ಅಧ್ಯಕ್ಷರು, ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ದೀಕ್ಷಿತರು, ಕಾಶಿ ಶ್ರೀಗಳು ಹಾಗು ಇತರರು ಉಪಸ್ಥಿತರಿದ್ದರು (15 ಫೆಬ್ರವರಿ 2022)



ಕನಕಪುರ ಶ್ರೀ ದೇಗುಲಮಠದ ಶ್ರೀ ಆದಿ ನಿರ್ವಾಣ ಮಹಾಶಿವಯೋಗಿಗಳವರ ರಥೋತ್ಸವಕ್ಕೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಚಾಲನೆ ನೀಡಲಾಯಿತು. ಶ್ರೀ ದೇಗುಲ ಮಠದ ಶ್ರೀ ಚನ್ನಬಸವ ಸ್ವಾಮಿಗಳು, ವಿವಿಧ ಮಠಗಳ ಶ್ರೀಗಳಿದ್ದಾರೆ (16 ಫೆಬ್ರವರಿ 2022)




ಜೆಎಸ್ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಎಸ್‌ಜೆಸಿಇ–ಸ್ಟೆಪ್ ಸಂಸ್ಥೆ ಹಾಗೂ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಸಂಯುಕ್ತಾಶ್ರಯದಲ್ಲಿ ನಡೆದ ಮೈಸೂರಿನ ಪ್ರಥಮ ಚಿಪ್ ಡಿಸೈನ್ ಸೆಂಟರ್ ಪ್ರೊಕ್ಸೆಲರ್ ಕಂಪನಿಯ ವಿಎಲ್ಎಸ್ಐ ವಿನ್ಯಾಸ ಕೇಂದ್ರವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಡಾ. ಬಿ. ಸುರೇಶ್, ಶ್ರೀ ಸಂಜೀವ್ ಗುಪ್ತ, ಡಾ. ಸಿ.ಜಿ. ಬೆಟಸೂರಮಠ, ಶ್ರೀ ಅಜಿತ್ ಪೈ, ಶ್ರೀ ಜ್ಯೋತಿರ್ಗಣೇಶ್, ಶ್ರೀಮತಿ ಮಹೇಶ್ವರಿ, ಶ್ರೀಮತಿ ವಿದ್ಯಾ ಪಟೇಲ್, ಶ್ರೀ ಹೆಚ್.ಆರ್. ಮಹದೇವಸ್ವಾಮಿ, ಶ್ರೀ ರಾಘವೇಂದ್ರ ಮೋಹನ್, ಶ್ರೀ ರವಿಶಂಕರ್ ರಾವ್, ಶ್ರೀ ಬಿ. ಶಿವಶಂಕರ್, ಡಾ. ಧನರಾಜ್, ಡಾ. ಎಸ್.ಬಿ. ಕಿವಡೆರವರುಗಳಿದ್ದಾರೆ (19 ಫೆಬ್ರವರಿ 2022)




ಮೈಸೂರು ಜೆಎಸ್ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿಯು ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಹಯೋಗದಲ್ಲಿ ರಾಷ್ಟ್ರೀಯ ವಿಜ್ಞಾನ ಸಪ್ತಾಹದ ಪ್ರಯುಕ್ತ ಏರ್ಪಡಿಸಿದ ಸೈನ್ಸ್ ಆನ್ ವೀಲ್ಸ್ ಕಾರ್ಯಕ್ರಮಕ್ಕೆ ಪರಮ ಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಚಾಲನೆ ನೀಡಲಾಯಿತು. ಡಾ. ಬಿ. ಸುರೇಶ್, ಡಾ. ಪ್ರಶಾಂತ್ ವಿಶ್ವನಾಥ್, ಶಾಸಕರಾದ ಶ್ರೀಮತಿ ರೂಪಾಲಿ ನಾಯ್ಕ್, ಡಾ. ಸಿ.ಜಿ. ಬೆಟಸೂರಮಠ, ಡಾ. ಸುರೀಂದರ್ ಸಿಂಗ್, ಶ್ರೀ ಎಸ್.ಪಿ. ಮಂಜುನಾಥ್, ಡಾ. ಬಿ. ಮಂಜುನಾಥ್, ಡಾ. ಎಸ್.ಪಿ. ಧನಬಾಲ್ ಮೊದಲಾದವರುಗಳಿದ್ದಾರೆ (21 ಫೆಬ್ರವರಿ 2022)



ಹುಣಸೂರು ತಾಲ್ಲೂಕು ಕೊಳುವಿಗೆ ಗ್ರಾಮದಲ್ಲಿ ಜೀರ್ಣೋದ್ಧಾರಗೊಂಡ ಶ್ರೀ ರಾಮಲಿಂಗೇಶ್ವರ ಸ್ವಾಮಿ ದೇವಾಲಯವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಉದ್ಘಾಟಿಸಲಾಯಿತು. ಶ್ರೀ ಜಿ.ಡಿ. ಹರೀಶಗೌಡ, ಶ್ರೀಮತಿ ಅರ್ಪಿತ ಸಿಂಹ, ಶ್ರೀ ಸಿ.ಹೆಚ್. ವಿಜಯ್‌ಶಂಕರ್, ಮಾದಹಳ್ಳಿ ಶ್ರೀಗಳು, ಗಾವಡಗೆರೆ ಶ್ರೀಗಳು, ಶ್ರೀಮತಿ ರತ್ನಮ್ಮ ಪ್ರೇಮಕುಮಾರ್, ಶ್ರೀ ಎಚ್.ಎನ್. ಪ್ರೇಮಕುಮಾರ್ ಶ್ರೀ ಎಚ್.ಪಿ. ಅಮರನಾಥ್, ಶ್ರೀ ಸೋಮಶೇಖರ್ ಮೊದಲಾದವರುಗಳಿದ್ದಾರೆ (21 ಫೆಬ್ರವರಿ 2022)



ಮೈಸೂರು ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದಲ್ಲಿ ರಾಷ್ಟ್ರೀಯ ಮಟ್ಟದ ಸೈನ್ಸ್–ಟೆಕ್ ಫೆಸ್ಟ್ 2.0 ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಪ್ರೊ. ಎಸ್. ಅಯ್ಯಪ್ಪನ್‌ರವರು ಜ್ಯೋತಿ ಬೆಳಗಿಸಿ ಉದ್ಘಾಟಿಸಿದರು. ಡಾ. ಹೆಚ್. ಹೊನ್ನೇಗೌಡ, ಡಾ. ಪಿ. ಮಲ್ಲು, ಡಾ. ಸಿ.ಜಿ. ಬೆಟಸೂರಮಠ, ಡಾ. ಎಸ್.ಎ. ಧನರಾಜ್ ಹಾಗೂ ಡಾ. ಎಸ್.ಬಿ. ಕಿವಡೆಯವರುಗಳಿದ್ದಾರೆ ( 25 ಫೆಬ್ರವರಿ 2022)



ಸುತ್ತೂರು ಶ್ರೀಕ್ಷೇತ್ರದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಕಬ್ಬಹಳ್ಳಿ ಸುತ್ತೂರು ಶಾಖಾ ಶ್ರೀ ಪಟ್ಟದಮಠದ ಪಟ್ಟಾಧಿಕಾರ ಮಹೋತ್ಸವ ಸಂದರ್ಭದಲ್ಲಿ ನೂತನ ಶ್ರೀಗಳಾದ ಶ್ರೀ ಗುರುಸಿದ್ದ ಸ್ವಾಮಿಗಳಿಗೆ ಆಶೀರ್ವದಿಸುತ್ತಿರುವುದು. ಕಬ್ಬಹಳ್ಳಿ ಮಠದ ಹಿರಿಯ ಶ್ರೀಗಳಾದ ಶ್ರೀ ಚನ್ನಬಸವ ಸ್ವಾಮಿಗಳು ಹಾಗೂ ಇತರರಿದ್ದಾರೆ (26 ಫೆಬ್ರವರಿ 2022)




ಮೈಸೂರಿನಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಕರ್ನಾಟಕ ಯಕ್ಷಗಾನ ಅಕಾಡೆಮಿ ಮತ್ತು ಕನ್ನಡ ಸಾಹಿತ್ಯ ಕಲಾಕೂಟಗಳ ಸಹಯೋಗದಲ್ಲಿ ನಡೆದ ಯಕ್ಷ ಸಂಭ್ರಮ 2022 ಕಾರ್ಯಕ್ರಮದಲ್ಲಿ ಯಕ್ಷಗಾನ ಕವಿಗಳ ಚಿತ್ರಕಾವ್ಯ ಮತ್ತು ಮೂಡಲಪಾಯ ಯಕ್ಷಗಾನ ಪ್ರಸಂಗ ಕೃತಿಗಳನ್ನು ಬಿಡುಗಡೆಗೊಳಿಸಲಾಯಿತು. ಚಿತ್ರದಲ್ಲಿ ಶ್ರೀ ಜಗದೀಶ್ ಹೆಬ್ಬಾರ್ ಕಾರಿಜ, ಶ್ರೀ ಶ್ರೀನಿವಾಸ ಸಾಸ್ತಾನ, ಶ್ರೀ ಎಂ. ಚಂದ್ರಶೇಖರ್, ಡಾ. ಜಿ.ಎಲ್. ಹೆಗಡೆ, ಶ್ರೀ ಅಡ್ಡಂಡ ಸಿ. ಕಾರ್ಯಪ್ಪ, ಶ್ರೀ ಜಿ.ಎಸ್. ಭಟ್ಟ, ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, ಶ್ರೀ ದಿವಾಕರ ಹೆಗಡೆ, ಶ್ರೀ ಚಿಕ್ಕಚೌಡಯ್ಯ ನಾಯ್ಕರವರುಗಳಿದ್ದಾರೆ (26 ಫೆಬ್ರವರಿ 2022)





ಕಲಬುರಗಿ ಜಿಲ್ಲೆ ಆಳಂದದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ವತಿಯಿಂದ ನಿರ್ಮಿಸಿರುವ ವೀರಶೈವ–ಲಿಂಗಾಯತ ಭವನವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಜ್ಯೋತಿ ಬೆಳಗಿಸಿ ಉದ್ಘಾಟಿಸಲಾಯಿತು. ಶ್ರೀ ಅಲ್ಲಮಪ್ರಭು ಪಾಟೀಲ, ಶ್ರೀ ಶರಣುಕುಮಾರ ಮೋದಿ ಡಾ. ಶರಣಪ್ರಕಾಶ ಪಾಟೀಲ, ಶ್ರೀ ಈಶ್ವರ ಬಿ. ಖಂಡ್ರೆ, ಮಾಜಿ ಉಪಸಭಾಪತಿಗಳಾದ ಶ್ರೀ ಬಿ.ಆರ್. ಪಾಟೀಲ, ಕೇಂದ್ರ ಸಚಿವರಾದ ಶ್ರೀ ಭಗವಂತ ಖೂಬಾ, ಶಾಸಕರಾದ ಶ್ರೀ ಎಂ.ವೈ. ಪಾಟೀಲರವರುಗಳಿದ್ದಾರೆ. (7 ಜನವರಿ 2022)



ಮೈಸೂರು ಶ್ರೀ ಸುತ್ತೂರು ಮಠಕ್ಕೆ ಕಾನ್ಪುರ ಗುರುಕುಲದ ವೈದಿಕ ವಿದ್ವಾಂಸರು, ವ್ಯಾಕರಣ ಆಚಾರ್ಯರು ಮತ್ತು ತತ್ತ್ವಜ್ಞಾನಿಗಳಾದ ಶ್ರೀ ಆಚಾರ್ಯ ಪ್ರದ್ಯುಮ್ನಜಿಯವರು ಭೇಟಿ ನೀಡಿ ಪರಮಪೂಜ್ಯ ಜಗದ್ಗುರುಗಳವರೊಂದಿಗೆ ಸಮಾಲೋಚಿಸಿದರು. ಶ್ರೀ ದಿವ್ಯ ಜ್ಞಾನಾನಂದ ಸ್ವಾಮಿಗಳು ಮೊದಲಾದವರಿದ್ದಾರೆ (25 ಜನವರಿ 2022)

Registered with the Registrar of Newspapers in India Under No. 50622/86
'Prasada' Bi-Monthly, Vol. 37 Issue No. 1, January-February 2022




ಮೈಸೂರಿನ ಕಲಾಮಂದಿರದಲ್ಲಿ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ಪರಮಪೂಜ್ಯ ಜಗದ್ಗುರುಗಳವರ ಸಾನ್ನಿಧ್ಯದಲ್ಲಿ ನಡೆದ ವಿಶ್ವ ರೈತ ದಿನಾಚರಣೆಯ ರಾಜ್ಯಮಟ್ಟದ ಸಮಾವೇಶ ಹಾಗೂ ಕುರುಬೂರು ಶಾಂತಕುಮಾರ್‌ರವರ ಅಭಿನಂದನಾ ಸಮಾರಂಭದಲ್ಲಿ ರೈತಧ್ವನಿ ವಿಶೇಷಾಂಕ ಹಾಗೂ ಹಸಿರು ಹೊನ್ನು ಸ್ಮರಣ ಸಂಚಿಕೆಗಳನ್ನು ಬಿಡುಗಡೆಗೊಳಿಸಲಾಯಿತು. ಶ್ರೀ ರವಿ ಹೆಗ್ಡೆ, ಪ್ರೊ. ಎಸ್. ಶಿವರಾಜಪ್ಪ, ಶ್ರೀ ಅಶೋಕ್ ದಳವಾಯಿ, ಶ್ರೀ ಟಿ.ವಿ. ಗೋಪಿನಾಥ್, ಶ್ರೀ ಎಚ್.ಆರ್. ರಂಗನಾಥ್, ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ ಬೊಮ್ಮಾಯಿ, ಶ್ರೀ ಕುರುಬೂರು ಶಾಂತಕುಮಾರ್, ಶ್ರೀ ದೈವ ಶಿಗಾಮಣಿಯವರುಗಳಿದ್ದಾರೆ (26 ಡಿಸೆಂಬರ್ 2021)

ಬಿಡಿ ಪ್ರತಿ: ರೂ. 10

e-mail: prasadamagazine@gmail.com * www.jssonline.org